ಚರ್ಮ ರೋಗಗಳು

ಡಾ|| ಎನ್. ಕೃಷ್ಣಮೂರ್ತಿ



ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಚರ್ಮ ರೋಗಗಳು

ಡಾ॥ ಎನ್. ಕೃಷ್ಣಮೂರ್ತಿ

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

CHARMA ROGAGALU : by Dr. N. Krishnamurthy, Retd. Principal of Karnataka Medical College, Hubli, Published by Prasaranga, Bangalore University, Bangalore-56. Pp. 96+x

Published under the Centrally sponsored scheme of production of books and literature in regional languages at the University level with the assistance of Government of India in the Ministry of Education and Social Welfare, New Delhi.

ಪ್ರಧಾನ ಸಂಪಾದಕರು :
ಡಾ॥ ಡಿ. ಎಸ್. ಶಿವಪ್ಪ

ಸಹಾಯಕರು :
ಅಂದನೂರು ಶೋಭ

ಪ್ರಕಾಶಕರು :
ಕೆ. ಸಿ. ಶಿವಪ್ಪ
ಉಪ ನಿರ್ದೇಶಕ, ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560 056

ಬೆಲೆ : ರೂ. 4–25

ಮುದ್ರಣ :
ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ, ಬೆಂಗಳೂರು

ಮೊದಲ ಮಾತು

ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗ ಕನ್ನಡ ಮಾಧ್ಯಮದ ಆವಶ್ಯಕತೆಯನ್ನು ಪೂರೈಸುವ ಸಲುವಾಗಿ ಈಗಾಗಲೇ ಪಠ್ಯಪುಸ್ತಕಗಳನ್ನು ಸಿದ್ಧಪಡಿಸಿ ಪ್ರಕಟಿಸುತ್ತಿದೆ. ಇದರ ಜೊತೆಗೆ ವಿಶ್ವವಿದ್ಯಾಲಯವು ಸಾರ್ವಜನಿಕರಿಗಾಗಿ ವರ್ಷಾದ್ಯಂತವೂ ಏರ್ಪಡಿಸುವ ಪ್ರಚಾರೋಪನ್ಯಾಸಗಳನ್ನೂ, ವಿಶೇಷೋಪನ್ಯಾಸಗಳನ್ನೂ ಪುಸ್ತಕ ರೂಪದಲ್ಲಿ ಪ್ರಕಟಿಸುತ್ತಿದೆ; ಈ ಪಂಕ್ತಿಗೆ ಇದೀಗ ಬೆಂಗಳೂರು ವಿಶ್ವವಿದ್ಯಾಲಯ ವಿವಿಧ ಅಧ್ಯಯನ ಶಾಖೆಗಳು ಕೈಗೊಳ್ಳುವ ವೈಯಕ್ತಿಕ ಹಾಗೂ ಸಾಮೂಹಿಕ ಸಂಶೋಧನಾತ್ಮಕ ವ್ಯವಸಾಯಕ್ಕೆ ಗ್ರಂಥ ರೂಪದ ಅಭಿವ್ಯಕ್ತಿಯನ್ನು ಕೊಡುವ ಕಾರ್ಯವು ಸೇರುತ್ತಿದೆ. ಇದರಿಂದಾಗಿ ವಿಶ್ವವಿದ್ಯಾಲಯದ ಒಂದೊಂದು ಅಧ್ಯಯನ ಶಾಖೆಯ ಅಧ್ಯಾಪಕರ ಸಂಶೋಧನಾತ್ಮಕ ಪ್ರವೃತ್ತಿಗಳಿಗೆ ತಕ್ಕಮಟ್ಟಿನ ಪ್ರೇರಣೆಯೂ ದೊರೆಯುತ್ತದೆ. ಇದೇ ರೀತಿ ವಿವಿಧ ವಿಷಯಗಳಲ್ಲಿ ಪರಿಣತರಾಗಿರುವವರಿಂದಲೂ ಪ್ರಸಾರಾಂಗವು ಪುಸ್ತಕಗಳನ್ನು ಬರೆಯಿಸಿ ಪ್ರಕಟಿಸುತ್ತಿದೆ.

ದಿನದಿನಕ್ಕೆ ಮಾನವಿಕ ಮತ್ತು ವೈಜ್ಞಾನಿಕ ಜ್ಞಾನ ಭರದಿಂದ ಬೆಳೆಯುತ್ತಿದೆ. ಆರೋಗ್ಯದ ಬಗ್ಗೆ ಜನಸಾಮಾನ್ಯರಿಗೆ ಅರಿವನ್ನುಂಟುಮಾಡಿಸುವ ಸಲುವಾಗಿ ನಮ್ಮ ನಾಡಿನ ಪ್ರಸಿದ್ಧ ವೈದ್ಯರಿಂದ 'ಆರೋಗ್ಯ' ಮಾಲೆಯಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ಬರೆಯಿಸಿ, ಪ್ರಕಟಿಸುವ ಒಂದು ಯೋಜನೆಯನ್ನು ಈಗ ವಿಶ್ವವಿದ್ಯಾಲಯ ಕೈಗೊಂಡಿದೆ. ಈ ಯೋಜನೆಯಲ್ಲಿ "ಚರ್ಮ ರೋಗಗಳು" ಕೃತಿಯನ್ನು ಬರೆದಿರುವ ಡಾ॥ ಕೃಷ್ಣಮೂರ್ತಿ ಅವರು ಪ್ರಸಿದ್ಧ ವೈದ್ಯರು. ಅವರ ಸಹಕಾರಕ್ಕಾಗಿ ನಾನು ಆಭಾರಿ.

ತ. ರಾ. ಜಯರಾಮನ್

ಉಪ-ಕುಲಪತಿ

ನಾಲ್ಕು ಮಾತು

ಕನ್ನಡ ಸಾಹಿತ್ಯವನ್ನು ಅಭಿವೃದ್ಧಿಪಡಿಸುವ ಸುದುದ್ದೇಶದಿಂದ ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗ ಪಠ್ಯ ಹಾಗೂ ಪಠ್ಯೇತರ ಹೊತ್ತಿಗೆಗಳನ್ನು ಪ್ರಕಟಿಸುವುದರ ಜೊತೆಗೆ ಇತರೆ ವಿಷಯದಲ್ಲಿ ಪ್ರಸಿದ್ಧರಾದ ವಿದ್ವಾಂಸರಿಂದ ಗ್ರಂಥಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಕಾರ್ಯವನ್ನು ನಿರ್ವಹಿಸುತ್ತಿದೆ. ಆಧುನಿಕ ಕನ್ನಡ ಸಾಹಿತ್ಯದ ಆವರಣಕ್ಕೆ ಅಗತ್ಯವಾದ ಹಾಗೂ ಜನಸಾಮಾನ್ಯರಿಗೆ ಜ್ಞಾನವನ್ನು ನೀಡಬಲ್ಲ ಸಾಹಿತ್ಯ, ಕಲೆ, ವಿಜ್ಞಾನ, ತತ್ತ್ವಶಾಸ್ತ್ರ, ಚರಿತ್ರೆ, ಧರ್ಮ, ನೀತಿ, ಸಂಸ್ಕೃತಿ, ಜಾನಪದ, ಸಾಮಾಜಿಕ ಹಾಗೂ ಮಾನವಿಕ ಶಾಸ್ತ್ರ ಮುಂತಾದ ವಿಷಯಗಳ ಮೇಲೆ ಸ್ವತಂತ್ರವಾಗಿಯೋ, ಭಾಷಾಂತರದ ಮೂಲಕವೋ ಅಥವಾ ಸಂಕಲನದ ಮೂಲಕವೋ ಸರಳ ಹಾಗೂ ಖಚಿತವಾದ ಹೊಸಗನ್ನಡ ಶೈಲಿಯ ಮೂಲಕ ಪ್ರಸಾರಾಂಗ ಈಗಾಗಲೇ ಅನೇಕ ಹೊತ್ತಿಗೆಗಳನ್ನು ಪ್ರಕಟಿಸಿದೆ; ಇನ್ನು ಮುಂದೆ ಸಹ ಇಂಥ ಹಲವಾರು ವಿಷಯಗಳ ಮೇಲೆ ಮಹತ್ತರವಾದ ಹೊತ್ತಿಗೆಗಳನ್ನು ಹೊರತರಲಿದೆ.

ಜನಸಾಮಾನ್ಯರನ್ನು ದೃಷ್ಟಿಯಲ್ಲಿಟ್ಟುಕೊಂಡು 'ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ'ಯನ್ನು ಹತ್ತು ಸಂಪುಟಗಳಲ್ಲಿ ಈಗಾಗಲೇ ಪ್ರಸಾರಾಂಗ ಪ್ರಕಟಿಸಿದೆ. ಇದೇ ರೀತಿ 'ಆರೋಗ್ಯ' ಕುರಿತು ಜನಸಾಮಾನ್ಯರಿಗೆ ಸರಳವಾದ ರೀತಿಯಲ್ಲಿ ತಿಳಿಯಪಡಿಸುವ ಉದ್ದೇಶದಿಂದ 'ಆರೋಗ್ಯಮಾಲೆ'ಯನ್ನು ಪ್ರಕಟಿಸಲು ಯೋಜಿಸಲಾಗಿದೆ. ಈ ಮಾಲೆಯ ಪ್ರಧಾನ ಸಂಪಾದಕರಾದ ಡಾ॥ ಡಿ. ಎಸ್. ಶಿವಪ್ಪ ಅವರಿಗೂ ಈ ಕೃತಿಯನ್ನು ಬರೆದುಕೊಟ್ಟು ಸಹಕರಿಸಿದ ಡಾ॥ ಎನ್. ಕೃಷ್ಣಮೂರ್ತಿ ಅವರಿಗೂ ಹಾರ್ದಿಕ ವಂದನೆಗಳು.

ಕೆ. ಸಿ. ಶಿವಪ್ಪ

ಉಪ-ನಿರ್ದೇಶಕರು, ಪ್ರಸಾರಾಂಗ

ಸಂಪಾದಕನ ಮಾತು

ಉಳಿದೆಲ್ಲ ವಿಜ್ಞಾನಗಳಲ್ಲಿ ಆಗಿರುವಂತೆ ವೈದ್ಯ ವಿಜ್ಞಾನಗಳಲ್ಲೂ ಕಳೆದ ಮಹಾ ವಿಶ್ವಯುದ್ಧದಿಂದ ಈಚೆಗೆ ಅಗಾಧ ಮುನ್ನಡೆಗಳಾಗಿವೆ. ಮಾನವನ ಆರೋಗ್ಯಪಾಲನೆ, ರೋಗಚಿಕಿತ್ಸೆಗಳಲ್ಲೂ ಪವಾಡವೆನಿಸುವಷ್ಟು ಸಂಶೋಧನೆಗಳಾಗಿ ಹೊಸ ಪದ್ಧತಿಗಳು ಬಳಕೆಗೆ ಬರುತ್ತಿವೆ. ಕೇವಲ ಕಲೆಯಾಗಿ ಉಳಿದಿದ್ದ ವೈದ್ಯಶಾಸ್ತ್ರ ಈಗ ವಿಜ್ಞಾನವಾಗುತ್ತಿದೆ.

ಆರೋಗ್ಯ ಮತ್ತು ರೋಗ ವಿಚಾರಗಳನ್ನು ಜನರಿಗೆ ವೈದ್ಯರು ಹೆಚ್ಚು ಹೆಚ್ಚಾಗಿ ತಿಳಿಸಿಕೊಡುವುದರ ಅನುಕೂಲತೆಯನ್ನು ಕಂಡುಕೊಳ್ಳುತ್ತಿರುವರು. ತಿಳಿದುಕೊಳ್ಳಲು ಜನರೂ ಅಷ್ಟೇ ಆಸಕ್ತಿ, ಕುತೂಹಲ ತೋರುತ್ತಿದ್ದಾರೆ. ರೋಗಗಳು ಬಂದ ಮೇಲೆ ಚಿಕಿತ್ಸೆಯನ್ನು ಕೈಗೊಳ್ಳುವುದಕ್ಕಿಂತಲೂ, ಬಾರದಂತೆ ಮುನ್ನೆಚ್ಚರಿಕೆ ವಹಿಸುವುದರಿಂದ, ಹೊತ್ತು, ಹಣ ಮತ್ತು ಪ್ರಾಣಗಳು ಬರಿದೇ ಹಾಳಾಗುವುದನ್ನು ತಪ್ಪಿಸಬಹುದು. ರೋಗ ನಿರೋಧದ ಮಹಾ ಸಾಧನೆಗಳನ್ನು ಸಾಮಾನ್ಯವಾಗಿ ಯಾರೂ ಗಮನಿಸಿ ಗುರುತಿಸುವುದಿಲ್ಲ. ಏಕೆಂದರೆ ಅದು ನಕಾರಾತ್ಮಕ. ಅದೇ ಒಂದು ಮಹಾ ರೋಗಕ್ಕೆ ಸಿದ್ಧೌಷಧ ಗೊತ್ತಾದರೆ ಭಾರಿ ಸುದ್ದಿಯಾಗುತ್ತದೆ.

ಅನೇಕ ರೋಗ ನಿರೋಧ ಕ್ರಮಗಳೂ ರೋಗ ಚಿಕಿತ್ಸೆಗಳೂ ಕೈಗೂಡಲು, ವೈದ್ಯರೊಂದಿಗೆ ರೋಗಿಗಳ ನೆರವು ಅತ್ಯಗತ್ಯ. ತಮ್ಮ ಆರೋಗ್ಯವನ್ನು ತಾವೇ ಕಾಪಾಡಿಕೊಳ್ಳುವಂತೆ ರೋಗಿಗಳಿಗೆ ವೈದ್ಯರು ಚೆನ್ನಾಗಿ ಹೇಳಿಕೊಡಬೇಕೆಂದು ಆಧುನಿಕ ವೈದ್ಯ ವಿಜ್ಞಾನದ ಪಿತಾಮಹ ಎನಿಸಿರುವ ಹಿಪ್ಪೊಕ್ರೆಟಿಸ್ 24 ಶತಮಾನಗಳ ಹಿಂದೆಯೇ ಹೇಳಿರುವನು. ಆದರೂ, ಈಚಿನತನಕ ರೋಗಿಗಳನ್ನು ಅವರ ರೋಗ, ಚಿಕಿತ್ಸೆಗಳ ವಿಚಾರದಲ್ಲಿ ಆದಷ್ಟೂ ಅಜ್ಞಾನಿಗಳಾಗಿ ಇರಿಸುವುದೇ ಸರಿಯೆಂಬ ಭಾವನೆ ಬಹುಪಾಲು ವೈದ್ಯರಲ್ಲಿತ್ತು. ಅವರಿಗೆ ಗೊತ್ತಾಗದಿರಲೆಂದು ಚಿಕಿತ್ಸೆಯನ್ನೂ ಗ್ರೀಕು, ಲ್ಯಾಟಿನ್ನುಗಳಲ್ಲೇ ನಿಯಮಿಸುತ್ತಿದ್ದರು. ಇದೀಗ ಬದಲಾಗಿ ಇಂಗ್ಲಿಷಲ್ಲೇ ನಡೆಯುತ್ತಿದೆ.


ರೋಗವಿಲ್ಲದ್ದೇ ಆರೋಗ್ಯ ಎನ್ನುವ ಕಾಲ ಹೋಯಿತು. ಈಗ ಸಂಪೂರ್ಣ ದೈಹಿಕ, ಮಾನಸಿಕ ಇಲ್ಲವೇ ಸಾಮಾಜಿಕ ಹದುಳತೆಯೇ ಆರೋಗ್ಯ ಎನಿಸಿಕೊಂಡಿದೆ. ಇದರ ಸಾಧನೆಗೆ ರೋಗಿ, ವೈದ್ಯ ಇವರ ನಡುವೆ ನಿಕಟ ಸಂಪರ್ಕ ಇರಬೇಕಾಗುತ್ತದೆ. ಇದಕ್ಕಾಗಿ ಜನರಿಗೆ ಆರೋಗ್ಯ ಸಾಧನೆ, ರೋಗ ಚಿಕಿತ್ಸೆಗಳ ವಿಷಯವಾಗಿ ಸಾಕಷ್ಟು ತಿಳಿವಳಿಕೆಯನ್ನು ಕೊಟ್ಟರೆ ಮಾತ್ರ ಕೈಗೂಡುವುದು. ಜನರಲ್ಲಿ ಆರೋಗ್ಯ ಪ್ರಚಾರ, ತಿಳಿವಳಿಕೆಗಾಗಿ ಜ್ಞಾನ ದೇಗುಲವಾದ ವಿಶ್ವವಿದ್ಯಾಲಯವೂ ತನ್ನ ಸೇವೆಯನ್ನು ಸಲ್ಲಿಸುವ ದಿಕ್ಕಿನಲ್ಲಿ ಈ ಆರೋಗ್ಯಮಾಲೆ ತಲೆಯೆತ್ತಿದೆ. ಜನರ ತಾಯಿನುಡಿಗಿಂತಲೂ ಒಳ್ಳೆಯ ಮಾಧ್ಯಮ ಇನ್ನಿರಲಾರದು. ಜನರಿಗೆ ತಿಳಿಸಿಕೊಡಬೇಕಾದ ಆರೋಗ್ಯ ವಿಚಾರಗಳು ಅಪಾರವಾಗಿವೆ. ಆದರೆ ಕನ್ನಡದಲ್ಲಿ ಹೇಳುವಂತಹ ತಂತ್ರಜ್ಞರೂ ವೈದ್ಯರೂ ಸಾಕಷ್ಟಿಲ್ಲ. ತಾವು ಪರಿಣತಿ ಪಡೆದಿರುವ ಗಹನ ವಿಚಾರಗಳನ್ನು ಜನಸಾಮಾನ್ಯರಿಗೆ ತಿಳಿಸಲು ಎದೆಗಾರಿಕೆಯಿಂದ ಮುಂದೆ ಬಂದ ಕೆಲವರೇ ಮಂದಿಯ ಕೃತಿಗಳನ್ನು ಓದುಗರ ಮುಂದಿಡುತ್ತಿದ್ದೇವೆ. ಇವರ ಮಾದರಿಯನ್ನು ಅನುಸರಿಸಿ, ಇನ್ನೂ ಬಹಳ ಮಂದಿ ವೈದ್ಯರು ತಮ್ಮ ಅಮೂಲ್ಯ ಕೃತಿಗಳನ್ನು ನೀಡುವರೆಂಬ ಆಸೆ ನಮಗಿದೆ.

ಡಿ. ಎಸ್. ಶಿವಪ್ಪ

1. ಪರಿಚಯ

ಮಾನವನ ದೇಹದ ಅಂಗಾಂಗಗಳಿಗೆಲ್ಲಾ ನೈಸರ್ಗಿಕವಾಗಿರುವ ಹೊದಿಕೆಯೇ ಚರ್ಮ. ಕೃತಕವಾಗಿ ಧರಿಸುವ ಬಟ್ಟೆ ಬರೆಗಳು ಎಷ್ಟು ಉತ್ತಮವಾಗಿದ್ದರೂ, ನುರಿತ ದರ್ಜಿಯಿಂದ ತಯಾರಾಗಿದ್ದರೂ ಮನುಷ್ಯನನ್ನು ಗಾಳಿ ಮಳೆ, ಬಿಸಿಲು ಮುಂತಾದ ನೈಸರ್ಗಿಕ ವ್ಯತ್ಯಾಸಗಳಿಂದ ಹಾನಿಯಾಗದಂತೆ ಕಾಪಾಡಲು ಚರ್ಮಕ್ಕೆ ಸಹಾಯಕವಾದರೂ ಚರ್ಮದ ಸಾಮರ್ಥ್ಯ ಹೊಂದಿರಲಾರವು. ಅಂದರೆ, ಚರ್ಮವನ್ನು ತೆಗೆದು ಬರೀ ಬಟ್ಟೆಗಳಿಂದ ದೇಹದ ಅಂಗಾಂಗಗಳನ್ನು ಕಾಪಾಡಲು ಎಂದಿಗೂ ಸಾಧ್ಯವಿಲ್ಲ. ಬಟ್ಟೆಗಳೇ ಭೂಷಣವೆಂಬಂತೆ ಚರ್ಮ ದೇಹಕ್ಕೆ ರೂಪ, ಆಕಾರ ಮತ್ತು ಸೌಂದರ್ಯವನ್ನು ಕೊಡುತ್ತದೆ. ಚರ್ಮದ ಬಣ್ಣ ಆಯಾ ದೇಶಗಳಿಗೆ ಸಂಬಂಧಪಟ್ಟ ಶೀತೋಷ್ಣಗಳ ಬಾಧೆ ತಪ್ಪಿಸಲು ಅನುಕೂಲವಾಗುವ ಬಣ್ಣ. ಆಫ್ರಿಕದ ಜನ ಕಪ್ಪು. ಕಪ್ಪು ಬಣ್ಣ ಸೂರ್ಯನ ಕಿರಣಗಳಿಂದ ಬರುವ ಉಷ್ಣವನ್ನು ತಡೆದು ದೇಹಕ್ಕೆ ಬಾಧೆಯಾಗದಂತೆ ನೋಡಿಕೊಳ್ಳುತ್ತದೆ. ಬಿಳಿ ಚರ್ಮದವರು ಉಷ್ಣತೆಯಿಂದ ಏಡಿಗಂತಿಗೆ ಗುರಿಯಾಗುತ್ತಾರೆ. ಚರ್ಮದ ಮೇಲೆ ಆಮ್ಲದ ಕವಚವಿರುವುದರಿಂದ ಕ್ರಿಮಿ, ರೋಗಾಣುಗಳು ಚರ್ಮದ ಮೇಲೆ ನೆಲೆಸಿ, ಒಳನುಗ್ಗಿ ರೋಗವನ್ನುಂಟುಮಾಡಲು ಸಾಧಾರಣವಾಗಿ ಬಿಡುವುದಿಲ್ಲ. ಚರ್ಮ ಪಂಚೇಂದ್ರಿಯಗಳಲ್ಲೊಂದು. ಸ್ಪರ್ಶ ಜ್ಞಾನದಿಂದ ದೇಹದ ಚಟುವಟಿಕೆ ಮತ್ತು ವೃತ್ತಿಗೆ ಅನುಕೂಲಿಸುತ್ತದೆ. ಒಗ್ಗದಿಕೆಯ ಲಕ್ಷಣಗಳು ಮೊದಲು ಚರ್ಮದಲ್ಲಿ ಕಾಣುತ್ತವೆ. ಸಿಡುಬು, ಗಣಜಿಲೆ ಮುಂತಾದ ಕೆಲವು ರೋಗಗಳಿಗೆ ನಿರೋಧಕ ಶಕ್ತಿಯನ್ನು ತಯಾರಿಸಲು ಚರ್ಮ ಸಹಾಯಕವಾಗುತ್ತದೆ. ಬೆವರಿನ ಮೂಲಕ ಜಿಡ್ಡು, ನೀರು, ಲವಣ ಇತ್ಯಾದಿಗಳನ್ನು ಚರ್ಮ ವಿಸರ್ಜಿಸುತ್ತದೆ. ಡಿ ಜೀವಸತ್ವವನ್ನು ತಯಾರಿಸುವಲ್ಲಿ ಭಾಗವಹಿಸುತ್ತದೆ. ಹೀಗೆ ಚರ್ಮ ದೇಹದ ಒಂದು ಮುಖ್ಯ ಅಂಗವಾಗಿ, ದೇಹದ ಕೆಲವು ಚಟುವಟಿಕೆಗಳಲ್ಲಿ ಭಾಗವಹಿಸುತ್ತದೆ.

ಸುಟ್ಟ ಬೊಬ್ಬೆಗಳ ಮೇಲಿರುವುದೇ ಹೊರ ಚರ್ಮ. ಚಪ್ಪಲಿ, ಬೂಟುಗಳ ತೊಗಲು ಆಗುವುದೇ ಒಳ ಚರ್ಮ. ಕೂದಲು, ಉಗುರು, ಮೈ ಜಿಡ್ಡು ಗ್ರಂಥಿಗಳು ಮತ್ತು ಬೆವರು ಗ್ರಂಥಿಗಳು ಚರ್ಮದ ಭಾಗಗಳು. ಒಳ ಚರ್ಮದ ಬುಡದಲ್ಲಿ ಮಾಂಸ, ಕೊಬ್ಬು, ದೊಡ್ಡ ನರ, ರಕ್ತನಾಳ, ದುಗ್ಧ ನಾಳಗಳಿವೆ.



ಚಿತ್ರ 1. ಚರ್ಮದ ರಚನೆ; ಅ. ಮೈಜಿಡ್ಡು ಗ್ರಂಥಿ
ಆ. ಇ. ಬೆವರು ಗ್ರಂಥಿಗಳು ಈ. ಕೂದಲು ಬುಡ
ಉ. ಹೊರ ಚರ್ಮ ಊ. ಒಳಚರ್ಮ ಎ. ಬುಡಚರ್ಮ

ಚರ್ಮ ತನ್ನವೇ ರೋಗ ಲಕ್ಷಣಗಳನ್ನು ತೋರುವುದಲ್ಲದೆ ದೇಹದ ಇತರ ಅಂಗಗಳ ರೋಗಗಳಲ್ಲಿಯೂ ಭಾಗವಹಿಸುತ್ತದೆ. ಚರ್ಮದ ಮೇಲೆ ಮೇಹ ಮತ್ತು ಕುಷ್ಠ ರೋಗಗಳ ಲಕ್ಷಣಗಳು ಆರಂಭದಲ್ಲೇ ಕಾಣಿಸಿಕೊಳ್ಳುವುದರಿಂದ, ಸಾಮಾನ್ಯ ಜನರಲ್ಲಿ ಚರ್ಮ ರೋಗವನ್ನು ಮುಚ್ಚಿಟ್ಟುಕೊಳ್ಳುವ ಅಭ್ಯಾಸ ಉಂಟು. ಈ ರೋಗಗಳನ್ನು ಮೊದಲೇ ಗುರುತಿಸಿದರೆ ವೈದ್ಯರು ಪೂರ್ಣ ಗುಣಪಡಿಸಬಹುದು. ಆದ್ದರಿಂದ ತಿಳಿದವರು ಚರ್ಮದ

ಮೇಲಿನ ಲಕ್ಷಣಗಳನ್ನು ಮುಚ್ಚಿಟ್ಟುಕೊಳ್ಳಬಾರದು. ಚಿಕಿತ್ಸೆ ಮಾಡಿಸಿ ಕೊಳ್ಳಲು ನಾಚಬಾರದು. ಅಲ್ಲದೆ, ಅನೇಕ ಚರ್ಮ ರೋಗಗಳು ಅಂಟು ರೋಗಗಳಾಗಿರಬಹುದು. ಆದುದರಿಂದ ರೋಗ ಅಂಟಿ ಹರಡದಂತೆ, ಜನತೆಗೆ ಮಾರಕವಾಗದಂತೆ ನೋಡಿಕೊಳ್ಳಲು ಚರ್ಮದ ಮೇಲಿನ ಲಕ್ಷಣಗಳನ್ನು ಹೊರಗೆಡಹುವುದು ಬಹಳ ಮುಖ್ಯ. ತೊನ್ನು ನಮ್ಮ ಸಮಾಜದಲ್ಲಿ ಅಸಹನೀಯ. ಕೆಲವು ನಮೂನೆ ತೊನ್ನು ಚಿಕಿತ್ಸೆಯಿಂದ ಗುಣವಾಗಬಹುದು. ಚರ್ಮ ರೋಗ ಒಮ್ಮೆ ಬಂದರೆ ಜೀವನ ಪರ್ಯಂತವೂ ಬಿಡುವುದಿಲ್ಲ ಎಂಬ ಭಾವನೆಯನ್ನು ಬಿಟ್ಟು, ಧೈರ್ಯದಿಂದ ಔಷಧೋಪಚಾರಗಳನ್ನು ನಡೆಸ ಬೇಕು. ಎಲ್ಲ ರೋಗಗಳನ್ನೂ ನಿವಾರಿಸುವ ಔಷಧ ಎಲ್ಲೂ ಇಲ್ಲ. ಆದರೆ ರೋಗದ ಕಾರಣ, ಗತಿ ಮುಂತಾದವನ್ನು ತಿಳಿದರೆ ಎಷ್ಟೋ ಅನುಕೂಲ ವಲ್ಲವೆ? ಏಡಿಗಂತಿ ಚರ್ಮದಲ್ಲೂ ಏಳುವುದುಂಟು. ಬೇರೆಡೆಗಳಲ್ಲಿ ಇದನ್ನು ನಿವಾರಿಸುವುದು ಕಷ್ಟವಾದರೂ ಚರ್ಮದ ಮೇಲೆ ಬಂದುದನ್ನು ಎಳೆಯದರಲ್ಲಿಯೇ ಸಂಪೂರ್ಣ ಗುಣಪಡಿಸಬಹುದು.

ಚರ್ಮ ರೋಗಗಳು ಅಪಾರ ; ಎಣಿಸಿದರೆ ಒಂದು ಸಾವಿರದ ನಾನ್ನೂರು. ಈ ಎಲ್ಲಾ ರೋಗಗಳನ್ನು ವಿವರಿಸಲು ಅಸಾಧ್ಯ. ಚರ್ಮ ರೋಗಗಳೆಲ್ಲಾ ಅಂಟು ರೋಗಗಳಲ್ಲ. ಚರ್ಮದ ಮೇಲಿರುವ ಎಲ್ಲಾ ಕಲೆಗಳು ಕುಷ್ಠ ರೋಗದ ಲಕ್ಷಣಗಳಾಗಿರುವುದಿಲ್ಲ. ತೊನ್ನು ಆನುವಂಶಿಕ ಒಂದೇ ಅಲ್ಲ. ಉಪದಂಶ ಮೇಹ ಚರ್ಮದ ಮೇಲೆಯೇ ಮೊದಲು ಕಾಣುತ್ತದೆ. ಸಿಡುಬು ರೋಗಗಳ ಚಿಹ್ನೆಗಳು ಚರ್ಮದ ಮೇಲಿರುತ್ತವೆ. ಅನೇಕ ತರಹದ ಇಸಬು ಗಳುಂಟು. ಚರ್ಮ ರೋಗಗಳನ್ನು ಗುಣಪಡಿಸಬಹುದು. ಹೊರ ನೋಟಕ್ಕೆ ಸಾಮಾನ್ಯರಿಗೆ ಎಲ್ಲಾ ಚರ್ಮ ರೋಗಗಳೂ ಒಂದೇ ರೀತಿ ಕಾಣುತ್ತವೆ. ಸೂಕ್ಷ್ಮವಾಗಿ ಪರೀಕ್ಷಿಸಿ ರೋಗ ಕಾರಣ ಹುಡುಕಿ ರೋಗವನ್ನು ತಡೆಹಿಡಿಯ ಬಹುದು, ಎಷ್ಟೋ ವೇಳೆ ಗುಣಪಡಿಸಬಹುದು. ನಿರಾಶೆಗೆ ಕಾರಣವಿಲ್ಲ. ಸ್ವಂತ ಚಿಕಿತ್ಸೆ ತೀರ ಅಪಾಯಕರ. ಚರ್ಮ ರೋಗದಿಂದ ಕುರೂಪಿಗಳಾಗ ಬಹುದು. ಚರ್ಮ ರೋಗ ಸಮಾಜ ಬಾಹಿರಕ್ಕೆ ಕಾರಣವೆಂದು ಮುಚ್ಚಿಡ ಬಾರದು. ರೋಗಿಗೆ ತಿಳಿಯದೆ ಇತರರಿಗೆ ರೋಗ ಅಂಟಬಹುದು. ಮೊದಲ ಚಿಹ್ನೆ ಅಥವಾ ಲಕ್ಷಣದಿಂದ ರೋಗವನ್ನು ಗುರುತಿಸಿ, ಚಿಕಿತ್ಸೆ ಮಾಡಿದಲ್ಲಿ ಅನೇಕ ಅನಾಹುತಗಳನ್ನು ತಪ್ಪಿಸಬಹುದು. ಚರ್ಮ ರೋಗದಿಂದಲೂ ಜೀವಕ್ಕೆ ಅಪಾಯವಾಗಬಹುದು.

ಅನೇಕ ಚರ್ಮ ರೋಗಗಳನ್ನು ಹತೋಟಿಯಲ್ಲಿಡಲು ಬೇರೆಬೇರೆ ದೇಶಗಳು ವಿಧವಿಧವಾದ ಕ್ರಮಗಳನ್ನು ಆಚರಿಸುತ್ತವೆ. ಹೀಗಾಗಿ ಕೆಲವು ದೇಶಗಳಲ್ಲಿ (ನಾರ್ವೆ, ಸ್ವೀಡನ್) ಕುಷ್ಠ ರೋಗಿಯೇ ಇಲ್ಲ. ಕೆಲವು ದೇಶಗಳಲ್ಲಿ (ಅಮೇರಿಕ) ಕಜ್ಜಿ ರೋಗಿಗಳಿಲ್ಲ. ಈಗ ಪ್ರಪಂಚದ ಹೆಚ್ಚು ಭಾಗಗಳಲ್ಲಿ ಅದೂ ಭಾರತದಲ್ಲಿ ಸಿಡುಬು ಮಾಯವಾಗಿದೆ. ಇವೆಲ್ಲ ಸಂತಸದ ಸುದ್ದಿಗಳು.

2. ಚರ್ಮದ ರಚನೆ

ಇಡೀ ಮೈ ಚರ್ಮದ ಸರಾಸರಿ ತೂಕ 3 ಕಿಲೋ ಆಗುತ್ತದೆ. ಅದರ ವಿಸ್ತೀರ್ಣ 1.6 ಚದರ ಮೀಟರ್ ; ಚರ್ಮದ ದಪ್ಪ ಸಾಧಾರಣವಾಗಿ 0.2 ಮಿ.ಮೀ. ಇರುವುದಾದರೂ, ಅಲ್ಲಲ್ಲಿ ಸ್ವಲ್ಪ ಮಂದವೂ (0.8 ಮಿ.ಮೀ.), ತೆಳುವೂ (0.06. ಮಿ.ಮೀ.) ಆಗಿರುವುದು.

ಹೊರಚರ್ಮ

ಐದು ಪದರಗಳುಳ್ಳದ್ದು. ಇವುಗಳಲ್ಲಿ ರಕ್ತನಾಳಗಳಿಲ್ಲ. ಹೊರಚರ್ಮ ನಿರ್ಜೀವವಾದರೂ ಮೇಲ್ಪೊರೆಯಲ್ಲಿರುವ ಕೊಂಬಿನ ಗುಣವುಳ್ಳ ಕೆರಟಿನ್ನನ್ನೂ ಚರ್ಮಕ್ಕೆ ಬಣ್ಣ ಕೊಡುವ ಮೆಲನಿನ್ನನ್ನೂ ತಯಾರಿಸುತ್ತದೆ. ಈ ಎರಡೂ ಕಾರ್ಯಗಳಲ್ಲಿ ಅಡಚಣೆ ಉಂಟಾದರೆ ಚರ್ಮರೋಗ ಬರುತ್ತದೆ. ಹೊರ ಚರ್ಮಕ್ಕೆ ಗಾಯವಾದರೆ ಗುರುತಿಲ್ಲದಂತೆ ಮಾಯುತ್ತದೆ. ಹೊರ ಚರ್ಮವನ್ನು ತೆಗೆದೆಸೆದರೆ ತುರಿಕೆ, ಕೆರೆತ ಇರುವುದಿಲ್ಲ.

ನಿಜಚರ್ಮ

ಚಿಕ್ಕ ರಕ್ತನಾಳ, ದುಗ್ಧನಾಳ ಮತ್ತು ನರಗಳಿಂದ ಕೂಡಿದೆ. ಮೈ ಜಿಡ್ಡು ಗ್ರಂಥಿಗಳೂ, ರೋಮಗಳ ಮೂಲಗಳೂ, ಬೆವರು ಗ್ರಂಥಿಗಳೂ ಇರುವುವು. ಇಲ್ಲಿಯೇ ವಿಧವಿಧವಾದ ಅಂದರೆ ನೋವು, ಶಾಖ ಮುಂತಾದ ಸ್ಪರ್ಶ ಜ್ಞಾನವನ್ನು ಅರಿಯುವ ನರತುದಿಗಳಿರುವುವು. ನಿಜಚರ್ಮಕ್ಕೆ ಗಾಯವಾದರೆ ರಕ್ತ ಸುರಿದು ನೋವಾಗುವುದು. ಗಾಯವಾದಾಗ ಕಲೆ ಉಳಿಯುತ್ತದೆ.

ಚರ್ಮದ ಬುಡದಲ್ಲಿ ಕೊಬ್ಬು, ಸ್ನಾಯುಗಳಲ್ಲದೆ ದೊಡ್ಡ ರಕ್ತನಾಳಗಳಿರುವುದರಿಂದ ಅದಕ್ಕೆ ಗಾಯವಾದಾಗ ರಕ್ತಸ್ರಾವ ಹೆಚ್ಚಾಗಿರುತ್ತದೆ. ದೊಡ್ಡ ನರಗಳಿರುವುದರಿಂದ ಆ ನರಗಳಿಗೆ ಗಾಯವಾದರೆ ನವೆತ, ಅರನಾರಿ, ಕುರೂಪ ಮತ್ತು ವಿಕಾರಗಳಾಗುತ್ತವೆ.

ಚರ್ಮರೋಗಗಳಲ್ಲಿ ಕೆಲವು ತುರಿಸುತ್ತವೆ. ಉಳಿದವು ತುರಿಕೆ ಇಲ್ಲದವು. ಕೆಲವು ಅಂಟುವ ರೋಗಗಳು. ಮತ್ತೆ ಕೆಲವು ದದ್ದು ರೋಗಗಳು. ಕೆಲವು ಕೇವಲ ಮಚ್ಚೆಗಳಾದರೂ ಬಣ್ಣ ಕೆಟ್ಟು ರೋಗವೆಂದೆನಿಸಿಕೊಳ್ಳುತ್ತವೆ. ಪುರಾತನ ವೈದ್ಯಶಾಸ್ತ್ರಗಳಲ್ಲಿ ಅನೇಕ ಚರ್ಮ ರೋಗಗಳನ್ನು ಕುಷ್ಠವೆಂದೇ ಕರೆದಿದ್ದಾರೆ. ಆದರೆ ಕುಷ್ಠ ಎಂಬ ಶಬ್ದಕ್ಕೆ ಆಧುನಿಕ ವೈದ್ಯಶಾಸ್ತ್ರದಲ್ಲಿ ವಿಶಿಷ್ಟ ಅರ್ಥವಿದೆ. ರೋಗ ಮೂಲ ಮತ್ತು ಮುಖ್ಯ ಲಕ್ಷಣಗಳನ್ನು ಅವಲಂಬಿಸಿ ಚರ್ಮ ರೋಗಗಳನ್ನು ವಿಂಗಡಿಸಲಾಗಿದೆ.

ಹುಟ್ಟುವಾಗಲೇ ಬರುವ ಕೆಲವು ರೋಗಗಳು ಜನಿಕಗಳ ಪ್ರಭಾವದಿಂದ ಉಂಟಾಗುತ್ತವೆ. ಅವುಗಳಲ್ಲಿ ಮುಖ್ಯವಾದವು, ಮೀನೊಗಲು, ತೊನ್ನು, ಎಪಿಡರ್ಮೋಲೈಸಿಸ್ ಬುಲ್ಲೋಸ, ಡಾರಿಯರನ ರೋಗ, ಒಣದೊಗಲೇ ಮುಂತಾದವು. ಈ ರೋಗಗಳು ಆನುವಂಶಿಕ. ಕೆಲವು ಮಾರಕ ರೋಗಗಳು. ಸಿಡುಬು, ಗಣಜಿಲೆ, ದಡಾರ ಮುಂತಾದ ಸಾಂಕ್ರಾಮಿಕ ರೋಗಗಳು ವಿಷಕಣಗಳಿಂದೇಳುತ್ತವೆ. ಸರಳ ಪಾಮು, ಉಡಿ ತದ್ದು, ಅಂಟುವ ಮೆಲುಗಂತಿ, ಕಾಲು ಬಾಯಿ ರೋಗ, ಹುಲ್ಲುರಿ, ಬೆಕ್ಕು ಕೆರೆತದ ರೋಗ ಇವು ಅಲ್ಪ ಇಲ್ಲವೇ ಅಧಿಕವಾಗಿ ಬಾಧಿಸುತ್ತವೆ. ಒಂದು ಸಲ ಇಂಥಾ ರೋಗ ಹತ್ತಿ ಗುಣವಾದರೆ, ಪುನಃ ಈ ರೋಗ ಬರುವುದು ಕಠಿಣ. ಏಕಾಣುಜೀವಿ ರೋಗಗಳು, ಉರಿತದ ರೋಗಗಳು, ರಕ್ತ ಇಲ್ಲವೇ ಕೀವು ಕುರುಗಳು ಬರುತ್ತವೆ. ಕ್ಷಯ, ಕುಷ್ಠ, ಉಪದಂಶ ಮತ್ತು ಗಂಟಲಮಾರಿ ರೋಗಾಣುಗಳಿಂದ ಅನೇಕ ರೀತಿಯ ಕುರು ಮತ್ತು ಹುಣ್ಣುಗಳು ಏಳುತ್ತವೆ. ಹುಳುಕಡ್ಡಿ, ಕೆಸರು ಹುಣ್ಣು, ಇಸಬು, ಮಧುರಾ ಪಾದ ಮುಂತಾದವು ಅಣಬೆಗಳಿಂದೇಳುವ ರೋಗಗಳು. ಕಜ್ಜಿ, ಹೇನ್ತುಂಬಿಕೆ ಇವು ಪರಪಿಂಡಿಗಳಿಂದ ಬರುವುವು.

ಇವಲ್ಲದೆ ಮೈಜಿಡ್ಡುಗ್ರಂಥಿಗಳ ಉರಿತದಿಂದ ಮೊಡವೆ, ಮಚ್ಚೆಗಳು, ನೀರ್ಗುಳ್ಳೆ ರೋಗಗಳು, ನೀಲಿಗಟ್ಟುವಿಕೆ, ರೋಮ ರೋಗಗಳು, ಉಗುರು ರೋಗಗಳು, ಜೀವಸತ್ತ್ವ ಕೊರತೆಯಿಂದಾಗುವ ಚರ್ಮ ವ್ಯತ್ಯಾಸಗಳು ಮತ್ತು ಅವ್ಯಕ್ತ ಕಾರಣದಿಂದುಂಟಾಗುವ ಸೋರಿಯಾಸಿಸ್ ಮುಂತಾದವು.

ಕ್ರಮಾಗತ ಅಧ್ಯಯನ ಮತ್ತು ಅನುಭವದಿಂದ ಚರ್ಮರೋಗಗಳನ್ನು ಗುರುತಿಸಿ ಯಶಸ್ವಿ ಚಿಕಿತ್ಸೆ ಮಾಡಬಹುದು. ಪ್ರತಿಬಂಧಕ ಕ್ರಮಗಳನ್ನು ಸಮಯೋಚಿತವಾಗಿ ಉಪಯೋಗಿಸಬಹುದು.

ವಿವರವಾಗಿ ತಿಳಿಸಲು, ಬಹಳ ಸಾಮಾನ್ಯವಾಗಿ ಸಂಭವಿಸುವ ರೋಗಗಳನ್ನು ಆಯ್ದುಕೊಂಡಿದೆ. ಈ ರೋಗಗಳು ನಮ್ಮ ರಾಜ್ಯದಲ್ಲಿ ವಿಪರೀತವಾಗಿದ್ದು ಪ್ರತಿ ವೈದ್ಯರಲ್ಲಿ ಇಲ್ಲವೇ ದವಾಖಾನೆಗಳಲ್ಲಿ ಇಂಥಾ ರೋಗಿಗಳು ಬರುತ್ತಾರೆ.


3. ಪರಪಿಂಡಿ ರೋಗಗಳು

ಕಜ್ಜಿ : ಕೆಲವು ರೋಗಗಳು ಸಾಮಾನ್ಯವಾಗಿ ನಮ್ಮ ಜನಾಂಗದಲ್ಲಿ ರೂಢಿಯಾಗಿವೆ. ಪಾಶ್ಚಾತ್ಯ ದೇಶಗಳಲ್ಲಿ ಇವು ಬಹು ಅಪರೂಪ. ನಮ್ಮಲ್ಲಿ ಮನೆಯವರಿಗೆಲ್ಲ ತುರಿಕೆ, ಹುರುಕು ಅಥವಾ ಕಜ್ಜಿಯ ವಿಷಯ ಸ್ವಲ್ಪ ವಾದರೂ ಗೊತ್ತು. ತುರಿಕೆಯ ಅರ್ಥವನ್ನು ತಿಳಿಯಬೇಕಾದರೆ ಕಜ್ಜಿಯನ್ನು ಅನುಭವಿಸಬೇಕೆನ್ನುತ್ತಾರೆ. ಕಜ್ಜಿ ನಿಜವಾಗಿಯೂ ಒಂದು ಚರ್ಮ ರೋಗ. ಬೇರಾವ ಅಂಗಕ್ಕೂ ಕಜ್ಜಿ ತಗಲುವುದಿಲ್ಲ. ಇದು ಅಂಟುರೋಗವಾದ್ದರಿಂದ ಕಜ್ಜಿ ರೋಗಿಯ ಸಂಪರ್ಕದಿಂದ ಹರಡುತ್ತದೆ. ಕೆಲವು ಸಾಕು ಪ್ರಾಣಿಗಳೂ



ಚಿತ್ರ 2. ಕಜ್ಜಿಯ ಕ್ರಿಮಿ

(ನಾಯಿ, ಬೆಕ್ಕು ಇತ್ಯಾದಿ) ಇದರಿಂದ ನರಳುತ್ತವೆ. ಮಕ್ಕಳೇ ಈ ರೋಗಕ್ಕೆ ಮೊದಲು ತುತ್ತಾಗುತ್ತಾರೆ. ಮಕ್ಕಳಿಂದ ತಾಯಿಗೆ, ಇತರ ಮಕ್ಕಳಿಗೆ ಹರಡಿ, ಮನೆ ರೋಗ ಇಲ್ಲವೇ ಸ್ಥಳೀಕ ರೋಗ ಆಗುತ್ತದೆ. ಹೊಲಗೇರಿಯಲ್ಲಿರುವ ಕೊಳಕು ಮಕ್ಕಳಿಗೆ ಸ್ವಚ್ಛತೆಯ ಅರಿವಿಲ್ಲದ ಜನರ ಗುಂಪಿಗೆ ಈ ರೋಗ ಒಂದು ಸ್ವತ್ತಾಗಿ ಬಿಟ್ಟಿದೆ. ರೋಗಿ ಮೈಮೇಲೆ ತೀವ್ರ ಕಡಿತದಿಂದ ಚರ್ಮವನ್ನು ಕೆರೆದ, ಗೀಚಿದ ಗೀರುಗಳನ್ನು ನಾವು ನೋಡಬಹುದು. ಇಂಥಾ ತುರಿಕೆ ರಾತ್ರಿ ಹೆಚ್ಚಾಗುತ್ತದೆ. ಬೆರಳು ಸಂದುಗಳಲ್ಲಿ ಮಣಿಕಟ್ಟಿನಲ್ಲಿ, ಕಂಕುಳು, ಸೊಂಟ, ಗಂಡಸರ ಹೊರ ಜನನಾಂಗಗಳು, ಹೆಣ್ಣಿನ ಮೊಲೆ ಸುತ್ತ ಮತ್ತು ಒಳ ತೊಡೆಗಳಲ್ಲಿ ಈ ರೋಗ ಹೆಚ್ಚಾಗಿ ಕಾಣುತ್ತದೆ. ಸಮಾಜದ ಸಂಕಷ್ಟಗಳು ಹೆಚ್ಚಾದಾಗ, ಯುದ್ಧ ಕಾಲದಲ್ಲಿ, ಜಾತ್ರೆ ಪರಿಶೆ ಕಾಲಗಳಲ್ಲಿ ಈ ರೋಗ ಸಾಂಕ್ರಾಮಿಕವಾಗಿ ಹಬ್ಬುತ್ತದೆ. ರೋಗ ಕಾರಣವಾದ ಕ್ರಿಮಿ 0.33 ಮಿಲಿ ಮೀಟರ್ ಉದ್ದವಿದ್ದು, ಎಂಟು ಕಾಲುಗಳಿರುತ್ತವೆ. ಬಸಿರಾದ ಹೆಣ್ಣು ಕ್ರಿಮಿ ಚರ್ಮದಲ್ಲಿ ಬಿಲವನ್ನು ತೋಡುತ್ತದೆ. ಈ ಬಿಲ ವಕ್ರವಾಗಿ 1–2



ಚಿತ್ರ 3. ಕಜ್ಜಿ ಏಳುವ ಜಾಗಗಳು

ಮಿಲಿ ಮೀಟರ್ ಉದ್ದ ಇರುತ್ತದೆ. ಬಿಲದಲ್ಲಿ ಸೇರಿಕೊಂಡು ತತ್ತಿಯನ್ನು ಇಡುತ್ತದೆ. ಅವುಗಳಿಂದ ಮರಿಗಳು 3 ವಾರಗಳಲ್ಲಿ ಹೊರಬಿದ್ದು, ಅವೂ ಬಿಲಗಳನ್ನು ತೋಡುತ್ತವೆ. ಹೀಗೆ ಚರ್ಮದ ಮೇಲೆ ಅನೇಕ ಬಿಲಗಳಾಗಿ ರೋಗ ಹರಡುತ್ತದೆ. ಹೆಣ್ಣು ಕೀಟವೇ ರೋಗಕ್ಕೆ ಕಾರಣ. ಗಂಡು ಹೆಣ್ಣಿಗೆ ಬಸಿರು ಕೊಟ್ಟನಂತರ ನಾಶವಾಗುತ್ತದೆ. ಈ ಕಜ್ಜಿ ಎಲ್ಲಾ ಅಂತಸ್ತಿನ ಜನಕ್ಕೂ ಅಂಟುತ್ತದೆ. ಚರ್ಮದ ಮೇಲ್ಪೊರೆಯ ಕೊಂಬು ಪದಾರ್ಥವೇ ಅದಕ್ಕೆ ಆಹಾರ. ತುರಿಕೆಯಿಂದ ಚರ್ಮದ ಮೇಲೆ ಗೀಚುಗಳು, ಕೀವುಗುಳ್ಳೆ ಮತ್ತು ದದ್ದುಗಳೂ ಏಳುತ್ತವೆ. ಕೂಸುಗಳಿಗೆ ಈ ರೋಗ ಅಂಟಿದರೆ ಪಾದ ಮತ್ತು ಅಂಗೈಗಳಲ್ಲಿ ಕೂಡಾ ಈ ರೋಗ ಕಾಣುತ್ತದೆ. ಭೇದಿ, ರಕ್ತ ಭೇದಿ ಮುಂತಾದ ರೋಗಗಳಿಂದ ಸೊರಗಿದ್ದ ಜನರಲ್ಲಿ, ಮಿದುಳು ರೋಗದವರಲ್ಲಿ ಹಕ್ಕಳೆಗಟ್ಟಿದ ದಪ್ಪ ಗುಳ್ಳೆಗಳು ಬರಬಹುದು. ಸಾಕು ಪ್ರಾಣಿಗಳ ಸಂಪರ್ಕವಿದ್ದವರಲ್ಲಿ ಮೇಲೆ ಹೇಳಿದ ದೇಹ ಭಾಗಗಳಲ್ಲದೆ, ಬೇರೆ ಭಾಗಗಳಲ್ಲೂ ಹರಡುತ್ತದೆ.

ರೋಗಕ್ಕೆ ಮೂಲ ಕಾರಣವಾದ ಕ್ರಿಮಿಯನ್ನು ನಾಶಮಾಡುವುದೇ ಚಿಕಿತ್ಸೆಯ ಗುರಿ. ಬೆಂಜೈಲ್ ಬೆಂಜೊಯೇಟ್ ಎಂಬ ರಸಾಯನಿಕವನ್ನು ಶೇಕಡ 20 ರಷ್ಟು ಹಾಲಂದಗೊಳಿಸಿ ಚರ್ಮದ ಮೇಲೆ ತಿಕ್ಕಬೇಕು. ಈ ಔಷಧ ಕೀಟಕ್ಕೆ ತಗುಲಿದರೆ ಮಾತ್ರ ಕ್ರಿಮಿ ನಾಶವಾಗುವುದರಿಂದ ಚೆನ್ನಾಗಿ ತಿಕ್ಕಿದರೆ ಮಾತ್ರ ಬಿಲಗಳು ಒಡೆದು ಹೊರಗೆ ಬಂದ ಕ್ರಿಮಿಗಳ ಮೇಲೆ ಔಷಧ ಹರಡುತ್ತದೆ. ಮೊಟ್ಟೆಗಳು ಸಾಯುವಂತೆ ಮಾಡಲು ಶೇ. 3 ರಷ್ಟು ಬೆಂಜೋಕೇನೂ, ಮರಿಕೀಟಗಳು ಸಾಯಲು ಶೇ. 1 ರಷ್ಟು ಡಿ.ಡಿ.ಟಿ.ಯೂ ಅದರಲ್ಲಿ ಕೂಡಿರಬೇಕು. ಶೇಕಡ 10 ರಷ್ಟು ಗಂಧಕದ ಮುಲಾಮನ್ನು ಉಜ್ಜಿದರೂ ಹೆಚ್ಚು ಖರ್ಚಿಲ್ಲದೆ ರೋಗ ಗುಣವಾಗಬಹುದು. ಕೀವು ಗುಳ್ಳೆಗಳಿದ್ದರೆ ತಕ್ಕ ಔಷಧಗಳನ್ನು ಕೊಡಬೇಕಾಗುತ್ತದೆ. ರೋಗಿಯನ್ನು ತಾತ್ಸಾರ ಮಾಡಿದಲ್ಲಿ ಮೂತ್ರಪಿಂಡದ ಉರಿತವಾಗಿ ಬಹಳ ಮಕ್ಕಳಿಗೆ ಮಾರಕವಾಗುತ್ತದೆ. ರೋಗ ನಿರ್ಮೂಲ ಮಾಡಲು ಮನೆಯಲ್ಲಿನ ಮತ್ತು ಮನೆಯ ಹೊರಗಿನ ಎಲ್ಲರಿಗೂ ಒಂದೇ ಸಲ ಚಿಕಿತ್ಸೆಯಾಗಬೇಕು. ಬಟ್ಟೆಗಳನ್ನು ಕುದಿಯುವ ನೀರು ಮತ್ತು ಸಾಬೂನಿಂದ ಸ್ವಚ್ಛಮಾಡಿ ಉಪಯೋಗಿಸಬೇಕು. ರೋಗವನ್ನು ನಿಯಂತ್ರಿಸಲು ಜೀವನದ ವಿಧಾನವನ್ನು ಉತ್ತಮಗೊಳಿಸಿ,

ಸಾಬೂನಿಂದ ಸ್ನಾನಮಾಡಲು ಮತ್ತು ಸ್ವಚ್ಛಪಡಿಸಿದ ಬಟ್ಟೆಗಳನ್ನು ಉಪಯೋಗಿಸಲು ಕಲಿಯಬೇಕು.

ಹೇನ್ತುಂಬಿಕೆ: ಹೇನು ಆರು ಕಾಲುಳ್ಳ ಕೀಟ. ಹೇನುಗಳಲ್ಲಿ ಮೂರು ವಿಧಗಳಿದ್ದಂತೆ, ಹೇನ್ತುಂಬಿಕೆಯಲ್ಲೂ ಮೂರು ವಿಧ. ತಲೆಯ ಹೇನು ತಲೆಗೆ ಹೇನ್ತುಂಬುತ್ತದೆ. ಹೇನು, ಕೂರೆಗಳು ಕೂದಲಿನ ಉದ್ದಕ್ಕೂ ಅಂಟಿರುತ್ತವೆ. ಇವು ಹೆಚ್ಚಾದಾಗ ತಲೆಯ ಕಡಿತ ಮತ್ತು ತುರಿಕೆ ಆಗುತ್ತದೆ. ಹೇನು ಚರ್ಮವನ್ನು ಕಡಿದು ರಕ್ತಹೀರಿ ಜೀವಿಸುತ್ತದೆ. ತುರಿಕೆಯಿಂದ ಚರ್ಮದ ಮೇಲೆ ಗೀಚುಗಳೂ ಕುರುಗಳೂ ಆಗುತ್ತವೆ. ಕುರುಗಳು ಹೆಚ್ಚಾದಾಗ ತಲೆಸುತ್ತಲೂ ಕತ್ತಿನಲ್ಲೂ ದುಗ್ಧಗ್ರಂಥಿಗಳು ದೊಡ್ಡವಾಗಿ ಗಂಟುಗಳಂತೆ ಊದಿಕೊಂಡು ನೋಯುತ್ತವೆ. ಮೈಹೇನು ಬಟ್ಟೆಗಳ ಒಳಭಾಗದ ಮಡಿಕೆ ಇಲ್ಲವೇ ನಿರಿಗೆಗಳಲ್ಲಿರುತ್ತವೆ. ಹಸಿವಾದಾಗ ಮೈಮೇಲೆ ಬಂದು ಕಡಿದು ರಕ್ತವನ್ನು ಹೀರುತ್ತವೆ. ಆಗ ಕಡಿತ, ತುರಿಕೆ ಹೆಚ್ಚಾಗುತ್ತವೆ. ಇಂಥ ಮೈ ಹೇನು, ತುರಿ, ತಿರಿದುಂಬುವ, ಕೊಳಕು ಬಟ್ಟೆ ಧರಿಸಿ ರಸ್ತೆಯಲ್ಲಿಯೇ ಜೀವಿಸುವ ಸೋಮಾರಿಗಳಲ್ಲಿ ಕಾಣುತ್ತದೆ. ಬಟ್ಟೆಗಳನ್ನು ಬಿಚ್ಚಿ ನೋಡಿದರೆ ಅವನು ತನ್ನ ಎದೆ ಮತ್ತು ಹೊಟ್ಟೆಯ ಪಕ್ಕಗಳಲ್ಲಿ ಕೆರೆದ ಗೀಚುಗಳು ಚೆನ್ನಾಗಿ ಕಾಣುತ್ತವೆ. ಬಟ್ಟೆಗಳೆಲ್ಲಾ ಹೊಲಸು ನಾರುತ್ತಿರುತ್ತವೆ.

ಗುಂಜೆಡೆಯ ಹೇನು ಲಿಂಗದ ಸುತ್ತ ಮತ್ತು ಕೆಳ ಹೊಟ್ಟೆಯ ಮೇಲಿರುವ ಕೂದಲಿಗೆ ಅಂಟಿಕೊಂಡಿರುತ್ತದೆ. ಆ ಭಾಗದ ಚರ್ಮವನ್ನು ಕಡಿಯುವುದಲ್ಲದೆ ಚರ್ಮದೊಳಗೂ ಹೂತಿರುತ್ತದೆ. ಅದು ಕಡಿದ ತೊಡೆ ಮತ್ತು ಗುಂಜೆಲುವಿನ ಚರ್ಮದ ಮೇಲೆ ಹಸಿರು ನೀಲಿ ಕಲೆಗಳು ಕಾಣುತ್ತವೆ. ಸಂಭೋಗ ಕಾಲದಲ್ಲಿ ಒಬ್ಬರಿಂದೊಬ್ಬರಿಗೆ ಈ ಹೇನು ಹರಡುವುದುಂಟು. ಹೀಗೆ, ಇಂಥ ರೋಗ ಸ್ವಚ್ಛವಾಗಿರುವವರಲ್ಲಿಯೂ ಮೇಲು ವರ್ಗದವರಲ್ಲೂ ಕಾಣಬಹುದು.

ಹೇನು ಕಡಿದಾಗ ಕೆರೆಯುವುದುಂಟು. ಕೆರೆತದಿಂದ ಕೀವುಗೂಡಿ ಚರ್ಮದೊಳಕ್ಕೆ ಹೋಗಿ ಕುರುಗಳು ಏಳುತ್ತವೆ. ಕೆರೆತದ ಗುರುತುಗಳೂ ದದ್ದುಗಳೂ, ಕುರುಗಳೂ ಹೇನ್ತುಂಬಿದ ರೋಗಿಯ ಮೈಮೇಲೆ ಕಾಣಿಸಿಕೊಳ್ಳುತ್ತವೆ.

ಡಿ.ಡಿ.ಟಿ. 5% ರಿಂದ 10 % ಇಲ್ಲವೇ ಗ್ಯಾಮೆಕ್ಸೇನ್ 0.5% ರಿಂದ 1 % ಪುಡಿಯನ್ನು ತಲೆಗೆ, ಬಟ್ಟೆಗಳಿಗೆ, ತೊಡೆ ಮತ್ತು ಕೆಳ ಹೊಟ್ಟೆಯ ಮೇಲೆ ಹಾಕಬೇಕು. ಕೂರೆಗಳನ್ನು ನಾಶಮಾಡಲು ಬೆಂಜೋಕೇನ್ 2 % ಉಪಯೋಗಿಸಬೇಕು. ಕಜ್ಜಿಗೆ ಉಪಯೋಗಿಸುವ ಬೆಂಜೋಯಿಲ್ ಬೆಂಜೊಯೇಟ್ ಕೂಡ ಹೇನ್ನುಂಬಿಕೆಗೆ ಅನುಕೂಲವಾಗಬಹುದು. ಕಣಜದ ಹುಳ ಅಥವಾ ತಗಣೆ ಕಡಿದರೆ ಗಾದರಿಯಂತೆ ಊದಿಕೊಂಡು ಅದರ ಮಧ್ಯದಲ್ಲಿ ಚುಕ್ಕೆ ಇರುತ್ತದೆ. ಕೆಲವು ನೊಣಗಳ ಮರಿಕೀಟಗಳ ಹರಿದಾಟದಿಂದ ಕೆಂಪು ಗೀರುಗಳು, ಊದಿದ ಗಡ್ಡೆಗಳೂ, ಕುರುಗಳೂ ಕಾಣುತ್ತವೆ. ಇದಕ್ಕೆ ನೊಣ ಮುಸುರಿಕೆ ಎಂದು ಕರೆಯುತ್ತಾರೆ. ಸೊಳ್ಳೆ ಕಡಿತದಿಂದ ತುರಿಕೆಯುಳ್ಳ ಗಾದರಿಗಳೇಳುವುವು. ಇರುವೆ, ಜೇನ್ನೊಣ ಮತ್ತು ಕಣಜದ ಹುಳಗಳ ಕಡಿತದಿಂದ ಕೆಲವೊಮ್ಮೆ ಕೆಂಪು ಗಾದರಿಗಳಲ್ಲದೆ ಒಗ್ಗದಿಕೆಯಿಂದ ಸುಸ್ತುಧಕ್ಕೆಯಾಗಿ, ಒಣಗಂಟಲು, ಬಾಯಾರಿಕೆ, ದುರ್ಬಲ ನಾಡಿ ಆಗಿ, ಎಚ್ಚರ ತಪ್ಪಬಹುದು. ನಾರುಹುಣ್ಣಿನ ಸೋಂಕಿನಿಂದ ಕಾಲು ಇಲ್ಲವೇ ಪಾದದ ಮೇಲೆ ಶೇಂಗಾ ಬೀಜದಷ್ಟು ಒಂದು ತುರಿಸುವ ಗುಳ್ಳೆ ಏಳುತ್ತದೆ. ಪೂರ್ವ ವಲಯದ ಹುಣ್ಣು ಉಸುಕು ನೊಣ ಕಡಿದ ಭಾಗದಲ್ಲಿ ಬರುತ್ತದೆ. ಒಂದು ಕಠಿಣ ಬಾವಾಗಿ ಒಡೆದು ಕೆಲವು ತಿಂಗಳು ಹುಣ್ಣುವಾಯದಂತೆ ಪೀಡಿಸುತ್ತದೆ. ಈ ಹುಣ್ಣು ಲೀಷ್ಮಾನಿಯಾ ಎಂಬ ಪರಪಿಂಡಿ ರೋಗಾಣು ಸೋಂಕಿನಿಂದಾದುದು. ಸೊಂಕು ಉಸುಕು ನೊಣದಲ್ಲಿರುತ್ತದೆ. ನೊಣ ಕಡಿದಾಗ ರೋಗಿಯ ಚರ್ಮದೊಳಗೆ ಹೊಕ್ಕು ಸೊಂಕು ಹತ್ತಿಸಿ ಹುಣ್ಣಾಗಿಸುತ್ತದೆ. ಅದು ವಾಸಿಯಾದಾಗ ನಕ್ಷತ್ರಾಕಾರದ ಗುರುತು ಉಳಿಯುತ್ತದೆ. ರೋಗವನ್ನು ಆಂಟಿಮೊನಿ ಲೋಹದ ಚುಚ್ಚುಮದ್ದಿನಿಂದ ಗುಣಪಡಿಸಬೇಕು.

4. ಏಕಾಣುಜೀವಿಕ ರೋಗಗಳು

ಸಾಮಾನ್ಯವಾಗಿ ನಮ್ಮ ದೇಶದಲ್ಲಿ ಹೆಚ್ಚಾಗಿ ಸಂಭವಿಸುವ ಚರ್ಮ ರೋಗಗಳಲ್ಲಿ ಮೊದಲನೆ ಸ್ಥಾನ ಪರಪಿಂಡಿಗಳ ರೋಗಗಳಾದರೆ, ಎರಡನೇ ಸ್ಥಾನ ಏಕಾಣುಜೀವಿಗಳ ರೋಗಗಳಿಗೆ ಸೇರಿದ್ದು. 19ನೇ ಮತ್ತು 20ನೇ ಶತಮಾನಗಳಲ್ಲಿ ಈ ರೋಗಗಳ ಕಾರಣಗಳಾದ ರೋಗಾಣುಗಳನ್ನು ಗೊತ್ತು ಹಚ್ಚಿ ರೋಗ ನಿವಾರಣೆಗಾಗಿ ಬೇಕಾದ ಕ್ರಿಮಿನಾಶಕ ಔಷಧಗಳನ್ನು ಕಂಡು ಹಿಡಿಯಲಾಗಿದೆ.

ಕೀವು ಹತ್ತಿರುವ ರೋಗಕ್ಕೆ ಕೀವು ಚರ್ಮ ಎಂದು ಹೇಳುವರು. ಕೀವು ಉತ್ಪನ್ನ ಮಾಡುವ ಏಕಾಣುಜೀವಿಗಳು ಚರ್ಮದೊಳಕ್ಕೆ ಹೊಕ್ಕು ವಿವಿಧ ರೂಪದ ಕುರುಗಳೇಳುವುವು. ಹೊರಚರ್ಮದ ಮೇಲ್ಪೊರೆಯಲ್ಲಿ ಇವು ಆಕ್ರಮಿಸಿದರೆ ಉಂಟಾಗುವ ರೋಗಕ್ಕೆ ಅಂಟು ತುರಿ, ಹೊರ ಕೀವು ಚರ್ಮ, ಅಥವಾ ಸಾಮಾನ್ಯ ಕೀವುಗುಳ್ಳೆ ಎನ್ನುತ್ತಾರೆ. ಇಂಥ ರೋಗ ಚಿಕ್ಕ ಮಕ್ಕಳಲ್ಲಿ ಸಾಮಾನ್ಯವಾಗಿದ್ದು ಒಬ್ಬರಿಂದೊಬ್ಬರಿಗೆ ಬಹು ಬೇಗ ಹರಡುತ್ತದೆ. ಮೊದಲು ಚರ್ಮ ಉರಿತದಿಂದ ಕೆಂಪಾಗಿ ಬಲು ಸಣ್ಣ ನೀರುಗುಳ್ಳೆಗಳೇಳುವುವು. ಗುಳ್ಳೆಗಳಲ್ಲಿ ಕೀವು ಸೇರಿ ಒಡೆದು ಕೀವು ಸುರಿಯುತ್ತದೆ. ಕೀವು ಒಣಗಿ ಹಳದಿ ಇಲ್ಲವೇ ಜಿಗುಟಾದ ಹುರುಕು ಕಾಣುತ್ತದೆ. ಅಂದರೆ ರೋಗ ಗುರುತಿಸುವುದು ಈ ಸಿಪ್ಪೆಯಿಂದ. ಈ ಕೀವು ಮತ್ತು ಹುರುಕಿನಲ್ಲಿ ಕೀವು ಕಣಗಳನೇಕ. ಬೇರೆ ಮಕ್ಕಳಿಗೆ ಈ ಸಿಪ್ಪೆ ತಗುಲಿದರೆ ಅವರಿಗೂ ರೋಗ ಅಂಟುತ್ತದೆ. ಒರಸುವ ಬಟ್ಟೆಗೆ ಕೀವು ಮತ್ತು ಸಿಪ್ಪೆ ಅಂಟಿರುತ್ತದೆ. ಅದೇ ಬಟ್ಟೆ ಅಂದರೆ ಚೌಕ, ವಸ್ತ್ರ, ಮಗ್ಗಲು ಹಾಸಿಗೆಗಳು ಇತರ ಮಕ್ಕಳಿಗೆ ರೋಗ ಹರಡಲು ಕಾರಣವಾಗುತ್ತವೆ. ಚಿಕ್ಕ ಮಕ್ಕಳಲ್ಲಿ ನಿರೋಧಕ ಶಕ್ತಿ ಇಲ್ಲವಾದ್ದರಿಂದ ಈ ರೋಗ ಅವರಲ್ಲಿ ಸಾಧಾರಣವಾಗಿ ಕಾಣಿಸಿಕೊಳ್ಳುತ್ತೆ. ಮಕ್ಕಳ ಶಾಲೆ ಮತ್ತು ವಿದ್ಯಾರ್ಥಿನಿಲಯಗಳಲ್ಲಿ ರೋಗ ಸಿಡುಬಿನಂತೆ ಹರಡುತ್ತದೆ. ಹಸುಕೂಸಿಗೆ ಅಂಟಿದಲ್ಲಿ ಮರಣಕ್ಕೆ ಕಾರಣವಾಗಬಹುದು. ಮುಖ

ಮತ್ತು ಮೈಯಲ್ಲಿ ಈ ರೋಗ ಮೊದಲು ಕಾಣಿಸಿಕೊಳ್ಳುತ್ತೆ. ಸ್ರವಿಸುವ ರಸ ಮತ್ತು ಜಿಗಟು ಹುರುಕಿನಿಂದ ದೇಹದ ಇತರ ಭಾಗಗಳಿಗೆ ಸ್ವಸಂಪರ್ಕ ದಿಂದ ಬಹುಬೇಗ ಹರಡುತ್ತದೆ. ಸ್ಟೆಫಿಲೋಕಾಕ್ಕಸ್ ಮತ್ತು ಸ್ಟ್ರೆಪ್ಟೋಕಾಕ್ಕಸ್ ರೋಗಾಣುಗಳೇ ಇದರ ಕಾರಣ. ಈ ರೋಗಕ್ಕೆ ಶೀಘ್ರ ಚಿಕಿತ್ಸೆ ಮಾಡಿದಲ್ಲಿ ಯಾವ ಗುರುತೂ ಇರದಂತೆ ರೋಗ ನಿವಾರಣೆಯಾಗುತ್ತದೆ. ಶೇಕಡ 0 9ರಷ್ಟು ಉಪ್ಪನ್ನು ಹಾಕಿದ ಬಿಸಿ ನೀರಿನಿಂದ ರೋಗ ತಗುಲಿದ ಚರ್ಮವನ್ನು ತೋಯಿಸಿ, ಸ್ವಚ್ಛವಾದ ಬಟ್ಟೆಯಿಂದ ನೆನೆಸುತ್ತಾ ಸ್ರವಿಸುವ ರಸವನ್ನು ಒರೆಸಿ ಅಂಟು ಸಿಪ್ಪೆಗಳನ್ನು ನೆನಸಿ, ಸಡಿಲಿಸಿ ತೆಗೆಯಬೇಕು. ನಂತರ ಜೀವಿವಿರೋಧಕ ಔಷಧವಿರುವ ಮುಲಾಮನ್ನು ಹಚ್ಚಬೇಕು. ಟೆಟ್ರಾಸೈಕ್ಲಿನ್, ಜೆಂಟಾಮೈಸಿಸ್ ಔಷಧಗಳು ಗುಣಪಡಿಸಬಲ್ಲವು. ಪೆನಿಸಿಲಿನ್ ಮುಲಾಮನ್ನು ಎಂದಿಗೂ ಹಚ್ಚಬಾರದು. ಹಾಗೆ ಮಾಡಿದಲ್ಲಿ ರೋಗಾಣು ಗಳು ಔಷಧ ನಿಗ್ರಹಣ ಶಕ್ತಿ ಹೊಂದಿ ದೇಹದ ಮುಖ್ಯವಾದ ಒಳ ಅಂಗಗಳಲ್ಲಿ ಸೇರಿ ರೋಗಿಯ ಮರಣಕ್ಕೆ ಕಾರಣವಾಗುತ್ತವೆ. ಹೀಗೆ ಮದ್ದುಗಳಿಗೆ ಜಗ್ಗ ದಂತಾದ ರೋಗಾಣುಗಳು ಉತ್ಪನ್ನವಾದರೆ ಮಾನವ ಕುಲಕ್ಕೇ ಮಾರಕ. ಚರ್ಮದ ಮೇಲೆ ಉಪಯೋಗಿಸಬಹುದಾದ ಪ್ರತ್ಯೇಕ ಜೀವಿವಿರೋಧಕ ಔಷಧಗಳೆಂದರೆ, ನಿಯೋಮೈಸಿನ್, ಬ್ಯಾಸಿಟ್ರಾಸಿನ್, ಟೈರೋಥ್ರಿಸಿನ್, ಗ್ರಾಮಿಸಿಡಿನ್ ಮತ್ತು ಫ್ರಾಮೈಸೆಟಿನ್. ಕೀವುಚರ್ಮ ಅನೇಕರಲ್ಲಿ ಎಷ್ಟೋ ಸಲ ಬರುತ್ತದೆ. ಆದ್ದರಿಂದ ಪೆನಿಸಿಲಿನ್ನನ್ನು ಪದೇ ಪದೇ ಕೊಡಬೇಕಾಗು ತ್ತದೆ. ಹಾಗೆ ಉಪಯೋಗಿಸಿದರೆ, ಒಗ್ಗದಿಕೆಯ ಪ್ರತಿಕ್ರಿಯೆ ಆಗಬಹುದು. ಆಗ ಮನುಷ್ಯನಿಗೆ ಇನ್ನಾವುದೇ ರೋಗಕ್ಕಾಗಿ ಪೆನಿಸಿಲಿನ್ನನ್ನು ಕೊಟ್ಟರೂ ಒಗ್ಗದಿಕೆಯಿಂದ ಮೈತುರಿ, ಕೆಂಪು ದದ್ದುಗಳು, ನಾಡಿ ದುರ್ಬಲತೆ, ಮೂರ್ಛೆ ಮತ್ತು ಸಾವೂ ಕೆಲವು ನಿಮಿಷಗಳಲ್ಲಿ ಆಗಬಹುದು. ವೈದ್ಯರಿಗೆ ಇದನ್ನು ತಡೆಗಟ್ಟಲು ಬಹು ಕಷ್ಟ. ಆದ್ದರಿಂದ ಒಳ ಅಂಗಗಳ ರೋಗಗಳಿಗೆ ಉಪ ಯೋಗಿಸುವ ರೋಗಾಣುನಾಶಕ, ಪೆನಿಸಿಲಿನ್ನಂತಹ ಜೀವವಿರೋಧಕ ಔಷಧ ಗಳನ್ನು ಚರ್ಮದ ಮೇಲೆ ಎಂದಿಗೂ ಉಪಯೋಗಿಸಬಾರದು.

ಕೀವುಕಣಗಳು ಒಳಚರ್ಮದಲ್ಲಿ ಹೊಕ್ಕಾಗ ಆಳದ ಕೀವುಚರ್ಮವಾಗಿ ಅಂಥಾ ರೋಗಗಳಲ್ಲಿ ಮುಖ್ಯವಾಗಿ ಕುರು ಮತ್ತು ರಕ್ತಕುರುಗಳು ಏಳುತ್ತವೆ. ರೋಮದ ಬೇರಿಗೆ ಕೀವುಕಣಗಳು ಹತ್ತಿ ಉರಿತವಾದಾಗ ಕುರು ಏಳುತ್ತದೆ.

ರೋಮದ ಬೇರಿನ ಸುತ್ತ ಕೀವು ಸೇರಿಕೊಂಡು ಒಂದು ಕೋಶದಂತೆ, ನೋವುಳ್ಳ ಚಿಕ್ಕ ಗುಳ್ಳೆಯಾಗುತ್ತದೆ. ಆದುದರಿಂದ ಈ ಕುರುವಿಗೆ ಕೀವುಗುಳ್ಳೆ ಎನ್ನುತ್ತಾರೆ. ಅದು ದೊಡ್ಡದಾದಂತೆ ಚೂಪಾದ ತುದಿಯುಳ್ಳ ಕುರು ಚರ್ಮದ ಮೇಲೆ ಕಾಣುತ್ತದೆ. ಅದು ತುಂಬಾ ನೋಯುತ್ತದೆ. ಒಳ ಚರ್ಮ ಅಂದರೆ ರೋಮದ ಬೇರು ಮತ್ತು ಮೈ ಜಿಡ್ಡು ಗ್ರಂಥಿ ನಶಿಸಿ, ಗುಳ್ಳೆಯ ತುದಿಯಲ್ಲಿ ಒಡೆದು ಕೀವು ಸುರಿಯುತ್ತದೆ. ಆಮೇಲೆ ಗುಳ್ಳೆ ವಾಸಿಯಾಗಿ ಕಲೆಗಟ್ಟುತ್ತದೆ. ಸಿಹಿಮೂತ್ರದವರಿಗೆ ಕುರುಗಳು ಪದೇ ಪದೇ ಏಳುತ್ತವೆ. ಆರೋಗ್ಯ ಕುಂದಿದಾಗ, ಕೊಳಕಾದಾಗ ಕುರುಗಳು ಏಳುತ್ತವೆ. ಕುರುಗಳಿಗೆ ಕಾರಣವಾದ ಸ್ಟಫಿಲೋಕಾಕಸ್ ಆರೋಗ್ಯವಂತರಲ್ಲಿ ತೊಂದರೆಮಾಡದೆ, ಗಂಟಲು, ಮೂಗಿನ ತುದಿ, ಆಸನದ ಸುತ್ತ, ಉಗುರುಸುತ್ತ ಮುಂತಾದ ಸ್ಥಳಗಳಲ್ಲಿ ಚರ್ಮದ ಮೇಲೆ ಅಡಗಿರುತ್ತದೆ. ಅವಕಾಶ ಸಿಕ್ಕಿದಾಗ ಚರ್ಮದೊಳಗೆ ನುಗ್ಗಿ ರೋಗವನ್ನುಂಟುಮಾಡುತ್ತದೆ. ಆದುದರಿಂದ, ದಿನಾಲೂ ಈ ಭಾಗಗಳನ್ನು ಚೆನ್ನಾಗಿ ಸಾಬೂನಿಂದ ತೊಳೆಯುತ್ತಿರಬೇಕು. ಕುರುಗಳು ಹಣ್ಣಾಗಿ ಒಡೆಯುವುದಕ್ಕೆ ಮುಂಚೆಯೇ ಜೀವವಿರೋಧಕಗಳನ್ನು ನುಂಗಲು, ಇಲ್ಲವೇ ಚುಚ್ಚುಮದ್ದಾಗಿ ಕೊಡಬೇಕು. ಚಾಕುವಿನಿಂದ ಕೊಯ್ಯದೆ ಗುಣ ಪಡಿಸುವುದು ಒಳ್ಳೆಯದು. ಹಣ್ಣಾದಾಗ ಕೀವನ್ನು ಪೂರ್ತಿ ತೆಗೆಯಲು, ಅದನ್ನು ಸ್ವಚ್ಛವಾದ ಉಪಕರಣಗಳಿಂದ ಕೊಯ್ಯಬಹುದು.

ಮೂರಕ್ಕಿಂತ ಹೆಚ್ಚು ರೋಮಬೇರುಗಳನ್ನು ಕೀವು ಆಕ್ರಮಿಸಿದಾಗ ರಾಜಕುರು ಬರುತ್ತದೆ. ಮೊದಲು ಅಗಲವಾದ, ನೋವುಳ್ಳ ದಪ್ಪಗಡ್ಡೆ ಏಳುತ್ತದೆ. ಅದು ದೊಡ್ಡದಾಗುತ್ತಾ ಒಳಚರ್ಮ ನಶಿಸಿ ಮೆತ್ತಗಾಗಿ ಅನೇಕ ತೂತುಗಳಿಂದ ರಕ್ತ ಮತ್ತು ಕೀವು ಹೊರಬರುತ್ತವೆ. ಅನೇಕ ಕೀವು ಕಂಡಿಗಳಂತೆ ಕಾಣುವುದರಿಂದ ಜರಡಿಹುಣ್ಣೆಂದೂ, ಈ ರೋಗ ಸಿಹಿಮೂತ್ರ ರೋಗವಿರುವ ಐಶ್ವರ್ಯವಂತರಲ್ಲಿಯೇ ಸಾಧಾರಣವಾಗಿ ಕಾಣುವುದರಿಂದ ರಾಜಕುರು ಎಂತಲೂ ಕರೆಯುತ್ತಾರೆ. ಕತ್ತಿನ ಹಿಂದೆ, ಬೆನ್ನಿನ ಮೇಲೆ ಸಾಮಾನ್ಯವಾಗಿ ಕಾಣುವುದರಿಂದ ಬೆನ್ನುಫಣಿ ಎಂದೂ ಕರೆಯುತ್ತಾರೆ. ತ್ವರಿತವಾಗಿ ಜೀವಿರೋಧಕಗಳನ್ನು ಕೊಡಬೇಕು. ಹಣ್ಣಾದಾಗ ಶಸ್ತ್ರಕ್ರಿಯೆಯಿಂದ ಕೀವನ್ನು ಹೊರಡಿಸಬೇಕು. ಸಿಹಿಮೂತ್ರ ಕಾಯಿಲೆ ಇದ್ದರೆ ಅದಕ್ಕೆ ತಕ್ಕ ಚಿಕಿತ್ಸೆ ಮಾಡಬೇಕು. ಇಂಥವರಲ್ಲಿ ರೋಗ ನಿಗ್ರಹಣ ಶಕ್ತಿ ಇಲ್ಲದ್ದರಿಂದ, ನಿಶ್ಶಕ್ತ

ತೆಯ ಕಾರಣಗಳನ್ನು ಕಂಡುಹಿಡಿದು ತಕ್ಕ ಚಿಕಿತ್ಸೆ ಮಾಡಬೇಕು. ರಕ್ತ ಶುದ್ಧೀಕರಣ ಮತ್ತು ರಕ್ತ ವೃದ್ಧಿಯಾಗುವ ಟಾನಿಕ್‌ಗಳನ್ನು ಕೊಡಬೇಕು.

ಕೋಶಿಕುರಿತ

ರೋಮದ ಕೋಶಿಕಗಳ ಸುತ್ತ ಹೊರ ಇಲ್ಲವೇ ಒಳಚರ್ಮದಲ್ಲಿ ಕೀವು ಜೀವಕಣಗಳ ಆಕ್ರಮಣದಿಂದುಂಟಾದ ರೋಗವಿದು. ಕೂದಲಿದ್ದೆಡೆಗಳಲ್ಲೆಲ್ಲಾ ಇದು ಬರುತ್ತದೆ. ಗಡ್ಡದ ಕೂದಲುಗಳಿಗೆ ತಗುಲಿದಾಗ ನಾಪಿತ ಕುರು ಎಂದೂ, ಕಾಲಿನ ಕೂದಲುಗಳಿಗೆ ತಗುಲಿದಾಗ ಬೊಕಾರ್ಟನ ತುರಿ ಎಂದೂ ಕರೆಯುತ್ತಾರೆ. ಈ ರೋಗದ ಮುಖ್ಯ ಲಕ್ಷಣವೆಂದರೆ, ಕೂದಲು ಸುತ್ತ ಕೀವುಗುಳ್ಳೆ, ನೂರಾರು ಕೂದಲು ಸುತ್ತಾ ಕೀವುಗುಳ್ಳೆಗಳನ್ನು ಕಾಣಬಹುದು. ಸುಲಭವಾಗಿ ವಾಸಿಯಾಗುವುದಿಲ್ಲ. ಚಿಕಿತ್ಸೆಯೂ ಕಠಿಣ. ಈ ರೋಗದ ಏಕಾಣುಜೀವಿಗಳ ತಳಿಯನ್ನು ಪ್ರಯೋಗಶಾಲೆಯಲ್ಲಿ ಬೆಳೆಸಿ ಯಾವ ಜೀವವಿರೋಧಕ ಔಷಧಕ್ಕೆ ಅವು ಈಡಾಗುವುವೆಂದು ಕಂಡುಹಿಡಿದು ಅಂಥಾ ಔಷಧವನ್ನು ನುಂಗಲು ಇಲ್ಲವೇ ಚುಚ್ಚುಮದ್ದಾಗಿ ಕೊಡಬೇಕು. ಅದೇ ಔಷಧದ ಮುಲಾಮನ್ನೂ ಹಚ್ಚಬೇಕು. ಕೀವುಕಣಗಳ ಶಕ್ತಿ ಹೆಚ್ಚಾದಾಗ, ರೋಗಿಯ ನಿಗ್ರಹಣ ಶಕ್ತಿ ಕುಂದಿದಾಗ, ಬಹು ಬೇಗ ಚರ್ಮದೊಳಗಿನಿಂದ ಇತರ ಅಂಗ ಮತ್ತು ಊತಕಗಳಿಗೆ ಉರಿತ ಹರಡಿ ಅವು ನಾಶವಾಗಿ ಜ್ವರ, ನೋವೂ ಬರುತ್ತವೆ. ಜೀವಕ್ಕೆ ಅಗತ್ಯವಾದ ಹೃದಯ, ಎಲುಬು, ಶ್ವಾಸಕೋಶಗಳಿಗೂ ಆಕ್ರಮಿಸಿ ಮರಣಕ್ಕೆ ಇಲ್ಲವೇ ದೀರ್ಘಕಾಲದ ರೋಗಕ್ಕೆ ಕಾರಣವಾಗುತ್ತದೆ. ಇಂಥ ರೋಗಗಳು ಊತಕುರಿತ ಮತ್ತು ವಿಸರ್ಪಿ. ಇವು ತೀವ್ರಗತಿಯಿಂದ ಹರಡುವ ರೋಗಗಳು. ವಿಸರ್ಪಿ ಬಂದಾಗ ಚರ್ಮ ಕಾವೇರಿ ಊದಿಕೊಂಡು ಕೆಂಪಾಗಿ ಕ್ರಮೇಣ ಹರಡುತ್ತಿರುತ್ತದೆ. ಊದಿದ ಚರ್ಮದ ಮೇಲೆ ನೀರ್ಗುಳ್ಳೆಗಳೂ ಇರಬಹುದು. ಊತಕುರಿತ ಆದಾಗಲೂ ಚರ್ಮ ಕಾವೇರಿ, ಕೆಂಪಾಗಿ, ನೋವು ಮತ್ತು ಕೆಂಪು ಗೀರುಗಳುಳ್ಳ ಬಾವೂ, ಜ್ವರ ಬರುತ್ತವೆ. ಬಾವು ಶೀಘ್ರವಾಗಿ ಹರಡುವುದರಿಂದ ಅದರ ಅಂಚು ಸರಿಯಾಗಿ ಕಾಣಿಸುವುದಿಲ್ಲ. ಇಂಥಾ ಹರಡುವ ಕೀವು ಚರ್ಮ ಕಂಡಾಗ ರೋಗಿಯನ್ನು ಹಾಸಿಗೆಯಲ್ಲಿ ಮಲಗಿಸಿ, ಜೀವವಿರೋಧಕಗಳನ್ನು ಚುಚ್ಚಿ ಸರಿಯಾದ ಪಥ್ಯ, ಉಪಚಾರಗಳನ್ನು ಮಾಡಬೇಕು. ವೈದ್ಯರ ಸಹಾಯವನ್ನಾಗಲಿ ಆಸ್ಪತ್ರೆಯ ಅನುಕೂಲಗಳನ್ನಾಗಲಿ ಒದಗಿಸಬೇಕು.

ಚರ್ಮ ಕ್ಷಯ

ಕ್ಷಯ ರೋಗಾಣು ಮೈಕೋಬ್ಯಾಕ್ಟೀರಿಯಂ ಟುಬರ್ಕುಲೋಸಿಸ್, ಚರ್ಮದ ದ್ವಾರ ದೇಹದೊಳಕ್ಕೆ ನುಗ್ಗಿ ತೂರಬಹುದು. ಶ್ವಾಸಕೋಶದ ಕ್ಷಯರೋಗದಂತೆ, ಚರ್ಮ ಕ್ಷಯ ಗುಂಪಾಗಿ, ಅಸ್ವಚ್ಛತೆಯಿಂದ ಕೂಡಿದ ಕೈಗಾರಿಕಾ ಪಟ್ಟಣಗಳ ಹೋಲಗೇರಿಗಳಲ್ಲಿ ಅಲ್ಲದೆ, ರೈತಾಪಿ ಜನರಿರುವ ಗ್ರಾಮಗಳಲ್ಲಿಯೂ ಕಾಣಬಹುದು. ಏಕೆಂದರೆ ಕ್ಷಯ ಹತ್ತಿರುವ ಪ್ರಾಣಿಗಳೂ ಇರಬಹುದು. ಚರ್ಮ ಕ್ಷಯದ ಲಕ್ಷಣಗಳು ರೋಗಾಣುವಿನ ಆಕ್ರಮಣದ ಫಲವಲ್ಲದೆ, ಒಗ್ಗದಿಕೆಯ ಪರಿಣಾಮವೂ ಆಗಿರುವುವು.

ಸ್ಥಾನಿಕ ಚರ್ಮ ಕ್ಷಯದಲ್ಲಿ ಚರ್ಮದ ಮೇಲೆ ಕ್ಷಯ ರೋಗ ಕಾಣಿಸಿಕೊಂಡ ಲಕ್ಷಣಗಳು ಅಲ್ಲಿಯೇ ತೋರುತ್ತವೆ. ಪ್ರಥಮ ಚರ್ಮ ಕ್ಷಯವೆಂದರೆ, ರೋಗಾಣು ಪ್ರಥಮವಾಗಿ ಚರ್ಮದೊಳಗೇ ಹೊಕ್ಕು ರೋಗ ಉತ್ಪನ್ನವಾಗಿರುತ್ತದೆ. ಗುಂಪಾಗಿ ಚಿಕ್ಕ ಗುಳ್ಳೆಗಳು, ಇಲ್ಲವೇ ನೋವಿಲ್ಲದೆ ಗಡ್ಡೆಕಟ್ಟಿದ ಹುಣ್ಣು ಇದರ ಲಕ್ಷಣ. ಇವು ಮುಖದ ಮೇಲೆ ಇಲ್ಲವೇ ದೇಹದ ಮೇಲೆ ಮೊದಲು ಬರುತ್ತವೆ. ಕ್ಷಯಾಣುಸಾರ ಲಸಿಕೆಯನ್ನು ಚರ್ಮದಲ್ಲಿ ಚುಚ್ಚಿದಾಗ ಪ್ರತಿಕ್ರಿಯೆ ಪ್ರಾರಂಭದಲ್ಲಿ ಅನಿಶ್ಚಿತವಾಗಿದ್ದು ಕ್ರಮೇಣ ನಿಶ್ಚಿತವಾಗಿರುತ್ತದೆ. ನರೂಲಿಯುಕ್ತ ಚರ್ಮ ಕ್ಷಯದಲ್ಲಿ ನರೂಲಿ ವಿಷಕಣಗಳಿಂದ ರೋಗಿಯ ದೇಹದಲ್ಲಿ ನಿಗ್ರಹಣ ಶಕ್ತಿ ಬೆಳೆಯುತ್ತಿದ್ದಾಗ ಕಾಣಿಸುವ ಹುಣ್ಣು. ಹುಣ್ಣು ಒಣಗಿರುತ್ತದೆ. ರೋಸು ಸುರಿಯುವುದಿಲ್ಲ. ಮುಳ್ಳು ಮುಳ್ಳಾಗಿ ಇಲ್ಲವೇ ಹೂಕೋಸಿನಾಕಾರವಾಗಿ ನಿಧಾನವಾಗಿ ಚರ್ಮದ ಮೇಲೆ ಹಬ್ಬುತ್ತದೆ. ಗಾಯವಾದ ಸ್ಥಳದಲ್ಲಿ, ಇಲ್ಲವೇ ಕೆರೆದ ಗಾಯದ ಮೇಲೆ, ಒಂದು ಕೀವು ಗುಳ್ಳೆಯಾಗಿ ಒಡೆದು ಕೊಂಬುಪೊರೆ ಬೆಳೆದು ನರೂಲಿಯಂತೆ ಕಾಣುತ್ತದೆ. ಇದು ಕಟುಕರಲ್ಲೂ ಅಂಗರಚನಾಶಾಸ್ತ್ರ ಶಾಖೆಯಲ್ಲಿ ಕೆಲಸ ಮಾಡುವವರಲ್ಲೂ ಶವ ಪರೀಕ್ಷಾ ಕೋಣೆಯಲ್ಲಿ ಕೆಲಸ ಮಾಡುವವರಲ್ಲೂ ಅಂಗೈ, ಚಡ್ಡಿ ಹಾಕದ ಮಕ್ಕಳ ಕುಂಡಿಯ ಮೇಲೆ ಮತ್ತು ಹೆಂಗಸರ, ಗಂಡಸರ ಕಾಲು ಮತ್ತು ಪಾದಗಳ ಮೇಲೆ ಇಂಥಾ ಹುಣ್ಣು ಬೆಳೆಯುತ್ತದೆ.

ಗಂಡಮಾಲೆ ಎಂಬ ಕ್ಷಯದಿಂದ ಕುರೂಪಿಗಳಾಗುತ್ತಾರೆ. ಇದು ದೇಹದ ಒಳ ಅಂಗಗಳಿಗೆ ಕ್ಷಯ ಹತ್ತಿ ಚರ್ಮಕ್ಕೆ ಹರಡಿರುವ ರೋಗ.

ಕುತ್ತಿಗೆಯಲ್ಲಿರುವ ದುಗ್ಧ ಗ್ರಂಥಿಗಳು ದೊಡ್ಡವಾಗಿ ಗಂಟುಕಟ್ಟಿ ಚರ್ಮಕ್ಕೆ ಅಂಟಿಕೊಂಡು ನೀಲಿ ಬಣ್ಣ ತಾಳಿ, ಹಣ್ಣಾಗಿ ಒಡೆದು ಸೋರುವ ಹುಣ್ಣುಗಳಾಗುತ್ತವೆ. ವಾಸಿಯಾದಾಗ ಕಲೆಗಳು ಉಳಿಯುತ್ತವೆ. ಮತ್ತೆ ಒಡೆದು ಗಾಯಗಳಾಗುತ್ತವೆ. ಹೀಗೆ ಒಬ್ಬನ ಕುತ್ತಿಗೆಯ ಮೇಲೆ ನೂರಾರು ಹುಣ್ಣುಗಳು ಸುರಿಯುತ್ತಿರುವುದನ್ನೂ, ಕಲೆಯಿಂದ ಸುಕ್ಕಾದ ಚರ್ಮವನ್ನೂ ಗಂಟುಗಳನ್ನೂ ಕಾಣಬಹುದು. ಹಿಂದೆ ಇಂಥಾ ರೋಗ ಇಂಗ್ಲೆಂಡ್ ಯೂರೋಪ್ ದೇಶಗಳಲ್ಲಿ "ರಾಜನ ಶಾಪ" ಎಂದು ಹೆಸರಾಗಿತ್ತು. ಆ ಕಾಲದಲ್ಲಿ ಫ್ರಾನ್ಸಿನ ಮತ್ತು ಇಂಗ್ಲೆಂಡಿನ ರಾಜರು ಇಂಥಾ ರೋಗಿಗಳನ್ನು ವರ್ಷಕ್ಕೊಮ್ಮೆ ಸಮಾರಂಭದಲ್ಲಿ ತಮ್ಮ ಹಸ್ತದಿಂದ ಮುಟ್ಟಿ ಆಶೀರ್ವದಿಸುತ್ತಿದ್ದರು. ಇಂಥಾ ಆಶೀರ್ವಾದದಿಂದ ರೋಗ ಗುಣವಾಗುತ್ತೆಂದು ನಂಬುಗೆ ಇತ್ತು. ರಾಜರು ದೇವದೂತರೆಂದೂ ರಾಜರನ್ನು ಧಿಕ್ಕರಿಸಿದ್ದಕ್ಕಾಗಿ ರೋಗ ಬಂದಿತೆಂದೂ, ಶಾಪ ವಿಮೋಚನೆಯಾದ ಹೊರತು ರೋಗ ಗುಣವಾಗದೆಂಬ ನಂಬಿಕೆ ಇತ್ತು. ಪ್ರಖ್ಯಾತ ನಿಘಂಟುಕರ್ತ, ಪ್ರಬಂಧ ರಚನೆಯಲ್ಲೂ



ಚಿತ್ರ 4. ಸಾಮಾನ್ಯ ಚರ್ಮ ಕ್ಷಯ

ವಿಮರ್ಶೆಯಲ್ಲೂ ಹೆಸರಾದ ಡಾ. ಸ್ಯಾಮ್ಯುಯೆಲ್ ಜಾನ್ಸನ್ ಕೂಡ ಇಂಥಾ ರೋಗಕ್ಕೆ ತುತ್ತಾಗಿ, ತಾಯಿಯ ಬಲಾತ್ಕಾರದಿಂದ ತಾನು ಸ್ವತಃ ರಾಣಿಯ ಆಶೀರ್ವಾದ ಸಮಾರಂಭಕ್ಕೆ ಹಾಜರಾಗಿ ಯಾವ ಗುಣವೂ ಕಾಣದೆ ಮೂಢ ನಂಬಿಕೆಯ ಸಮಾರಂಭಕ್ಕೆ ನಾಂದಿ ತಂದನು. ಕೀಲು ಮತ್ತು ಎಲುಬು ಕ್ಷಯದಿಂದ ಹುಣ್ಣುಗಳೂ ಭಗಂದರಗಳೂ ಚರ್ಮದ ಮೇಲೆ ಕಾಣಬಹುದು. ಗುದ ಮತ್ತು ಬಾಯಿಗಳ ಸುತ್ತ ಗಂಟುಕಟ್ಟಿದ ಆಳವಿಲ್ಲದ ಹುಣ್ಣುಗಳೂ ಧ್ವನಿನಾಳದ ಕ್ಷಯ ಇಲ್ಲವೇ ಕರುಳು ಕ್ಷಯದಿಂದ ಏಳಬಹುದು.

ಸಾಮಾನ್ಯ ಚರ್ಮಕ್ಷಯ

ಸಾಮಾನ್ಯವಾಗಿ ಕ್ಷಯ ರೋಗಾಣುಗಳಿಂದುಂಟಾದ ಚರ್ಮ ರೋಗ. ನಿಜವಾಗಿಯೂ ಚರ್ಮ ಕ್ಷಯಿಸುತ್ತದೆ, ಸವೆಯುತ್ತದೆ. ಚರ್ಮದ ಮೇಲೆ ಜೀರಿಗೆ ಕಾಳಿನ ಗಾತ್ರದ ಅನೇಕ ಹಳದಿ ಕೆಂಪು ಗುಳ್ಳೆಗಳು ಹೊಳೆಯುವ ನುಣುಪಾದ ಚರ್ಮದ ಕೆಳಗೆ ಏಳುತ್ತವೆ. ಗುಳ್ಳೆಗಳು ಗುಂಪಾಗಿ ಅಗಲವಾದ ಗಡ್ಡೆಯಾಗುತ್ತದೆ. ಕ್ರಮೇಣ ಸುತ್ತಲೂ ಹಬ್ಬುತ್ತದೆ. ನಡುವೆ ಮಾದು ಕಲೆಗಳು ಕಾಣುತ್ತವೆ. ಗಂಟುಗಳು ಒಡೆದು ಹುಣ್ಣಾಗುತ್ತವೆ. ಕಲೆಗಳೂ ಹುಣ್ಣಾಗಬಹುದು. ಚರ್ಮ ಸುಕ್ಕು ಕಟ್ಟಿ ವಿಕಾರವಾಗಬಹುದು. ಮೂಗಿನ ನಡು ಕಂಬದಲ್ಲೂ ಹುಣ್ಣಾಗಿ ನಶಿಸಿದಾಗ, "ಗಿಳಿ ಮೂಗು" ಆಗ ಬಹುದು. ಮೇಲ್ದವಡೆಯೂ ರೋಗಕ್ಕೆ ಮೂಲವಾಗಿ ನಶಿಸಿ ಹೋಗ ಬಹುದು. ಮಕ್ಕಳಲ್ಲಿ ಇದು ಮುಖ, ಕುತ್ತಿಗೆ, ಎದೆಯಲ್ಲಿ ಸಾಮಾನ್ಯವಾಗಿ ತೋರುತ್ತದೆ.

ರಕ್ತಜನಿತ ಚರ್ಮ ಕ್ಷಯ

ಕ್ಷಯ ರೋಗಾಣು ರಕ್ತ ಚಲನೆಯಲ್ಲಿ ದೇಹದಲ್ಲೆಲ್ಲಾ ಚಲಿಸಿ ಒಳಾಂಗ ಗಳಲ್ಲಿ ರೋಗವನ್ನುಂಟುಮಾಡಿ ನಿಗ್ರಹಣ ಶಕ್ತಿ ಕುಂದಿಸಿ ಇಲ್ಲವೇ ವ್ಯಕ್ತಿ ವರ್ತನೆ ಬದಲಿಕೆ ಉಂಟಾಗಿ ಚರ್ಮದ ಮೇಲೆ ಕಾಣುವ ಲಕ್ಷಣ. ಎಲ್ಲಾ ತರದ ಗುಳ್ಳೆಗಳು ಮೈ ತುಂಬಾ ಎಲ್ಲಾದರೂ ಏಳಬಹುದು. ಮುಖದ ನಡುವೆ ಎರಡೂ ಕೆನ್ನೆಗಳಲ್ಲಿ ಕೆಂಪು ಗುಳ್ಳೆಗಳು ಗುಂಪುಗಟ್ಟಿರಬಹುದು. ಗುಳ್ಳೆಗಳು ಕಾಯಿಗಟ್ಟಿ ಬಹಳ ದಿನಗಳನಂತರ, ಮಾಯಬಹುದು. ಚರ್ಮ ಕೆಂಪಾಗಿ, ಗಟ್ಟಿಯಾಗಿ, ಒರಟಾಗಿ ಬಹಳ ದಿನಗಳು ವಾಸಿಯಾಗದೆ ಹುಡುಗಿ

ಯರ ಕಾಲಿನ ಹಿಂಬದಿಯಲ್ಲಿ ನೋವಿಲ್ಲದೆ ಬರುವುದಕ್ಕೆ ಬೆಜಿನನ ಹುಣ್ಣು ಎಂದು ಕರೆಯುತ್ತಾರೆ. ಕೆಂಪಾಗಿ ಅಗಲವಾದ ಗುಳ್ಳೆ ಮಕ್ಕಳ ಕಣಕಾಲಿನಲ್ಲಿ ಕಂಡು ನೋವನ್ನುಂಟುಮಾಡುವ ಲಕ್ಷಣವಾದ ಕೆಂಗಂದೆ ಕಿಗ್ಗಂಟುವಿನಿಂದ ಮುಂದೆ ಶ್ವಾಸಕ್ಷಯ ಬರಬಹುದೆಂದು ಸೂಚಿಸುತ್ತದೆ.

ಸಕಾಲದಲ್ಲಿ ಚಿಕಿತ್ಸೆ ಮಾಡಿದರೆ ವಿಕಾರ ತಪ್ಪಿಸಿ, ರೋಗವನ್ನು ಪೂರ್ಣವಾಗಿ ಗುಣಪಡಿಸಬಹುದು. ಒಳಾಂಗ ಕ್ಷಯವಿರದೆ ಚರ್ಮ ಕ್ಷಯ ಒಂದೇ ಇದ್ದರೆ ಐಸೋನಿಯಾಜಿಡ್ ಔಷಧದ ಮಾತ್ರೆಗಳನ್ನು 9–12 ತಿಂಗಳೂ ದಿನವೂ ಕೊಡಬೇಕು. ಒಳಾಂಗಗಳ ಕ್ಷಯ ರೋಗವಿದ್ದಲ್ಲಿ ಇದರ ಜೊತೆಗೆ, ಸ್ಟ್ರೆಪ್ಟೋಮೈಸಿನ್ ಚುಚ್ಚುಮದ್ದನ್ನು 3–6 ತಿಂಗಳು ದಿನವೂ ಕೊಡಬೇಕು. ದಿನವೂ ಚರ್ಮವನ್ನು ಸಾಬೂನಿನಿಂದ ತೊಳೆಯುತ್ತಿರಬೇಕು.

ಉಪದಂಶ

ಮೇಹ ರೋಗಗಳಲ್ಲಿ ಪ್ರಸಿದ್ಧಿಯಾದ ಉಪದಂಶ ಟ್ರಿಪೋನಿಮಾ ಪಲ್ಲಿಡಾ ಎಂಬ ರೋಗಾಣುವಿದುಂಟಾದ ಬೇನೆ. ಇದು ಮಹಾ ಅಂಟುರೋಗ. ಸಂಭೋಗದಿಂದಲೇ ಈ ರೋಗ ಸಾಮಾನ್ಯವಾಗಿ ಜನನಾಂಗಗಳಲ್ಲಿ ಅಂಟಿ, ಚರ್ಮದೊಳಗೆ ನುಗ್ಗಿ ದೇಹದ ಎಲ್ಲಾ ಅಂಗ ಮತ್ತು ಊತಕಗಳಲ್ಲಿ ಹರಡುತ್ತದೆ. ಅಂಟಿದ ಸ್ಥಳದಲ್ಲಿ ಹುಣ್ಣಾಗುತ್ತದೆ. ರೋಗಿ ಬಸುರಿಯಾಗಿದ್ದರೆ ಭ್ರೂಣಕ್ಕೂ ನುಗ್ಗುವುದು. ಹುಟ್ಟುವ ಮಗು ರೋಗದಿಂದಲೇ ಜನಿಸುತ್ತದೆ, ಇಲ್ಲವೆ ಸಾಯುತ್ತದೆ.

ಉಪದಂಶ ರೋಗ ಸ್ವಯಾರ್ಜಿತವಾಗೂ ವಂಶಾರ್ಜಿತವಾಗೂ ಬರುತ್ತದೆ. ಮುಖ್ಯವಾಗಿ, ಈ ರೋಗ 3 ಹಂತಗಳಲ್ಲಿ ಕಾಣಿಸಿಕೊಳ್ಳುವುದು. ಸಂಭೋಗದಲ್ಲಿ ರೋಗಾಣು ರೋಗಿಯಿಂದ ನಿರೋಗಿಯ ದೇಹದಲ್ಲಿ ಸೇರುತ್ತದೆ. ಅಂದಿನಿಂದ ವ್ಯಾಧಿ ಹೊರದೋರುವ ಅವಧಿ 9–90 ದಿನಗಳೂ ಸರಾಸರಿಯಾಗಿ 15 ದಿನಗಳೂ ಆಗಬಹುದು. ಮೊದಲು ರೋಗಾಣು ಹೊಕ್ಕ ಜನನಾಂಗದ ಭಾಗದಲ್ಲಿಯೇ ಹುಣ್ಣಾಗುತ್ತದೆ. ಇದೇ ಪ್ರಾಥಮಿಕ ಉಪದಂಶದ ಚಿಹ್ನೆ. ನೋವೂ ಕೀವೂ ಇರುವುದಿಲ್ಲ. ದಿನ ದಿನಕ್ಕೆ ದೊಡ್ಡದಾಗುತ್ತಾ ಬಂದು ನಸುಗೆಂಪು ಬಣ್ಣದ ಹುಣ್ಣಿನ ತಳ ಗಟ್ಟಿಯಾಗಿ ಚರ್ಮದ ಮೇಲೆ ಒಂದು ಅಂಗಿ ಗುಂಡಿಯಂತೆ ಕಾಣುತ್ತದೆ. ಇದು ಎದ್ದ 8–10


ವಿನಗಳನಂತರ, ತೊಡೆಯ ಸಂದಿಯಲ್ಲಿ ದುಗ್ಧ ಗ್ರಂಥಿಗಳು ದಪ್ಪಗೆ ಗಟ್ಟಿಯಾಗಿ ಚರ್ಮದೊಳಗೆ ಹುದುಗಿಸಿದ ಗೋಲಿಗಳಂತೆ ಊದಿಕೊಂಡು ಒಂದೊಂದೂ ಬಿಡಿಬಿಡಿಯಾಗಿರುತ್ತವೆ. ಊತಕಗಳಲ್ಲಿ ಅಂಟಿಕೊಂಡಿರುವುದಿಲ್ಲ. ಗಟ್ಟಿಯಾದ ನಸುಗೆಂಪು ಹುಣ್ಣು ಮತ್ತು ಗಟ್ಟಿಯಾದ ದುಗ್ಧ ಗ್ರಂಥಿಗಳು,



ಚಿತ್ರ ೨. ಪ್ರಾಥಮಿಕ ಉಪದಂಶದ ಹುಣ್ಣು
(ಗಂಡಸಿನಲ್ಲಿ)

ಇರುವಾಗ, ಅಂಥ ಹುಣ್ಣಿಗೆ 'ಹಂಟರನ ಮೇಹಹುಣ್ಣು' ಎನ್ನುವುದುಂಟು. ಸಾಧಾರಣವಾಗಿ, ಈ ಹುಣ್ಣು ಜನನಾಂಗಗಳಲ್ಲಿ ಏಳುತ್ತದೆ. ಆದರೆ ತುಟಿ, ಸ್ತನ, ಗುದ ಕೈಬೆರಳ ಮೇಲೂ ಬರಬಹುದು. ಸಂಭೋಗ ವೈಪರೀತ್ಯ, ಚುಂಬನ ಮತ್ತು ಆಲಿಂಗನಗಳಿಂದ ದೇಹದ ಬೇರೆಡೆಗಳಲ್ಲೂ ಅಂಟುತ್ತದೆ.

ಚಿಕಿತ್ಸೆ ಇಲ್ಲದೆ ಪ್ರಥಮ ಹಂತದ ಹುಣ್ಣು ಒಂದೆರಡು ತಿಂಗಳಲ್ಲಿ ತಾನಾಗಿಯೇ ಅಣಗುತ್ತದೆ. ಈ ಅವಧಿಯಲ್ಲಿ ರೋಗಾಣುಗಳು ಸಾಕಷ್ಟು ಗುಣಿತವಾಗಿ ರಕ್ತಚಲನೆಯಲ್ಲಿ ಸೇರಿಕೊಂಡು ರೋಗಿಯ ಆತಿಥೇಯ ಜೀವಕಣಗಳ ನಿಗ್ರಹಣ




ಚಿತ್ರ 6. ಆದಿ ಉಪದಂಶದ ಮೇಹದುಣ್ಣು
(ಹೆಂಗಸರಲ್ಲಿ)

ಶಕ್ತಿಯನ್ನು ಕುಂದಿಸಿ ಇಲ್ಲವೆ ನಾಶಮಾಡಿ ದೇಹದ ಇತರ ಭಾಗಗಳಲ್ಲೂ ರೋಗ ತೋರುತ್ತದೆ. ದೇಹದ ಎಲ್ಲಾ ದುಗ್ಧ ಗ್ರಂಥಿಗಳೂ ದೊಡ್ಡದಾಗುತ್ತವೆ. ರೋಗಿಯ ಪರೀಕ್ಷೆ ಮಾಡುವ ವೈದ್ಯನ ಕೈಗೆ ಬಿಡಿಬಿಡಿಯಾಗಿ, ಕತ್ತು, ಕಂಕುಳು ಮತ್ತು ಮೊಣಕೈಗಳಲ್ಲಿ ತಾಕುತ್ತವೆ.

ರೋಗಾಣು ದೇಹಕ್ಕೆ ಸೇರಿ 6–8 ತಿಂಗಳ ಅವಧಿ ಕಳೆದ ಮೇಲೆ ಕಾಣುವ ಲಕ್ಷಣಗಳು ದ್ವಿತೀಯ ಹಂತದವು. ಮುನ್ಸೂಚನೆಯಾಗಿ, ಕೀಲು,

ಗಂಟಲುಃ ಮತ್ತು ಎಲುಬುಗಳ ನೋವುಗಳಿಂದ ದೇಹಾಲಸ್ಯ, ಸ್ವಲ್ಪ ಜ್ವರ ವಿರುತ್ತದೆ. ಚರ್ಮದ ಮೇಲೆ ಗುಲಾಬಿ ಬಣ್ಣದ ಚಿಕ್ಕಚಿಕ್ಕ ದದ್ದುಗಳು ತಲೆಯ ಮತ್ತು ಕುತ್ತಿಗೆಯ ಸುತ್ತ ಏಳುತ್ತವೆ. ಈ ಲಕ್ಷಣಗಳನ್ನು 'ಮೋಹ ಕಿರೀಟ', 'ರತಿಯ ಕೊರಳಪಟ್ಟಿ' ಎನ್ನುವುದುಂಟು. ಆಮೇಲೆ ಚಿಕ್ಕ



ಚಿತ್ರ 7. ಉಪದಂಶ : ಎರಡನೆಯ ಹಂತ

ದದ್ದುಗಳು, ಉದುರುವ ದದ್ದುಗಳು ಮತ್ತು ಕೂದಲಸುತ್ತ ಬೆಳೆಯುವ ದದ್ದುಗಳು ದೇಹದ ಎರಡೂ ಕಡೆ ನೂರಾರು ಕಾಣಿಸಿಕೊಳ್ಳುತ್ತವೆ. ನೋವು, ನವೆ, ಕೀವು ಏನೂ ಇರುವುದಿಲ್ಲ. ಇದೇ ವಿಶೇಷ. ದೇಹದ ಮಡಿಚುವ ಭಾಗ ಗಳಲ್ಲಿ, ಹೊಟ್ಟೆಯ ಪಾರ್ಶ್ವಗಳಲ್ಲಿ, ಪಾದ, ಅಂಗೈಗಳಲ್ಲೂ ಯಥೇಚ್ಛ

ವಾಗಿರುವುವು. ಪಾದ ಮತ್ತು ಅಂಗೈಯಲ್ಲಿ ಕಪ್ಪು ಇಲ್ಲವೆ ನೀಲಿ ಬಣ್ಣದ ದದ್ದುಗಳು, ಬೇರೆಡೆಗಳಲ್ಲಿ ಕಂಚು ಬಣ್ಣದವೂ ಇರುತ್ತವೆ. ನೀರು ಗುಳ್ಳೆಗಳು ಮಾತ್ರ ಉಪದಂಶದ ದ್ವಿತೀಯ ಹಂತದ ಲಕ್ಷಣಗಳಲ್ಲ. ಲೋಳೆಪರೆಗಳ ಮೇಲೆ ತೇವಗೂಡಿದ ಬಿಳಿಯ ದದ್ದುಗಳು ತುಟಿಯೊಳಗೂ, ನಾಲಗೆಯ ಮೇಲೂ, ದವಡೆಯೊಳಗೂ ಏಳುತ್ತವೆ. ಚರ್ಮ ಮತ್ತು ಲೋಳೆಪರೆ ಕೂಡುವೆಡೆಗಳಲ್ಲಿ ಎಂದರೆ, ತುಟಿಗಳ ಮೇಲೆ, ಗುದದ್ವಾರದಲ್ಲಿ, ಹೆಂಗಸಿನ ಯೋನಿಯ ಹೊರ ಮತ್ತು ಒಳ ಮೈಯಲ್ಲಿ ತೇವಗೂಡಿದ ಬಿಳಿಯ ಗುಳ್ಳೆಗಳು ಎದ್ದು ದೊಡ್ಡವಾಗಿ ಹೂಕೋಸಿನಂತೆ ಕಾಣಿಸುತ್ತವೆ. ಇಂಥ ಚಿಹ್ನೆಗಳಿಂದ ಸೋರುವ ರೋಸಿನಲ್ಲಿ ರೋಗಾಣುಗಳು ಅಪಾರವಾಗಿರುತ್ತವೆ. ಆದ್ದರಿಂದ ಚುಂಬಿಸಿದಾಗ, ಆಲಂಗಿಸಿದಾಗಲೂ ಪುರುಷ ಸಂಗ, ಗುದ ಲಿಂಗ ಸಂಭೋಗ ಮಾಡಿದಾಗಲೂ ರೋಗ ಹರಡುತ್ತದೆ.

ಎಲುಬು, ಕೀಲುಗಳಲ್ಲಿ ರೋಗಾಣು ಪ್ರವೇಶಿಸಿ ಎಲುಬನ್ನು ಮಂದ ಗೊಳಿಸಿ ಕೀಲುಗಳಲ್ಲಿ ಕೊರೆಯುವಂತಹ ನೋವುಂಟುಮಾಡುತ್ತದೆ. ಇಂಥ ನೋವು ರಾತ್ರಿ ವೇಳೆಯೇ ಹೆಚ್ಚು. ಎಲುಬಿನ ನಿಶ್ಶಕ್ತಿ ಮತ್ತು ಕೀಲುಗಳ ತೀವ್ರ ನೋವಿನಿಂದ ಚಲಿಸಲು ಕಷ್ಟವಾಗಿ ರೋಗಿ ಭಯಭ್ರಾಂತನಾಗುತ್ತಾನೆ.

ಈ ರೋಗದಿಂದ ಕಣ್ಣು ಕೆಂಪಾಗಬಹುದು. ಕಣ್ಣುಗುಡ್ಡೆಯ ಮುಂದಿರುವ ತಿಳಿ ಪರೆ ಮತ್ತು ಕನೀನಿಕೆಗಳಿಗೆ ರೋಗ ಹರಡಿ ದೃಷ್ಟಿ ಕಡಿಮೆಯಾಗಬಹುದು. ಇನ್ನು ಮುಂದೆ ರೋಗಾಣು ಮಿದುಳು ಮತ್ತು ಬೆನ್ನು ಹುರಿಗೆ ಹರಡಿ ನರಗಳಿಗೆ ರಕ್ತ ಕಡಿಮೆಯಾಗಿ ಒಂದು ಪಕ್ಕದ ಅವಯವ ಗಳಿಗೆ ಇಲ್ಲವೇ ಕಾಲುಗಳಿಗೆ ಅರನಾರಿಯಾಗಿ, ಬಿದ್ದು ಹೋಗಬಹುದು. ಹೀಗೆ ರೋಗ ಎರಡು ವರ್ಷಗಳ ಕಾಲ ವಿವಿಧ ರೋಗ ಲಕ್ಷಣ ಮತ್ತು ಚಿಹ್ನೆ ಗಳಿಗೆ ಕಾರಣವಾಗಿ ಅನೇಕ ರೀತಿ ಬಾಧಿಸುತ್ತದೆ. ಮನುಷ್ಯನಿಗೆ ತಿಳಿದ ಎಲ್ಲ ರೋಗಗಳನ್ನೂ ಇದು ಅನುಕರಿಸುತ್ತದೆ. ಆದ್ದರಿಂದ ಅನುಮಾನ ಬಂದಲ್ಲಿ ತಜ್ಞರ ಅಭಿಪ್ರಾಯ ಪಡೆಯಲೇಬೇಕು. ತಜ್ಞರಿಗೆ ಉಪದಂಶ "ಅನುಕರಣ ನಿಪುಣ" ಎಂಬುದು ತಿಳಿದಿದೆ. ಈ ಎರಡು ವರ್ಷಗಳೂ ರೋಗ ಆಗಾಗ್ಗೆ ಲಕ್ಷಣಗಳನ್ನೂ ಚಿಹ್ನೆಗಳನ್ನೂ ಹೊರದೋರುತ್ತಾ ರೋಗಿಯನ್ನು ಪೀಡಿಸುತ್ತಿರುತ್ತದೆ. ಹಾಗೆಯೇ ನಡುನಡುವೆ ರೋಗ ಅವ್ಯಕ್ತವಾಗೂ ಇರುತ್ತದೆ.

ಆಮೇಲೆ 2–4 ವರ್ಷಗಳು ಪೂರ್ತಿಯಾಗಿ ಅವ್ಯಕ್ತವಾಗಿಬಿಡುತ್ತದೆ. ಅಷ್ಟು ವರ್ಷಗಳೂ ರೋಗಿಗೆ ರೋಗವೇ ಇಲ್ಲವೇನೋ ಎಂಬಂತೆ ಭಾಸವಾಗುತ್ತದೆ. ಇವೆಲ್ಲವನ್ನು "ಆದಿ ಉಪದಂಶ" ಎಂದು ಹೇಳಲಾಗುತ್ತದೆ. ಪ್ರಥಮ ಮತ್ತು ದ್ವಿತೀಯ ಹಂತಗಳೆರಡೂ ಈ ಅವ್ಯಕ್ತ ಉಪದಂಶದಲ್ಲಿ ಕೂಡಿವೆ. ಈ ಅವಧಿಯಲ್ಲಿ ರೋಗ ಲಕ್ಷಣಗಳು ಹೊರಗಾಣುತ್ತಿದ್ದರೆ ಇಲ್ಲವೇ ಕಾಣದಿದ್ದರೂ, ರೋಗಿ ತನ್ನ ಸಂಭೋಗದ ಸಂಗಾತಿಗೆ ರೋಗವನ್ನು ಹರಡುತ್ತಾನೆ. ಹೆಂಗಸರಲ್ಲಿ ಪ್ರಥಮ ಉಪದಂಶವನ್ನು ಕಂಡುಹಿಡಿಯುವುದು ಬಹಳ ಕಷ್ಟಸಾಧ್ಯ. ಆದರೆ, ಯೋನಿಯೊಳಗೋ, ಗರ್ಭಕೋಶದ ಕುತ್ತಿಗೆಯ ತುದಿಯಲ್ಲೋ ಆಳದಲ್ಲಿ ಒಳಗಿರುತ್ತದೆ. ಯೋನಿಯ ಹೊರಭಾಗದಲ್ಲಿ ಇದ್ದರೆ ಮಾತ್ರ ಬಾಹ್ಯ ಪರೀಕ್ಷೆಯಿಂದ ನೋಡಬಹುದು. ಯೋನಿಯೊಳಗೆ ಹುಣ್ಣಾಗಿದ್ದರೆ, ಕೆಲವು ಸಲಕರಣೆಗಳಿಂದ ವೈದ್ಯ ಒಳಗಡೆ ಪರೀಕ್ಷಿಸಿ ತಿಳಿದುಕೊಳ್ಳಲು ಸಾಧ್ಯ. ಅಲ್ಲದೆ, ರೋಗಿಗೆ ಯಾವ ಬೇನೆಯೂ ಇದ್ದಂತೆ ಹೊರಗಾಣುವುದಿಲ್ಲ. ರೋಗಿ ನರಳುವುದೂ ಇಲ್ಲ. ಹೀಗಾಗಿ ತನಗೆ ರೋಗ ಬಂದಿದೆ ಎಂದು ತಿಳಿಯಲು ಎಷ್ಟೋ ವೇಳೆ ರೋಗಿಗೇ ಸಾಧ್ಯವಾಗುವುದಿಲ್ಲ. ದ್ವಿತೀಯ ಉಪದಂಶದಲ್ಲಿ, ಯಾವುದೋ ಪೀಡೆ ಇಲ್ಲವೇ ಸಿಡುಬು ಎದ್ದಿರಬಹುದೆಂದು ಭಾವಿಸುತ್ತಾಳೆಯೇ ಹೊರತು, ಕಾಯಿದೆಗೆ ವಿರೋಧವಾದ ಸಂಭೋಗದಿಂದ ಅಥವಾ ತನ್ನ ಪ್ರಿಯಕರನಿಂದ ಬಂದಿರಬಹುದೆಂದು ತಿಳಿಯಲಾರಳು. ರೋಗದ ನಿದಾನಕ್ಕಾಗಿ ಹುಣ್ಣುಗಳಿಂದ ಸುರಿವ ರಸವನ್ನು ಸೂಕ್ಷ್ಮದರ್ಶಿಯಲ್ಲಿ ಪರೀಕ್ಷಿಸಿ ರೋಗಾಣುವನ್ನು ಗುರುತಿಸಬೇಕು. ದೊಡ್ಡದಾಗಿರುವ ದುಗ್ಧಗ್ರಂಥಿಗಳಿಂದಲೂ ರಸವನ್ನು ತೆಗೆದು ರೋಗವನ್ನು ಹೀಗೇ ನಿರ್ಧರಿಸಬಹುದು. ಇಲ್ಲವೇ ಒಂದು ಗ್ರಂಥಿಯ ಚೂರನ್ನು ಶಸ್ತ್ರಕ್ರಿಯೆಯಿಂದ ತೆಗೆದು ಪ್ರಯೋಗಾಲಯದಲ್ಲಿ ಪರೀಕ್ಷಿಸಿ ತಿಳಿಯಬೇಕು. ಇವೆಲ್ಲಕ್ಕೂ ಸುಲಭವಾಗಿ, ರೋಗಿಯ ರಕ್ತವನ್ನು ಪರೀಕ್ಷಿಸಿ ತಿಳಿಯಬಹುದು. 1905 ರಲ್ಲಿ ವಾಸರ್ಮನ್, ಬೋರ್ಡೆ ಮತ್ತು ಗಂಗೂ ಸಿದ್ಧಾಂತದ ಪ್ರಕಾರ, ಪೂರಕ ಬಂಧಿಸುವ ಪರೀಕ್ಷೆಯನ್ನು ವಿವರಿಸಿದ್ದಾನೆ. ಇದರಿಂದ ರಕ್ತದಲ್ಲಿನ ರೋಗದ ಸಂಭವತೆ ಗೊತ್ತಾದರೂ, ಇದು ಬಹು ಜಟಿಲವಾದ್ದು. ಇದಕ್ಕೆ ಅನೇಕ ಸಲಕರಣೆಗಳು ಬೇಕು. ಇತ್ತೀಚೆಗೆ ಸುಲಭವಾದ ಹೊಸ ಪರೀಕ್ಷೆಯನ್ನು ಕಂಡುಹಿಡಿದಿದ್ದಾರೆ. ಇದಕ್ಕೆ (ವಿ.ಡಿ. ಆರ್. ಎಲ್.) 'ಮೇಹರೋಗ ಸಂಶೋಧನ ಪ್ರಯೋಗ ಕೇಂದ್ರದ ಪರೀಕ್ಷೆ'

ಎನ್ನುತ್ತಾರೆ. 1945 ರಲ್ಲಿ ಕಂಡುಹಿಡಿದರೂ, ಭಾರತದಲ್ಲಿ 1958 ರಿಂದ ವ್ಯಾಪಕವಾಗಿ ಬಳಕೆಯಲ್ಲಿದೆ. ರೋಗಿಯ ರಕ್ತವನ್ನು ತೆಗೆದು ಅದರಿಂದ ರಕ್ತರಸವನ್ನು ಬೇರ್ಪಡಿಸಿ, ಕಾರ್ಡಿಯೋಲೈಪಿನ್ ರಸವನ್ನು ತಕ್ಕ ಪ್ರಮಾಣದಲ್ಲಿ ಬೆರೆಸಿ, ಕುಲುಕಿ ಸೂಕ್ಷ್ಮದರ್ಶಿಯಲ್ಲಿ ನೋಡಿದಾಗ ಗಂಟು ಕಟ್ಟಿದ್ದರೆ, ಪ್ರತಿಕ್ರಿಯೆ ಇರುವುದನ್ನು ತೋರಿಸುತ್ತದೆ. ಆಗ ರಕ್ತವನ್ನು ಕೊಟ್ಟವನಿಗೆ ಈ ರೋಗವಿದೆ ಎಂದು ತಿಳಿಯಬೇಕು. ಪ್ರತಿಕ್ರಿಯೆ ಇಲ್ಲ ದಿದ್ದರೆ ರೋಗವಿಲ್ಲ ಎಂದರ್ಥ. ಆದರೆ, ಪ್ರಥಮ ಹಂತದ ಉಪದಂಶ ದಲ್ಲೂ ಇಂಥಾ ಉತ್ತರ ಬರಬಹುದು. ರೋಗ ಉತ್ಪನ್ನವಾಗಿ ಸುಮಾರು ಒಂದು ತಿಂಗಳನಂತರ, ಇಲ್ಲವೇ ಪ್ರಥಮ ಹಂತದ ಒಂದು ವಾರದನಂತರ ಪ್ರತಿಕ್ರಿಯೆ ಇದೆ ಎಂದು ತೋರಿಸುತ್ತದೆ. ಆಗ ಜಾರಿಯಲ್ಲಿದ್ದ, ವಾಸ ರ್ಮನ್, ಕಾನ್, ಮತ್ತು ವಿ. ಡಿ. ಆರ್. ಎಲ್. ಈ ಮೂರೂ ರಕ್ತ ಪರೀಕ್ಷೆಗಳ ಗುಣಗಳನ್ನು ಭಾರತದ ಎಲ್ಲಾ ಪರೀಕ್ಷಾಲಯಗಳ ಸಹಕಾರದಿಂದ ವಿಖ್ಯಾತ ರಾಜಮ್ ಮತ್ತು ರಂಗಯ್ಯ ಅವರಿದ್ದ ಮದರಾಸಿನ ಆಸ್ಪತ್ರೆಯಲ್ಲಿ ತುಲನೆಮಾಡಿ ವಿ. ಡಿ. ಆರ್. ಎಲ್. ಪರೀಕ್ಷೆಯೇ ಸುಲಭ ಮತ್ತು ನಂಬ ಲರ್ಹವಾದ್ದು ಎಂದು ಸಿದ್ಧಪಡಿಸಿ ನಿಬಂಧವನ್ನು ಪ್ರಪಂಚ ಆರೋಗ್ಯ ಸಂಸ್ಥೆಯ ಪತ್ರಿಕೆಯಲ್ಲಿ ಪ್ರಕಟಿಸಿರುವೆನು. ಅಂದಿನಿಂದ ಈ ಪರೀಕ್ಷೆಗೆ ಬೇಕಾದ ಕಾರ್ಡಿಯೋಲೈಪಿನನ್ನು ಭಾರತದಲ್ಲಿಯೇ ತಯಾರಿಸಲು ಯತ್ನಿಸ ಲಾಗಿದೆ. ಅಲ್ಲದೆ ನಾಡಿನ ಎಲ್ಲೆಲ್ಲೂ ಈ ಪರೀಕ್ಷೆಯನ್ನೇ ಉಪಯೋಗಿಸ ಬೇಕೆಂದು ಸರಕಾರ ನಿರ್ದೇಶಿಸಿದೆ. ಈ ಪರೀಕ್ಷೆ ಉಪದಂಶ ರೋಗ ಕ್ರಿಮಿಗೆ ಏನೇನೂ ಸಂಬಂದಪಟ್ಟುದಲ್ಲ. ವಿದೇಶಗಳಲ್ಲಿ 1950ರಿಂದ ಈ ರೋಗಾಣುವಿಗೆ ಸಂಬಂಧಪಡುವ ಇನ್ನಷ್ಟು ಪರೀಕ್ಷೆಗಳನ್ನು ಕಂಡುಹಿಡಿದಿ ದ್ದಾರೆ. ಇದಕ್ಕಾಗಿ ರೋಗಾಣನ್ನು ಮೊಲಗಳ ತರಡಿಗೆ ಚುಚ್ಚಿ, ಪ್ರಯೋ ಗಾಲಯಗಳಲ್ಲಿ ಬೆಳೆಸಬೇಕು. ಅಲ್ಲಿ ಬೆಳೆದು ಜೀವಂತ ಇರುವ ರೋಗಾಣು ಗಳ ಸಾರಕವನ್ನು ತೆಗೆದು ರೋಗಿಯ ರಕ್ತರಸಕ್ಕೆ ಬೆರೆಸಿ ಸೂಕ್ಷ್ಮದರ್ಶಿ ಯಲ್ಲಿ ನೋಡಿದರೆ ಅವು ನಿಶ್ಚಲವಾಗಿರುತ್ತವೆ. ಇದಕ್ಕೆ ಟಿ. ಪಿ. ಐ. ಅಂದರೆ ಈ ರೋಗಾಣುಗಳ ನಿಶ್ಚಲಕ ಪರೀಕ್ಷೆ ಎಂದು ಕರೆಯುತ್ತಾರೆ. ಇದು ಬಹಳ ಜಟಿಲವಾದ್ದು. ಇಂಥಾ ಪರೀಕ್ಷೆಯನ್ನು ಆಧಾರವಾಗಿ ಮಾತ್ರ ಪ್ರಯೋಗ ಶಾಲೆಗಳಲ್ಲಿ ಮಾಡುತ್ತಾರೆ. ದ್ವಿತೀಯ ಉಪದಂಶದಲ್ಲಿ ಎಲ್ಲಾ ರೋಗಿಗಳ ರಕ್ತ ವಿ. ಡಿ. ಆರ್. ಎಲ್. ಪ್ರತಿಕ್ರಿಯೆ ತೋರಿಸುತ್ತದೆ. ಅನುಮಾನ

ಬಂದಲ್ಲಿ, ಈ ಟಿ.ಪಿ.ಐ. ಪರೀಕ್ಷೆ ಮಾಡಬಹುದು. ಅವ್ಯಕ್ತ ಉಪದಂಶ ವನ್ನು ಕಂಡುಹಿಡಿಯಲು ಈ ರಕ್ತ ಪರೀಕ್ಷೆಗಳು ಬಹಳ ಅನುಕೂಲಕರ. ರೋಗದ ಯಾವ ಲಕ್ಷಣಗಳಾಗಲಿ ಚಿಹ್ನೆಗಳಾಗಲಿ ಆಗ ಇರುವುದಿಲ್ಲ. ರೋಗವನ್ನು ಅನುಭವಿಸಿದ್ದರೂ ರೋಗಿಯೇ ಮರೆತಿರಬಹುದು. ಆದಿ ಉಪ ದಂಶದ ಚಿಹ್ನೆಗಳು ಗುಣವಾದಾಗ, ಕಲೆಗಳು ಉಳಿಯುವುದಿಲ್ಲ. ರೋಗ ಹೀಗೇ ಅವ್ಯಕ್ತವಾಗಿಯೇ ಅಡಗಿರುತ್ತದೆ. ಇಂಥಾ ಸಮಯದಲ್ಲಿ ರೋಗ ವಿರುವುದನ್ನು ಕಂಡುಹಿಡಿದು, ಚಿಕಿತ್ಸೆ ಮಾಡಿದರೆ ಜೀವನಕ್ಕೇ ಬಹುರೀತಿಯಲ್ಲಿ ತೊಂದರೆ ಕೊಡುವ ತೃತೀಯ ಹಂತದ ಉಪದಂಶ ತೋರದಂತೆ ಚಿಕಿತ್ಸೆ ಮಾಡಬಹುದು. ಅಲ್ಲದೆ, ಇಂಥವರ ಸಂಪರ್ಕದಿಂದಲೂ ರೋಗ ಇತರರಿಗೆ ಹಬ್ಬುತ್ತದೆ. ರೋಗ ಬಹು ಜನರಿಗೆ ಹಬ್ಬದಂತೆ ತಡೆಹಿಡಿಯಲೂ ರಕ್ತ ಪರೀಕ್ಷೆ ಬಹಳ ಅನುಕೂಲ. ರೋಗವಿದೆ ಎಂದು ತಿಳಿದಾಗ ಚಿಕಿತ್ಸೆ ಮಾಡಿ ದರೆ, ರೋಗ ಗುಣವಾಗುವುದಲ್ಲದೆ ಪರರಿಗೆ ಹಬ್ಬುವುದಿಲ್ಲ.

ದೇಹದೊಳಗೆ ರೋಗಾಣುಗಳು ನುಗ್ಗಿದ 4 ವರ್ಷಗಳನಂತರ, ರೋಗಿ ಅನುಭವಿಸುವ ಜಾಡ್ಯಕ್ಕೆ ಮೀರಿದ ಉಪದಂಶ ಎಂದು ಕರೆಯುತ್ತಾರೆ. ಮನುಷ್ಯನ ಜೀವನ ಪರ್ಯಂತ ಈ ರೋಗ ಲಕ್ಷಣಗಳು ಕಾಣಿಸುತ್ತವೆ. ರೋಗಿಯ ಮರಣ ಶಯ್ಯೆಯವರೆಗೂ ರೋಗ ಉಲ್ಬಣವಾಗುತ್ತಿರುತ್ತದೆ. ಕಣ್ಣು ಮುಚ್ಚಾಲೆ ಆಟದಂತೆ, ಆಗಾಗ್ಗೆ ರೋಗದ ಚಿಹ್ನೆಗಳು ಹೊಸ ಹೊಸ ಅಂಗಗಳಲ್ಲಿ ಕಂಡುಬರುತ್ತವೆ. ಒಂದು ಅಂಗಕ್ಕೆ ತಗುಲಿದ ರೋಗ ವಾಸಿಯಾ ಯಿತಲ್ಲಾ ಎಂದು ತಿಳಿದು, ರೋಗವನ್ನು ಮರೆಯಬಹುದು. ಕೆಲವು ದಿನಗಳ ನಂತರ, ಇನ್ನೊಂದೆಡೆ ಅಥವಾ ಇತರ ಅಂಗಗಳಲ್ಲಿ ರೋಗ ಗೋಚರವಾಗ ಬಹುದು. ತಡವಾದ ಉಪದಂಶದ ರೋಗಿ ಇತರರಿಗೆ ರೋಗವನ್ನು ಹಂಚ ಲಾರನು. ಅವನು ಅನುಭವಿಸುವ ರೋಗ ಮಾತ್ರ ಊತಕಗಳನ್ನು ನಾಶಮಾಡು ತ್ತದೆ. ನಿಚ್ಚಳವಾದ ನೀಲಿ ಬಣ್ಣದ ಆಕಾಶದಲ್ಲಿ ಮಿಂಚು ಕಂಡಂತೆ, ಯಾವ ವಿಧವಾದ ನೋವೂ ಇಲ್ಲದೆ, ದಿಢೀರ್ ಗಂತಿ ಅಥವಾ ಗಡ್ಡೆ ದೇಹದ ಯಾವ ಭಾಗದಲ್ಲಾದರೂ ಏಳಬಹುದು ಚರ್ಮ ಇಲ್ಲವೇ ಎಲುಬಿನ ಮೇಲೆ ಬರುವುದೇ ಸಾಮಾನ್ಯ. ಗಡ್ಡೆ ಒಂಟಿಯಾಗಿ ಇರುತ್ತದೆ. ಒಂದಕ್ಕಿಂತ ಹೆಚ್ಚು ಗಡ್ಡೆಗಳು ಬರುವುದು ವಿರಳ. ದೊಡ್ಡದಾಗುತ್ತ ಬಂದು ಕೆಲವು ದಿನಗಳ ನಂತರ ಇದು ಹಣ್ಣಾಗಿ ಒಡೆದು ಹುಣ್ಣಾಗುತ್ತದೆ. ಆ ಹುಣ್ಣು ಅಂಟು

ಅಂಟಾದ ಕೆಂಪಾದ ಕೆಟ್ಟ ಹೊಲಸಿನ ರೋಸಿನಿಂದ ತುಂಬಿರುತ್ತದೆ. ಆ ಹೊಲಸನ್ನು ತೆಗೆದಾಗ ಹುಣ್ಣಿನ ಗೋಡೆಗಳು ನೇರವಾಗಿರುತ್ತವೆ. ಇದಕ್ಕೆ ಅಂಟುಗಂತಿ ಎನ್ನುತ್ತಾರೆ. ಚಿಕ್ಕಚಿಕ್ಕ ಗಂಟುಗಳೂ ವರ್ತುಲಾಕಾರವಾಗಿ ಚರ್ಮದ ಮೇಲೆ ಎದ್ದು, ಒಡೆದು ಹುಣ್ಣಾಗಬಹುದು. ಇಂಥಾ ಚರ್ಮದ ಗಂಟುಗಳು ಅಥವಾ ಹುಣ್ಣಿನ ಗಂಟುಗಳು ಎದೆ ಅಥವಾ ಹೊಟ್ಟೆಯ ಮೇಲೆ ಬರುವುದು ಸಾಮಾನ್ಯ. ದೇಹದ ಬೇರೆಡೆಗಳಲ್ಲೂ ಬರಬಹುದು. ಹುಣ್ಣುಗಳು ಚಕ್ರ, ಅರ್ಧ ಚಕ್ರ ಇಲ್ಲವೇ ಚಕ್ರದ ಭಾಗಗಳಾಕಾರವಾಗಿರುತ್ತವೆ. ಒಡೆದ ಗಂಟುಗಳು ಹಕ್ಕು ಕಟ್ಟಿರುತ್ತವೆ. ಹುಣ್ಣು ಆರಿದಾಗ ಕಾಗದದಂತೆ ತೆಳುವಾದ ಕಲೆ ಉಳಿಯುತ್ತದೆ. ಇಂಥಾ ಹುಣ್ಣುಗಳಿರುವ ಕಡೆಗಳಲ್ಲಿ ದುಗ್ಧ ಗ್ರಂಥಿಗಳು ದೊಡ್ಡವಾಗಿರುವುದಿಲ್ಲದ್ದು ಒಂದು ವಿಶೇಷ, ಎಲುಬು ದಪ್ಪನಾಗಿ ಊದಿಕೊಂಡು ರಾತ್ರಿಹೊತ್ತೇ ನೋವು ಕೊಡಬಹುದು. ಕೀಲುಗಳ ಸುತ್ತ ಗಟ್ಟಿಯಾದ ಗಂಟುಗಳು ಬೆಳೆಯುವುವು. ನಾಲಿಗೆಯ ಮೇಲೆ, ಒಳದವಡೆಯಲ್ಲಿ ಮತ್ತು ಮೂಗಿನ ನಡು ಗೋಡೆ, ತಿಂದು ಹೋಗಿ ತೂತು ಬಿದ್ದು, ಮೂಗು ಚಪ್ಪಟೆಯಾಗಬಹುದು. ಬಾಯಿಯ ಅಂಗುಳೂ ಮೇಲ್ದವಡೆಯೂ ಹಾಳಾಗಿ ಮೂಗು ಬಾಯಿ ಎರಡೂ ಒಂದೇ ಆಗಬಹುದು. ಮೇಲೆ ಹೇಳಿದ ಚಿಹ್ನೆಗಳು ರೋಗಾಣುವಿನ ಆಕ್ರಮಣದ ಫಲವಲ್ಲ. ಅದಕ್ಕೆ ದೇಹದ ಅಸಹಜ ಪ್ರತಿಕ್ರಿಯೆಯಿಂದ ಒಗ್ಗದಂತಾಗಿ ಊತಕಗಳ ನಾಶಕ್ಕೆ ಕಾರಣವಾಗುತ್ತದೆ. ಹೀಗೆ ಒಳಾಂಗಗಳಲ್ಲೂ ಅಂಟುಗಂತಿಗಳು ಹುಟ್ಟಿ ಅನೇಕ ರೋಗಗಳು ಬರುತ್ತವೆ. ಯಕೃತ್ತಿನ ಅಂಟುಗಂತಿಯಿಂದ ಜಲೋದರ ಬರುವುದು. ಹೊಟ್ಟೆಯಲ್ಲಿ ಬಂದರೆ, ಅರಗುವ ಶಕ್ತಿ ಕುಂದುತ್ತದೆ. ಹೊಟ್ಟೆ ತೆಳ್ಳನೆಯ ತೊಗಲಿನ ಚೀಲದಂತಾಗುತ್ತದೆ. ಕಣ್ಣಿನಲ್ಲಿ ಬಂದರೆ ದೃಷ್ಟಿ ಮಾಂದ್ಯವಾಗಿ ವಿಕಾರವಾಗುವುದು. ಇಂಥಾ ರೋಗಗಳು ನೋಡಲು ಭಯಾನಕವಾದರೂ ನೋವು ಮಾತ್ರ ಇರುವುದಿಲ್ಲ.

ಮಹಾ ಧಮನಿಯಲ್ಲಿ ರೋಗ ಹತ್ತಿ ರಕ್ತನಾಳ ಹಾಳಾಗಿ ಅಗಲವಾಗಿ ಬುಡ್ಡೆಯಂತೆ ಉಬ್ಬುತ್ತದೆ. ಹೃದಯಕ್ಕೆ ರೋಗ ಹಬ್ಬಿದರೆ, ಅಶಕ್ತತೆ, ದೌರ್ಬಲ್ಯದ ಉರಿತ, ಸ್ತಂಭನ ಆಗಬಹುದು.

ಕೆಳಭಾಗದ ಮಿದುಳಿನ ಪರೆಯ ಉರಿತದಿಂದ ತಲೆನೋವು, ಕಿವುಡು, ಅರ್ಧ ಮುಖ ಇಲ್ಲವೇ, ಅರ್ಧ ದೇಹ ಇಲ್ಲವೇ ಎರಡೂ ಕಾಲುಗಳ ಪಾರ್ಶ್ವ

ವಾಯು ಮುಂತಾದವು ಆಗಬಹುದು. ರೋಗ ಹತ್ತಿ 15–30 ವರ್ಷಗಳು ಕಳೆದ ಮೇಲೆ ಮಿದುಳೆಲ್ಲ ಹಾಳಾಗಿ ಹುಚ್ಚರ ಸಾಮಾನ್ಯ ಅರನಾರಿ ಉಂಟಾಗುತ್ತದೆ. ಮನಸ್ಸು ವಿಕಾರವಾಗಿ ರೋಗಿಗೆ ತನ್ನ ಪರಿಸರದ ಅರಿವೇ ಇರುವುದಿಲ್ಲ. ಜ್ಞಾಪಕ ಶಕ್ತಿ ಹಾಳಾಗಿ ವಿಕಾರವಾಗುತ್ತದೆ. ಒಟ್ಟಿನಲ್ಲಿ. ಒಂದು ತೆರನ ಹುಚ್ಚನಾಗುತ್ತಾನೆ.

ಬೆನ್ನುಹುರಿ ಸವೆದು ಮೂತ್ರ ವಿಸರ್ಜನೆ ಸಂಪೂರ್ಣವಾಗದು. ಅವನು ಕಣ್ಮುಚ್ಚಿ ನಿಲ್ಲಲೂ ಅಶಕ್ತನಾಗುತ್ತಾನೆ. ಕಣ್ಣಿಗೆ ಬೆಳಕು ಗೊತ್ತಾಗುವುದಿಲ್ಲ. ಕಣ್ಣು ಕ್ಷೀಣಿಸಿ ಕುರುಡಾಗುತ್ತದೆ.

ಕೀಲುಗಳ ಸ್ನಾಯುಗಳು ಸವೆಯುವುವು. ಮೊಣಕಾಲು ಜೋಳಿಗೆಯಂತೆ ಜೋತು ಬಿದ್ದು ವಿಪರೀತವಾಗಿ ಎಲ್ಲಾ ದಿಕ್ಕಿನಲ್ಲೂ ಕಾಲನ್ನು ಬಗ್ಗಿಸಬಹುದು. ಇದನ್ನು ಷಾರ್ಕೋನ ಕೀಲು ಎಂದು ಕರೆಯುತ್ತಾರೆ. ಹೀಗೆಯೇ ತೊಡೆ, ಹಿಮ್ಮಡಿ, ಮಣಕೈ, ಭುಜ, ಅಂಗೈ ಇವುಗಳ ಕೀಲುಗಳು ಮಾರ್ಪಡಬಹುದು. ಕೊನೆಯಲ್ಲಿ, ರೋಗಿ ಹುಚ್ಚ, ಕುರುಡ, ಪಾರ್ಶ್ವರೋಗಿಯಾಗಿ ಸಮಾಜಕ್ಕೆ ಭಾರವಾಗುತ್ತಾನೆ. ಕೊನೆಗೆ ಹೃದಯ ಸ್ತಂಭನದಿಂದ ಅಸುನೀಗುತ್ತಾನೆ. ರೋಗಾಣುಗಳಲ್ಲಿ ಉಪದಂಶವು ಮಾತ್ರ ತಾಯಿಯ ರಕ್ತದಿಂದ ಭ್ರೂಣಕ್ಕೆ ಸಾಗುವ ಶಕ್ತಿ ಉಳ್ಳವು. ಗರ್ಭಿಣಿಗೆ ಈ ರೋಗವಿದ್ದರೆ ಗರ್ಭಪಾತವಾಗಬಹುದು. ಕೆಲವು ತಿಂಗಳ ಮುಂಚೆಯೇ ಹೆರಿಗೆಯಾಗಬಹುದು. ಇಲ್ಲವೇ 9 ತಿಂಗಳನಂತರ ಸತ್ತ ಮಗು ಜನಿಸಬಹುದು. ನಾಲ್ಕು ವರ್ಷಗಳ ವರೆಗೂ ಈ ರೋಗ ಗರ್ಭಕ್ಕೆ ತೊಂದರೆ ಕೊಡುತ್ತದೆ. ಆದಿ ಉಪದಂಶದಿಂದ ಗರ್ಭ ಅಸಹಜವಾಗಿ ಮುಗಿಯುತ್ತದೆ. ಮೊದಲು ಗರ್ಭಪಾತ, ಎರಡನೆಯದು ಅಪೂರ್ಣ ಹೆರಿಗೆ, ಮೂರನೆಯದು ನಿರ್ಜೀವ ಮಗುವಾಗಿ, 3–4 ಹೆರಿಗೆಗಳ ನಾಶದಿಂದ ಹೆಂಗಸು ನಿರಾಶೆಯಿಂದ ನಿಶ್ಯಕ್ತಳಾಗಬಹುದು. ಮುಂದಿನ ಗರ್ಭ ಪೂರ್ಣ ಬೆಳೆದು ಜೀವಂತ ಮಗು ಹುಟ್ಟಬಹುದು. ಆದರೆ ಅಂತಹ ಮಗುವೂ ಮುಂದೆ ಹಲವು ಪೀಡೆಗಳಿಂದ ನರಳಬೇಕಾಗುತ್ತದೆ. ತಾಯಿಯ ರೋಗದಿಂದ ಮಗು ಅನುಭವಿಸುವ ಅನೇಕ ತರಹದ ಯಾತನೆಗಳಿಗೆ ಆಗರ್ಭ ಉಪದಂಶ ಎನ್ನುತ್ತಾರೆ. ಹುಟ್ಟುವಾಗಲೂ ಆರೆಂಟು ವಾರಗಳ ವರೆಗೂ ಮಗು ಚೆನ್ನಾಗಿದ್ದು ಆಮೇಲೆ ಆದಿ ಉಪದಂಶದ ಚಿಹ್ನೆಗಳನ್ನು ತೋರುತ್ತದೆ. ಇನ್ನೂ ಕೆಲವು ರೋಗ ಲಕ್ಷಣಗಳಲ್ಲಿ ಮೂಗಿನ

ಉರಿತದಿಂದ ಗೊಣ್ಣೆ ಪುರುಕಾಗಿ ಸದಾ ನೀರು ಬಸಿಯುತ್ತಿರುತ್ತದೆ. ಮೂಗಿನಿಂದ ಉಸಿರಾಡಲು ಆತಂಕವಾಗುತ್ತದೆ, ಕೊನೆಗೆ ಮೂಗು ಕಟ್ಟುತ್ತದೆ. ಬಾಯಿಂದಲೇ ಉಸಿರಾಡಲು ಮಗು ಯತ್ನಿಸುತ್ತಿರುತ್ತದೆ. ಧ್ವನಿನಾಳದ ಉರಿತವಾದಾಗ ಮಗು ಅತ್ತರೂ ಶಬ್ದ ಬರುವುದಿಲ್ಲ. ನಿರುಚ್ಚಾರ ರೋಧನೆ ಇದರ ಒಂದು ವಿಶಿಷ್ಟ ಲಕ್ಷಣ. ರೋಗ ಉಲ್ಬಣವಾದರೆ, ಮಗು ಒಣಗಿ ಮುದಿಯಾದ ಶಿಶುವಿನಂತೆ ಕಂಡು ತಾಮರೆ ಆಗುತ್ತದೆ. ಮುಖದ ಮೇಲೆ, ಗುದಲಿಂಗಗಳ ಸುತ್ತ ಮತ್ತು ಅಂಗೈ ಪಾದಗಳಲ್ಲಿ ನೀರ್ಗುಳ್ಳೆಗಳು ಏಳುವುವು. ನೀರ್ಗುಳ್ಳೆಗಳು ಆದಿ ಉಪದಂಶದ ಚಿಹ್ನೆ. ನೀರ್ಗುಳ್ಳೆಗಳು ಮೂಗಿನ ನಡುಗೋಡೆಯಲ್ಲಿ ಎದ್ದು ಮೂಗಿನ ಕಂಬ ತಿಂದುಹೋಗುತ್ತದೆ. ಎರಡೂ ಕಣ್ಣುಗಳ ನಡುವೆ ಮೂಗು ಹಳ್ಳ ಬಿದ್ದಂತಾಗುತ್ತದೆ. ಇದಕ್ಕೆ ಅಪ್ಪಚ್ಚಿ ಮೂಗು (ಚಟ್ಟೆಮೂಗು) ಎನ್ನುತ್ತಾರೆ. ಎಲುಬುಗಳು ಚೆನ್ನಾಗಿ ಬೆಳೆಯು



ಚಿತ್ರ ೮. ಆಗರ್ಭ ಉಪದಂಶದಿಂದ ವಿಕಾರವಾದ ಮುಖ

ವುದಿಲ್ಲ. ಮೊಣಕೈ ಮತ್ತು ಮೊಣಕಾಲ ಎಲುಬುಗಳು ಅಲ್ಲಲ್ಲಿ ಕರಗಿರುತ್ತವೆ. ಎಕ್ಸ್‌ಕಿರಣ ಚಿತ್ರದಲ್ಲಿ ಆ ಎಲುಬಿನ ತುದಿಗಳು ಗರಗಸದಾಕಾರವಾಗಿ ಇರುವುದನ್ನು ತೋರಿಸುತ್ತವೆ. ಎಲುಬು ಮತ್ತು ಕೀಲುಗಳಲ್ಲಿ ನಿಶ್ಶಕ್ತಿಯಾಗಿ, ಹುಸಿ ಅರನಾರಿ ಆಗುತ್ತದೆ. ತಲೆ ಚಿಪ್ಪಿನ ಎಲುಬುಗಳು ನಾಲ್ಕು ಮೂಲೆಗಳಲ್ಲಿ ಬಹಳ ಉಬ್ಬಿ ತಲೆಚಿಪ್ಪು ನಾಲ್ಕು ಗುಬಟುಗಳ ಆಕಾರ ಹೊಂದುತ್ತದೆ. ಮಗುವಿನ ರಕ್ತ ವಿ.ಡಿ.ಆರ್. ಎಲ್. ಪರೀಕ್ಷೆಯಲ್ಲಿ ಪ್ರತಿಕ್ರಿಯೆ ಇರುವುದನ್ನು ತೋರಿಸುತ್ತದೆ. ತಾಯಿಯ ರಕ್ತವೂ ಅಷ್ಟೇ. ಆದರೆ ತಂದೆಯ ರಕ್ತ ಇದನ್ನು ತೋರಿಸದೆ ಇರಬಹುದು. ತಂದೆಯಿಂದ ತಾಯಿಗೆ ರೋಗ ಹರಡುವುದೇನೋ ನಿಜ. ತಂದೆ ಔಷಧಗಳನ್ನು ಸೇವಿಸಿ ಗುಣ ಹೊಂದಿರಬಹುದು. ಮಗುವಿನ 2 ವರ್ಷಗಳ ವರೆಗೂ ಈ ಯಾತನೆಗಳಿರುವುವು. ಆಮೇಲೆ, ಅಂದರೆ ಮಗು ಶಾಲೆಗೆ ಹೋಗಲು ಪ್ರಾರಂಭಿಸಿದನಂತರ, ಕೆಲವು ಲಕ್ಷಣಗಳೂ ಚಿಹ್ನೆಗಳೂ ಬರುತ್ತವೆ. ಅವನ್ನು ತಡವಾದ ಆಗರ್ಭ ರೋಗದ ಗುಣಗಳೆಂದು ಕರೆಯಬಹುದು. ಕಣಕಾಲಿನ ಎಲುಬು ದಪ್ಪನಾಗಿ, ಒರಟಾಗಿ ಕತ್ತಿಯ ಒರೆಯಂತೆ ಮುಂದೆ ಬಾಗಿದಂತೆ ಕಾಣಿಸುತ್ತದೆ. ಕಣ್ಗೊಂಬೆ ಸುತ್ತ ಇರುವ ಪಾರದರ್ಶಕ ಪರೆ ಉರಿತಕ್ಕೊಳಗಾಗಿ, ಅದರ ತುಂಬ 'ಹೂವು'ಗಳು (ಬಿಳಿಯ ಮಚ್ಚೆಗಳು) ಮೋಡಗಳಂತೆ ಕಾಣಿಸಿಕೊಳ್ಳುತ್ತವೆ. ಮಣ್ಣಿನ ಗಾಜಿನಂತೆ ಮಬ್ಬಾಗುತ್ತದೆ. ಕಣ್ಣೀರು ಸುರಿಯುತ್ತಿರುತ್ತದೆ. ಬಿಸಿಲಿನಲ್ಲಿ ಕಣ್ಣು ತೆರೆಯಲಾಗುವುದಿಲ್ಲ. ಕಣ್ಣಿನೊಳಗೆ ನೋಯುತ್ತದೆ. ದೃಷ್ಟಿಹೀನವಾಗುತ್ತದೆ. ಬಿಳಿ ಮಚ್ಚೆಗಳು ಒಟ್ಟಾಗಿದ್ದರೆ ಕುರುಡಾಗುತ್ತದೆ. ಇದಕ್ಕೆ ಊತಕಾಂತರ ಕೋಡ್ಪರೆಯುರಿತ ಎಂದು ಹೇಳುತ್ತಾರೆ.

ಮೇಲ್ದವಡೆಯ ಮಧ್ಯದ ಹಲ್ಲುಗಳು ವಿಕಾರವಾಗುತ್ತವೆ. ಕಡಿಯುವ ತುದಿಯ ಮಧ್ಯದಲ್ಲಿ ಸರಿಯಾಗಿ ಬೆಳೆಯದೆ ಗುಳಿ ಬೀಳುತ್ತದೆ. ಅದು ದುಂಡಾಗಿ ದಪ್ಪದಪ್ಪನಾಗುತ್ತದೆ. ಇಂಥಾ ಹಲ್ಲುಗಳಿಗೆ ಕಚ್ಚಿಕ್ಕಿದ ಬಾಚಿ ಹಲ್ಲುಗಳೆಂದು ಕರೆಯುವುದುಂಟು.

ಮಿದುಳಿನಲ್ಲೂ ಉರಿತವಾಗಿ ತರಾತೆರನ ತಲೆನೋವು ಬರಬಹುದು. ಎರಡೂ ಕಡೆ ಕಿವಿನರಗಳ ಉರಿತದಿಂದಾಗುವ ನರ ಕಿವುಡುತನ ಆಗರ್ಭ ಉಪದಂಶದ ಒಂದು ಮುಖ್ಯ ಲಕ್ಷಣ.

ಹಲ್ಲುಗಳು, ಕಿವಿಗಳು, ಕಣ್ಣುಗಳು ಇವು ಮೂರರಲ್ಲೂ ಆಗುವ ವಿಕಾರಗಳೂ ಆಗರ್ಭ ಉಪದಂಶಕ್ಕೆ ವಿಶಿಷ್ಟವಾದ ಹಚಿನ್ಸನ್ನನ ತ್ರಿಗುಣಗಳೆಂದು

ಹೆಸರಾಗಿವೆ. ಉಪದಂಶದ ರೋಗಾಣುಗಳನ್ನು ಕಂಡುಹಿಡಿಯಲು ಅನೇಕ ವರುಷಗಳ ಮೊದಲೇ ಹಚಿನ್ಸನ್ ಇವನ್ನು ಕಂಡುಹಿಡಿದಿದ್ದನು.

ಕೀಲುಗಳು ಅತ್ಯಲ್ಪ ಪೆಟ್ಟಿಗೂ ಊದುತ್ತವೆ. ಕೀಲುಗಳಲ್ಲಿ ನೀರು ತುಂಬುತ್ತದೆ. ನೋವು ಮಾತ್ರ ಇರುವುದಿಲ್ಲ. ಕೀಲುಗಳ ಊತಕ ಪಾರ್ಕಿನ್ಸನ ಕೀಲಿನಂತೆ ಸವೆಯುವುದಿಲ್ಲ. ಇಂಥಾ ಕೀಲುಗಳನ್ನು ಕ್ಲಟ್ಟನ್ನನ ಕೀಲುಗಳೆಂದು ಕರೆಯುವುದುಂಟು.

ಈ ರೋಗದ ಮಗು ತಾಯಿಯ ಹಾಲನ್ನು ಕುಡಿಯಬಹುದು. ಏಕೆಂದರೆ, ರೋಗದ ತಾಯಿಯಿಂದಲೇ ಮಗುವಿಗೆ ರೋಗ ಬಂದಿರುತ್ತದೆ. ತಾಯಿ ಹೊಸತಾಗಿ ಮಗುವಿನಿಂದ ರೋಗವನ್ನು ಪಡೆಯಬೇಕಿಲ್ಲ. ಇದೇ ರೀತಿ, ಉಪದಂಶ ರೋಗಿಯಾದ ತಾಯಿ ತನ್ನ ಮಗುವಿಗೆ ಹಾಲು ಕೊಡಲಡ್ಡಿಯಿಲ್ಲ. ಹುಟ್ಟುವ ಮುಂಚೆಯೇ ಮಗುವಿಗೆ ರೋಗ ಹರಡಿರುತ್ತದೆ. ಇವನ್ನು ಆಗರ್ಭ ಉಪದಂಶದ ನಿಯಮಗಳೆಂದು ಕರೆಯಬಹುದು. ಸಾರಾಂಶವೇನೆಂದರೆ, ಮಗು ತಾಯಿಯ ಹಾಲನ್ನು ಕುಡಿಯಬಹುದು. ತಾಯಿ ತನ್ನ ಕೂಸಿಗೆ ಹಾಲನ್ನು ಕೊಡಲೂ ಹಿಂಜರಿಯಬಾರದು. ಇಬ್ಬರಿಗೂ ರೋಗವಿರುತ್ತದೆ. ಲಕ್ಷಣಗಳಿರಬಹುದು, ಇಲ್ಲವೇ ಅವ್ಯಕ್ತವಾಗಿರಬಹುದು.

ಉಪದಂಶದ ರೋಗಾಣು, ಸಂಭೋಗದಿಂದಲೇ ಅಲ್ಲದೆ, ಬೇರೆ ರೀತಿಗಳಲ್ಲೂ ಅಂಟಬಹುದು. ರೋಗಿಯ ಬಾಯಲ್ಲಿ ಹುಣ್ಣುಗಳಿದ್ದರೆ ಚುಂಬಿಸಿದಾಗ ಇನ್ನೊಬ್ಬನಿಗೆ ರೋಗ ಹರಡಬಹುದು. ಸಂಭೋಗದ ವೈಪರೀತ್ಯಗಳಿಂದಲೂ ರೋಗ ಬಾಯಿ, ಗುದ ಮುಂತಾದೆಡೆಗಳಿಗೂ ಹರಡಬಹುದು.

ಮಕ್ಕಳು ಆಡುವಾಗ ಗಾಯಗಳಾಗಿ ಆ ಗಾಯಗಳಲ್ಲಿ ದೊಡ್ಡವರ ಅಜಾಗ್ರತೆಯಿಂದ ರೋಗ ಉಳ್ಳವರ ಮೈ, ಬಟ್ಟೆ, ಜೊಲ್ಲು ಮುಂತಾದವು ತಗುಲಿ ರೋಗಾಣು ಹೊಕ್ಕು ರೋಗ ಬರಬಹುದು. ನಂತರ ಒಂದು ಮಗುವಿನಿಂದ ಇನ್ನೊಂದು ಮಗುವಿಗೆ ಹರಡುತ್ತಿರುತ್ತದೆ. ಹೀಗೆ ಮಕ್ಕಳಲ್ಲಿ ಎಳೆಯರಲ್ಲಿ ಹರಡುತ್ತಾ ಇರುವ ರೋಗಕ್ಕೆ ಸ್ಥಳೀಯ ಉಪದಂಶ ಎಂದು ಕರೆಯುವರು. ಕೆಲವರು ಗಿರಿಜನರಲ್ಲಿ, ಕಾಡುಜನರಲ್ಲಿ ಈ ರೋಗ ಯಥೇಚ್ಛವಾಗಿ ಹರಡಿ ಇಡೀ ಜನಾಂಗಕ್ಕೇ ರೋಗ ಅಂಟಿಕೊಂಡಿರುತ್ತದೆ. ಉಷ್ಣವಲಯದಲ್ಲಿ ಹೀಗೆ ಹರಡುತ್ತಿರುವ ಇಂತಹದೇ ಇನ್ನೊಂದು ರೋಗಕ್ಕೆ

ಯಾಸ್ (ಕಾಲ್ಬೊಬ್ಬೆ ರೋಗ) ಎಂದು ಹೆಸರಿದೆ. ಇದು ಭಾರತದಲ್ಲಿ, ಇಂಡೋನೇಶಿಯಾ ನಡುಗುಡ್ಡೆಗಳಲ್ಲಿ, ಯುಗೋಸ್ಲಾವಿಯಾ ಕೆಲವು ಭಾಗಗಳಲ್ಲಿ ಮತ್ತು ಆಫ್ರಿಕದಲ್ಲಿ ಹರಡಿದೆ. ಅರಬ್ಬೀ ದೇಶದಲ್ಲಿ ಸ್ಥಳೀಯವಾಗಿ ಹರಡುವ ಇಂತಹ ಇನ್ನೊಂದು ರೋಗಕ್ಕೆ ಬೆಜೆಲ್ (ಅಂಟುಪದಂಶ) ಎಂದು ಕರೆಯುವರು. ಮಧ್ಯಅಮೇರಿಕದಲ್ಲಿರುವ ಇಂಥಾ ರೋಗಕ್ಕೆ ಪಿಂಟಾ (ಚುಕ್ಕೆ ಬೇನೆ) ಎಂದು ಕರೆಯುವರು. ಈ ಮೂರು ರೋಗಗಳೂ ಚಿಕ್ಕವಯಸ್ಸಿನವರಲ್ಲಿ ಬಹುತೇಕ ಹಬ್ಬಿ, ಅನೇಕ ವಿಧವಾದ ಚರ್ಮ ಮತ್ತು ಎಲುಬು ರೋಗಗಳನ್ನು ಉಂಟುಮಾಡುತ್ತದೆ. ಇವೆಲ್ಲವೂ ಟ್ರಿಪೋನಿಮಾ ರೋಗಾಣುವಿನ ಆಕ್ರಮಣದ ಫಲ. ಈ ರೋಗಗಳ ನಿವಾರಣೆಯನ್ನು ವ್ಯಾಪಕವಾಗಿ ಯತ್ನಿಸಿ ಅಲ್ಲಲ್ಲಿ ರೋಗವನ್ನು ತಡೆದಿರುವರು. ಈ ರೋಗಗಳು ಜನರನ್ನು ವಿಕಾರಗೊಳಿಸಿ, ದುರ್ಬಲರನ್ನಾಗಿ ಮಾಡಿರುವುದರಿಂದ, ಅವುಗಳ ನಿಯಂತ್ರಣ ಪ್ರಪಂಚದ ಒಂದು ಸಮಸ್ಯೆಯಾಗಿ ಪ್ರಪಂಚದ ಆರೋಗ್ಯ ಸಂಸ್ಥೆ ಗಣಿಸಿದೆ.

ಉಪದಂಶ ರೋಗ 15ನೇ ಶತಮಾನದಲ್ಲಿ ಮಾನವ ಪ್ರಪಂಚದಲ್ಲಿ ಸಿಡುಗಿನಂತೆ ಮೊದಲು ಹಬ್ಬಿತು. ಅದುವರೆಗೂ ಪ್ರಪಂಚದಲ್ಲಿ ಎಲ್ಲೂ ಇಂಥಾ ರೋಗವಿರಲಿಲ್ಲ. ಆಗ ವೈದ್ಯರಲ್ಲಿ ಆಶ್ಚರ್ಯವನ್ನುಂಟುಮಾಡಿತ್ತು. ಅನೇಕ ಹೆಸರುಗಳಲ್ಲಿ ಜನರು ಈ ರೋಗವನ್ನು ಕರೆಯುತ್ತಿದ್ದರು. ಭಾರತದಲ್ಲಿ ಈ ರೋಗ ಯೂರೋಪಿಯನ್ನರಿಂದ (ಫಿರಂಗಿ ತಂದವರಿಂದ) ಬಂದಿದೆ ಎಂಬ ನಂಬಿಕೆ ಇತ್ತು. ಆದಕ್ಕೆ ಫಿರಂಗಿ ರೋಗವೆಂದೇ ಹೆಸರಿಟ್ಟರು. ಮೊಟ್ಟ ಮೊದಲು ಫ್ರಾಕಸ್ಟೋರಿಯಸ್ ಎಂಬ ಕವಿವೈದ್ಯ ಈ ರೋಗದ ಲಕ್ಷಣಗಳನ್ನೆಲ್ಲಾ ಚೆನ್ನಾಗಿ ವರ್ಣಿಸಿ ಒಂದು ಪದ್ಯವನ್ನು ಬರೆದನು. ಕುರಿಕಾಯುವ ಸಿಫಿಲಸ್ ಎಂಬುವನು ಅನೀತಿಯಿಂದ ಜೀವಿಸಿದ್ದಕ್ಕಾಗಿ, ದೇವರಿಗೆ ಅಪ್ರಿಯನಾಗಿ ರೋಗಕ್ಕೆ ತುತ್ತಾಗಿರುತ್ತಾನೆ. ಆದುದರಿಂದ ಹಲವು ಹೆಸರುಗಳಿಂದ ಬೇರೆ ಬೇರೆ ದೇಶಗಳಲ್ಲಿ ಕರೆಯಲಾಗುತ್ತಿರುವ ಈ ರೋಗಕ್ಕೆ ಸಿಫಿಲಿಸ್ (ಉಪದಂಶ) ಎಂಬ ನಾಮಕರಣವಾಯಿತು.

ಸಂಭೋಗವೇ ರೋಗ ಹರಡಲು ಕಾರಣವೆಂದು ತಿಳಿಯುವುದಕ್ಕೆ ಕನಿಷ್ಠ ಒಂದೆರಡು ಶತಮಾನಗಳೇ ಬೇಕಾಯ್ತು. ರೋಗದ ಗುಣ ಮತ್ತು ಹರಡುವ ವಿಧಾನ ತಿಳಿದಿದ್ದರೂ ಈ ರೋಗದ ರೋಗಾಣುವನ್ನು ಗುರುತಿಸಲು

ನಾನ್ನೂರು ವರ್ಷ ಬೇಕಾಯ್ತು. ಕಾಯಿದೆ ಬಾಹಿರ ಇಲ್ಲವೇ ಅನೈ
ಸಂಭೋಗ ಕ್ರಿಯೆಯೊಂದಲ್ಲದೆ ರೋಗಾಣುವಿನ ಆಕ್ರಮಣ ಶಕ್ತಿ ಮುಖ್ಯವಾ
ಬೇಕಾಯ್ತು. ರೋಗಾಣುವಿನ ವಿಚಾರ ಬಹಳ ಸೋಜಿಗ. ಕ್ರಿ.ಶ. 190
ರಲ್ಲಿ ಫ್ರಿಜ್ಜ ಫೌಡಿನ್ ಮತ್ತು ಎರಿಕ್ ಹಾಫ್‌ಮನ್ ಪ್ರಥಮ ಮೇಹದು
ನಿಂದ ಮತ್ತು ದುಗ್ಧರಸದಿಂದ ಶೋಧನೆಮಾಡಿ ಟ್ರಿಪೋನಿಮಾ ಜಾತಿಗೆ ಸೇರಿ
ಸ್ಪೈರೋಕೀಟ ರೋಗಾಣು ರೋಗಕ್ಕೆ ಕಾರಣವೆಂದು ತಿಳಿಸಿದರು. ಬೆ
ಯಂತೆ ಬೆಳ್ಳಗಿರುವ ತಿರುಪಿನ ಆಕಾರವುಳ್ಳ 10 ರಿಂದ 15 ಮೈಕ್ರಾನ್‌ಗ



ಚಿತ್ರ 9.
ಟ್ರಿಪೋನೀಮ ಪಲ್ಲಿಡ

ಉದ್ದದ ಹಾವಿನಂತೆ ಚಲಿಸುವುದು ಈ ರೋಗಾಣು. ಅದು ಯಾವಾಗಲ
ತಿರುಪಿನಂತೆ ತಿರುಗುತ್ತಿರುತ್ತದೆ. ತಿರುವುಗಳು ಸಾಮಾನ್ಯವಾಗಿ ಬಗ್ಗಿದಾ
ತಿರುಗುವಾಗ, ಚಲಿಸುವಾಗ ಒಂದೇ ಸಮನಾಗಿರುತ್ತವೆ. ಯಾವ ಬಣ್ಣ
ಅದಕ್ಕೆ ಹತ್ತುವುದಿಲ್ಲ. ಪ್ರಯೋಗಶಾಲೆಯಲ್ಲಿ ನಿರ್ಜೀವಪುಷ್ಟಿ ಪದಾರ್ಥಗಳ

ಬೆಳೆಸಲು ಸಾಧ್ಯವಿಲ್ಲ. ಅದನ್ನು ನೋಡಲು ವಿಶಿಷ್ಟ ಸೂಕ್ಷ್ಮದರ್ಶಿ ಬೇಕಾಗುತ್ತದೆ. ಕತ್ತಲು ಹಿನ್ನೆಲೆಯಿರುವ ಸೂಕ್ಷ್ಮದರ್ಶಿಯಲ್ಲಿ ಪಕ್ಕದಿಂದ ಬೆಳಕು ಬಿಟ್ಟರೆ ಕತ್ತಲಿನ ನಡುವೆ ಬೆಳ್ಳಗೆ ತಿರುಪು ಆಕಾರದ ಬೆಳ್ಳಿಯು ತಿರುವಿನಂತೆ ಬಗ್ಗುತ್ತಾ ಚಲಿಸುವುದು ಕಾಣುತ್ತದೆ. ಇದನ್ನು ಕೆಲವು ಜಾತಿಯ ಪ್ರಾಣಿಗಳ ವೃಷಣಗಳಲ್ಲಿ ಬೆಳೆಸಬಹುದು. ಉಪದಂಶ ಮಾನವ ರೋಗವೆಂಬುದು ಮನದಟ್ಟಾಗಬೇಕು. ಪ್ರಾಣಿಗಳು ಸಂಭೋಗದಲ್ಲಿ ತೊಡಗಿದ್ದರೂ ಅವಕ್ಕೆ ಇದು ಅಂಟುವುದಿಲ್ಲ. ಆದರೆ, ಮಾನವನಲ್ಲಿ ಇದು ಹರಡುವುದಕ್ಕೆ ಬಹುತೇಕ ಕಾರಣ ಸಂಭೋಗವೇ. ರತಿಕೇಳಿಗೆ ಸಂಬಂಧಿಸಿದ ಚುಂಬನ, ಆಲಿಂಗನಗಳಿಂದಲೂ ಅಂಟಬಹುದು. ಸಂಭೋಗ ವೈಪರೀತ್ಯಗಳಾದ ಸಲಿಂಗಕಾಮ, ಕುಂಡೆಹಡಕು, ಮತ್ತು ಗೊಲ್ಲಿನೆಕ್ಕುವ ಕಾಮಗಳಿಂದಲೂ ಹರಡಬಹುದು. ರೋಗಿಯನ್ನು ಬೇಹುಷಾರಾಗಿ ಪರೀಕ್ಷಿಸುವ ವೈದ್ಯ, ಶುಶ್ರೂಷೆ ಮಾಡುವ ದಾದಿ ಮುಂತಾದವರ ಬೆರಳಿಗೆ ಅಂಟಬಹುದು. ಊದುಕೊಳವೆ, ಸಂಗೀತದ ಸಾಧನ, ಹಚ್ಚೆಸೂಜಿ, ಪಟ್ಟುಹಾಕುವ ಮುಳ್ಳುಗಳೂ ಈ ರೋಗವನ್ನು ಹರಡಬಹುದು. ರೋಗಿಯ ಜೊಲ್ಲು, ರಕ್ತ, ಮುಟ್ಟಿನ ರಕ್ತ, ದುಗ್ಧರಸ, ಬೆನ್ನುಹುರಿ ರಸಗಳಲ್ಲಿ ರೋಗಾಣು ಇರುತ್ತದೆ. ರೋಗಿಯ ರಕ್ತವನ್ನು ಪರರಿಗೆ ಕೊಟ್ಟಾಗಲೂ ರೋಗ ಹರಡಿ ಅಂಟುವುದು.

ಪೆನಿಸಿಲಿನ್ ಉಪದಂಶಕ್ಕೆ ಮಹಾ ಗುಣಕಾರಿ. ಕನಿಷ್ಠ 15 ದಿನ ಪೆನಿಸಿಲಿನ್ ರಕ್ತದಲ್ಲಿ ಬಿಡದೆ ಇರಬೇಕು. ಸಂಗ್ರಹಣ ಚುಚ್ಚುಮದ್ದನ್ನು ಅಂದರೆ ಬೆಂಜತೀನ್ ಪೆನಿಸಿಲಿನನ್ನು ಒಂದು ಬಾರಿ ಕೊಟ್ಟರೆ ಸಾಕು. 24 ಲಕ್ಷ ಯೂನಿಟ್ಟು ಪೆನಿಸಿಲಿನ್ ಉಳ್ಳ ಚುಚ್ಚುಮದ್ದಾಗಬೇಕು. ಅದು ಇಲ್ಲವಾದರೆ ದಿನವೂ 6 ಲಕ್ಷ ಯೂನಿಟ್ ಇರುವ ಪ್ರೊಕೇನ್ ಪೆನಿಸಿಲಿನ್‌ನನ್ನು ಚುಚ್ಚುಮದ್ದಾಗಿ 10–15 ದಿನ ಕೊಡಬೇಕು. ರೋಗಾಣು ಸಾಯುತ್ತದೆ. ಹುಣ್ಣು, ಗಂಟುಗಳೆಲ್ಲಾ ಮಾಯುತ್ತವೆ. ಆಗ ರೋಗಿ ಸಂಭೋಗದಿಂದಾಗಲಿ ಬೇರಾವ ರೀತಿಯಲ್ಲಾಗಲಿ ರೋಗವನ್ನು ಹರಡಲಾರ. ಔಷಧ ಮಿದುಳಿನಲ್ಲೂ ರೋಗಾಣನ್ನು ನಾಶಮಾಡುತ್ತದೆ. ಗರ್ಭಿಣಿ ನಿರೋಗಿಯಾಗುವಳಲ್ಲದೆ, ಹೊಟ್ಟೆಯಲ್ಲಿರುವ ಕೂಸೂ ಉಪದಂಶದಿಂದ ಪಾರಾಗುತ್ತದೆ. ಹೀಗೆ ಆದಿ ಉಪದಂಶ (ಸ್ವಯಾರ್ಜಿತ ಮತ್ತು ಆಜನ್ಮ) ಸಂಪೂರ್ಣ ವಾಸಿಯಾಗುತ್ತದೆ. ರಕ್ತಪರೀಕ್ಷೆಯು ವಿ.ಡಿ.ಆರ್.ಎಲ್. ಪ್ರತಿಕ್ರಿಯೆ ಇದೆ ಎಂದು ತೋರಿಸಿದ್ದರೆ

"ಪ್ರತಿಕ್ರಿಯೆ ಇಲ್ಲ" ದಂತಾಗಲೂ ರಕ್ತ ಶುದ್ಧಿಯಾಗಲೂ 6 ತಿಂಗಳಿಂದ 2 ವರ್ಷ ಹಿಡಿಯುತ್ತದೆ. ಚುಚ್ಚು ಮದ್ದನ್ನು ಒಂದು ದಿನದಲ್ಲಿ, ಇಲ್ಲವೇ 15 ದಿನಗಳಲ್ಲಿ ಕೊಟ್ಟರೆ ಸಾಕು. ರೋಗಲಕ್ಷಣಗಳೂ ಚಿಹ್ನೆಗಳೂ ಸಂಪೂರ್ಣ ವಾಸಿಯಾಗಲು ಒಂದೆರಡು ತಿಂಗಳು ಬೇಕು. ರಕ್ತದಲ್ಲಿರುವ ರೋಗಾಣು ಗಳೆಲ್ಲ ಚುಚ್ಚು ಮದ್ದನ್ನು ಕೊಟ್ಟನಂತರ, ಒಂದು ವಾರದೊಳಗೆ ನಾಶವಾಗು ತ್ತವೆ. ಹುಣ್ಣುಗಳಲ್ಲಿದ್ದ ರೋಗಾಣು 24 ಘಂಟೆಗಳಲ್ಲಿಯೇ ಸಾಯುತ್ತದೆ. ರೋಗಿಯನ್ನು ತಿಂಗಳಿಗೊಮ್ಮೆ 6 ತಿಂಗಳೂ, 3 ತಿಂಗಳಿಗೊಮ್ಮೆ 6 ತಿಂಗಳೂ, 6 ತಿಂಗಳಿಗೊಮ್ಮೆ ಎರಡು ವರ್ಷವೂ ವೈದ್ಯರು ಪರೀಕ್ಷಿಸಿ, ರೋಗ ಮರುಕಳಿ ಸಿದರೆ ಮತ್ತೊಮ್ಮೆ ಚಿಕಿತ್ಸೆ ಮಾಡಬೇಕು. ರೋಗಿಯೊಂದಿಗೆ ಸಂಭೋಗ ಮಾಡದಿದ್ದರೆ, ರೋಗ ತಿರುಗಿ ಬರಲಾರದು. ಹೆಂಡತಿ ಇಲ್ಲವೇ ಭೋಗ ಸಂಗಾತಿಯರಿಗೆ ಚಿಕಿತ್ಸೆ ಒಂದೇ ಕಾಲದಲ್ಲಿ ಕೊಡಬೇಕು.

ತಡವಾದ ಉಪದಂಶ ಔಷಧದಿಂದ ಮಾಯುತ್ತದೆ. ಊತಕಗಳ ನಾಶ ಅಷ್ಟಕ್ಕೇ ನಿಂತುಹೋಗುತ್ತದೆ. ಉಳಿದ ಅನಾಹುತಗಳು ಏನೂ ಆಗುವುದಿಲ್ಲ. ಔಷಧವನ್ನು ರೋಗಿಗೆ ಕೊಡಬೇಕೋ ಬೇಡವೋ ಎಂಬುದನ್ನು ವೈದ್ಯನೇ ನಿರ್ಧರಿಸಬೇಕು. ಅದಕ್ಕಾಗಿ ರೋಗದ ಗತಿಯನ್ನು ತಿಳಿಯುವುದು ಅವರ ಕರ್ತವ್ಯ. ರಕ್ತಪರೀಕ್ಷೆ ಪ್ರತಿಕ್ರಿಯೆ ಇದೆ ಎಂದು ತೋರಿಸಬಹುದು. ತಡವಾದ ಉಪದಂಶ ಸಂಪೂರ್ಣ ಗುಣವಾಗಿದೆ ಎಂಬುದನ್ನು ನಿರ್ಧರಿಸುವುದು ಬಲು ಕಷ್ಟ.

ಚುಚ್ಚುಮದ್ದು ಕೊಟ್ಟ ದಿನ ಹರ್ಕ್ಸ್‌ಹೈಮರ್ ಪ್ರತಿಕ್ರಿಯೆ ಉಂಟಾಗ ಬಹುದು. ಆಗ ಸರಕ್ಕನೆ ಜ್ವರ ಬರುತ್ತದೆ. ರೋಗ ಲಕ್ಷಣಗಳು ಇನ್ನೂ ಹೆಚ್ಚಾಗುತ್ತವೆ. ನೋವು ಬರುತ್ತದೆ. ಈ ಬದಲಾವಣೆ ತಾತ್ಕಾಲಿಕ. ಚಿಕಿತ್ಸೆಯನ್ನು ಮುಂದುವರಿಸಬಹುದು.

ಔಷಧವನ್ನು ಸರಿಯಾದ ಪ್ರಮಾಣದಲ್ಲಿ ಕೊಡದಿದ್ದರೆ, ಸೋಂಕಂಟುವ ಅವಧಿ ನಾಲ್ಕು ವರ್ಷಕ್ಕಿಂತಲೂ ಹೆಚ್ಚಾಗುತ್ತದೆ. ಊತಕಗಳ ನಾಶ ಆದಿ ಉಪದಂಶದಲ್ಲಿಯೇ ಪ್ರಾರಂಭವಾಗುತ್ತದೆ. ರೋಗಾಣುನಾಶಕ್ಕೆ ಔಷಧ ಪ್ರಮಾಣ ಹೆಚ್ಚು ಬೇಕಾಗಬಹುದು. ರೋಗಾಣು ಔಷಧವನ್ನು ವಿರೋಧಿ ಸುವ ಶಕ್ತಿಯನ್ನು ಬೆಳೆಸಿಕೊಳ್ಳಬಹುದು. ಪೆನಿಸಿಲಿನ್ ಕೊಟ್ಟಾಗ "ಅಪ ರಕ್ಷಣೀಯ ಪ್ರತಿಕ್ರಿಯೆ"ಯಾಗಿ ಜೀವ ನಾಶವಾಗಬಹುದು. ಹೀಗಾಗದಂತೆ

ನೋಡಿಕೊಳ್ಳುವುದುತ್ತಮ. ಇದಕ್ಕಾಗಿ, ಪರೀಕ್ಷಾ ಪ್ರಮಾಣದ ಚುಚ್ಚು ಮದ್ದನ್ನು ಕೊಟ್ಟು ರೋಗಿಗೆ ಪೆನಿಸಿಲಿನ್ ಒಗ್ಗುತ್ತದೆಯೋ ಇಲ್ಲವೋ ಎಂಬುದನ್ನು ಮೊದಲು ಪರೀಕ್ಷಿಸಬೇಕು. ಪರೀಕ್ಷಿಸಿದ್ದರೂ ಒಮ್ಮೊಮ್ಮೆ ಇಂಥಾ ಪ್ರತಿಕ್ರಿಯೆ ಆಗಬಹುದು. ಹೀಗಾದಾಗ ರೋಗಿಯನ್ನು ರಕ್ಷಿಸಲು ಬೇಕಾದ ಔಷಧ ಅಂದರೆ ಅಡ್ರಿನಲಿನ್ ಆಂಟಿಹಿಸ್ಟಮಿನ್ಸ್ ಮತ್ತು ಕಾರ್ಟಿಸೋನ್‌ಗಳನ್ನು ಸರಿಯಾಗಿ ತಕ್ಷಣ ಉಪಯೋಗಿಸಬೇಕು. ಕೆಲವು ಸಾರಿ ರೋಗಿಯನ್ನು ರಕ್ಷಿಸಬಹುದು. ತಡವಾದರೆ, ರಕ್ಷಣೆ ಯಾವಾಗಲೂ ಸಾಧ್ಯವಾಗಲಾರದು.


ಪೆನಿಸಿಲಿನ್ ಬೇಡವಾದರೆ, ರೋಗಿಗೆ ಒಗ್ಗದಿದ್ದರೆ, ಜೀವಿರೋಧಕ ಔಷಧಗಳನ್ನು ಸರಿಯಾದ ಪ್ರಮಾಣದಲ್ಲಿ ಉಪಯೋಗಿಸಬೇಕು. ಉದಾಹರಣೆಗೆ, ಟೆಟ್ರಾಸೈಕ್ಲಿನನ್ನು ಇಪ್ಪತ್ತು ಇಲ್ಲವೇ ನಲವತ್ತು ದಿನ ಕೊಡಬೇಕು.

ಕುಷ್ಠರೋಗ

ಕುಷ್ಠ ಮೈಕೋಬ್ಯಾಕ್ಟೀರಿಯಂ ಲೆಪ್ರೆ ರೋಗಾಣುವಿಂದಾಗುವ ಮಹಾಬೇನೆ. ಪುರಾತನ ವೈದ್ಯರು ಚರ್ಮರೋಗಗಳನ್ನೆಲ್ಲಾ ಕುಷ್ಠವೆಂದು ಕರೆದಿರುವರು. ಹಾಗೆಯೇ ಕ್ರಿಸ್ತರು ತಮ್ಮ ಪವಿತ್ರ ಪುಸ್ತಕದ ಹಿಬ್ರುಭಾಷೆಯಲ್ಲಿ ವರ್ಣಿಸಿದ ರೋಗವನ್ನು ತರ್ಜುಮೆ ಮಾಡುವಾಗ ಕುಷ್ಠ ಎಂದೇ ಹೇಳಿರುವರು. ಬೈಬಲಿನಲ್ಲಿ ಹೇಳಿರುವ ರೋಗ ಬೇರೆ ಇರಬಹುದು. ಹಾಗೆಯೇ, ಪುರಾತನ ಭಾರತದಲ್ಲಿ ಚರ್ಮರೋಗಗಳ ವರ್ಣನೆ ಕೂಡ, ನಾವು ಈಗ ಕರೆಯುವ ಕುಷ್ಠಕ್ಕೆ ಸಂಬಂಧವಿಲ್ಲ.

ಚರಿತ್ರೆ ಮತ್ತು ನಿಧಾನ : ''ಕುಷ್ಠ ಭಯಾನಕ ರೋಗ. ಆ ರೋಗಿಗಳು ಹಿಂದಿನ ಜನ್ಮದಲ್ಲಿ ಪಾಪಮಾಡಿ ಈ ಜನ್ಮದಲ್ಲಿ ನರಳುತ್ತಿರುವರು. ಅವರಿಗೆ ದೇವರ ಕರುಣೆಯನ್ನು ಸಂಪಾದಿಸುವ ಕರ್ಮವೇ ಈ ಜನ್ಮದ ಮುಖ್ಯ ಧ್ಯೇಯ. ಅವರು ದೇವರ ಶಾಪಕ್ಕೆ ತುತ್ತಾದವರು. ಅವರು ಸಮಾಜದಲ್ಲಿ ಸರಿಸಮಾನರಾಗಿ ಬಾಳಬಾರದು. ಅವರನ್ನು ಸಮಾಜದಿಂದ ಬಹಿಷ್ಕರಿಸಬೇಕು''. ಹೀಗೆ ಹಲವು ಮೂಢ ನಂಬಿಕೆಗಳುಂಟು. ಇದರ ಫಲವಾಗಿ ಭಾರತದಲ್ಲಿ ಅನೇಕ ಕುಷ್ಠರೋಗಿಗಳು ಭಿಕ್ಷುಕರಾಗಿ ಪುಣ್ಯಸ್ಥಳಗಳಲ್ಲಿ ಗುಡಿ ಗೋಪುರಗಳ ಮುಂದೆ ಭಿಕ್ಷೆ ಬೇಡುತ್ತಾ ಜೀವನ ಕಳೆಯುತ್ತಾರೆ. ಇಂಥ ವರ್ತನೆಗಳನ್ನು ತಪ್ಪಿಸಬೇಕು. ರೋಗದ ನಿಜರೂಪವನ್ನು ತಿಳಿಸಿ, ಚಿಕಿತ್ಸೆಗೆ

ರೋಗಿಗಳು ಒಪ್ಪಿಕೊಳ್ಳುವಂತೆ ಒಳ್ಳೆಯ ಪರಿಸರವನ್ನು ಸೃಷ್ಟಿಸಬೇಕು. ಇದೂ ಒಂದು ಅಂಟು ರೋಗ, ಶಾಪವಲ್ಲ, ಆಜನ್ಮ ರೋಗವಲ್ಲ ಎಂದು ಪ್ರಚಾರವಾಗಬೇಕು. ರೋಗ ಕಾರಣವಾದ ರೋಗಾಣುವನ್ನು ನಾರ್ವೆಯ ವೈದ್ಯ ಹ್ಯಾನ್ಸನ್ ಕ್ರಿ. ಶ. 1874ರಲ್ಲಿ ಕಂಡುಹಿಡಿದನು. ಇದನ್ನು ಕೃತಕ ವಾಗಿ ಪ್ರಯೋಗಶಾಲೆಯಲ್ಲಿ ಬೆಳೆಸಲು ಸಾಧ್ಯವಾಗಿಲ್ಲ. 1960ರಲ್ಲಿ, ಬಿಳಿ ಇಲಿಯ ಮೈಮೇಲೆ ಮತ್ತು ಒಳಾಂಗಗಳಲ್ಲಿ ಬೆಳವಣಿಗೆಯನ್ನು ಸಾಧಿಸಿದ್ದಾರೆ. ಆದರೂ ಅದನ್ನು ಬಹುಕಾಲ ಬೆಳೆಸಲು ಸಾಧ್ಯವಾಗಿಲ್ಲ. ಈ ರೋಗ ಯಾವ ಪ್ರಾಣಿಗಳಲ್ಲೂ ಸಹಜವಾಗಿ ಬರುವುದಿಲ್ಲ. ಇದೊಂದು ಮನುಷ್ಯನ ವಿಶಿಷ್ಟ ರೋಗವಾಗಿಯೇ ಉಳಿದಿದೆ. ರೋಗಾಣು ಕ್ಷಯ ರೋಗದ ಜಾತಿಯದು.



ಚಿತ್ರ 10.

ಕುಷ್ಠ ರೋಗಾಣುಗಳು : ಎ. ಗೋಳಾಕಾರದವು
ಬಿ. ಬೀಡಿಕಟ್ಟಿನ ಆಕಾರದವು

ಇದರ ರೋಗಾಣುಗಳು ಸೂಕ್ಷ್ಮದರ್ಶಿಯಡಿಯಲ್ಲಿ ಗುಂಪುಗುಂಪಾಗಿ ಒಂದ ಕ್ಕೊಂದು ಕೂಡಿರುತ್ತವೆ. ಕ್ಷಯ ರೋಗದಲ್ಲಿ ಒಂದೊಂದೇ ಬೇರೆಬೇರೆ ಯಾಗಿರುತ್ತದೆ. ಒಂದು ಗ್ರಾಂ ತೂಕದ ಕುಷ್ಠ ಗಡ್ಡೆಯಲ್ಲಿ ಸುಮಾರು 5

ೋಟಿ ರೋಗಾಣುಗಳಿರುತ್ತವೆ. ಚರ್ಮದ ಮೇಲೆ ಮತ್ತು ನರಗಳೊಳಗೂ ಂಖ್ಯೇಚ್ಛವಾಗಿರುತ್ತವೆ. ಚರ್ಮದ ಮೇಲಿರುವಾಗ ಚರ್ಮವನ್ನು ಚೂಪಾದ ್ಯೇಡಿನಿಂದ ಕೊಯ್ದು ಎರಡೂ ಬದಿಯಿಂದ ಸಣ್ಣ ಚೂರನ್ನು ತೆಗೆದು ಬಣ್ಣ ಾಟ್ಟು ಸೂಕ್ಷ್ಮದರ್ಶಿಯಲ್ಲಿ ನೋಡಿ ರೋಗಾಣನ್ನು ಗುರುತಿಸಬಹುದು. ಗ ರೋಗಿಗೆ ಅಂಟು ಕುಷ್ಠವಿದೆಯೆಂದು ತಿಳಿಯಬೇಕು. ಲೆಪ್ರೊಮಿನ್ ುಷ್ಠಾಣುಸಾರ) ಲಸಿಕೆಯನ್ನು ಚುಚ್ಚಿದಾಗ ಪ್ರತಿಕ್ರಿಯೆ ತೋರಿಬಂದರೆ, ೋಗಾಣು ನರದೊಳಗಿರಬಹುದೆಂದು ಶಂಕಿಸಬೇಕು. ಇದು ನರದೊಳಗೆ ೂಕ್ಕು, ಅದರ ಸುತ್ತಬೆಳೆದು ನರವನ್ನು ದುರ್ಬಲಮಾಡಿ ಸ್ಪರ್ಶಜ್ಞಾನವನ್ನು ಾಶಮಾಡುತ್ತದೆ. ಸ್ನಾಯುಗಳು ಸವೆದು ಅಂಗವಿಕಾರವಾಗುತ್ತದೆ. ಇಂಥಾ ೋಗಿಗಳು ಈ ರೋಗವನ್ನು ಸುಲಭವಾಗಿ ಹರಡುವುದಿಲ್ಲ. ಇದು "ಅಂಟದ ುಷ್ಠ." ಅಂಟು ಕುಷ್ಠವಿದ್ದವನೊಡನೆ ಬಹುಕಾಲ ನಿಕಟ ದೈಹಿಕ ಸಂಪರ್ಕ ಿದ್ದರೆ ಮಾತ್ರ ರೋಗ ಹರಡುತ್ತದೆ. ರೋಗಾಣು ಮೈಹೊಕ್ಕನಂತರ ್ಯಾಧಿ ತೋರುವ ಅವಧಿ ಬಹು ದೀರ್ಘವಾದ್ದು. 3 ರಿಂದ 5 ವರ್ಷಗಳ ೕಲೆ ರೋಗದ ಮೊದಲ ಚಿಹ್ನೆಗಳು ಕಾಣುತ್ತವೆ. ರೋಗಾಣು ಬಹಳ ಾವಕಾಶವಾಗಿ ಬೆಳೆಯುತ್ತದೆ. ಇದು ಅಸಂಖ್ಯಾತವಾಗಿ ದೇಹದಲ್ಲಿ ಹರಡಿ ಾಗ ಮಾತ್ರ ರೋಗ ಗೋಚರವಾಗುತ್ತದೆ. ಆದುದರಿಂದ ವ್ಯಾಧಿ ತೋರುವ ಾಲ ಕೆಲವು ವರ್ಷಗಳೆಂದು ತಿಳಿಯಬೇಕು. ಕುಷ್ಠರೋಗ ಪಿಡುಗಿನಂತೆ, ಂದರೆ ಕಾಲರ, ಸಿಡುಬುಗಳಂತೆ, ಸಾಂಕ್ರಾಮಿಕ ರೋಗವಲ್ಲ. ಜನಸಂದಣಿ ಳಲ್ಲಿ ಬಟ್ಟೆ ಬರೆಗಳಿಲ್ಲದೆ ಹೆಚ್ಚು ಕಡಿಮೆ ದಿಗಂಬರರಾಗಿ ಜೀವಿಸುತ್ತಾ ನಿಕಟ ರ್ಮ ಸಂಪರ್ಕವಿದ್ದವರಲ್ಲಿ ಹೆಚ್ಚಾಗಿ ಈ ರೋಗ ಹರಡುತ್ತದೆ.

ರೋಗ ಲಕ್ಷಣಗಳು : ಚರ್ಮಕ್ಕೆ ಸಮೀಪದಲ್ಲಿರುವ ನರಗಳು ೋಗಾಣುವಿನ ವಾಸಕ್ಕೆ ಅನುಕೂಲವಾಗುತ್ತವೆ. ನರಗಳಿಂದ ಗ್ರಹಿಸುವ ್ಪರ್ಶಜ್ಞಾನ ಮೊದಲು ಕುಂದುತ್ತದೆ. ಚರ್ಮಕ್ಕೆ ಏನಾದರೂ ತಾಕಿದರೆ ಿಳಿಯುವುದಿಲ್ಲ. ಅನಂತರ ಸೂಜಿಯಿಂದ ಚುಚ್ಚಿದರೂ, ಚಿವುಟಿದರೂ, ೋಯುವುದಿಲ್ಲ. ತಂಪು, ಬಿಸಿಗಳ ವ್ಯತ್ಯಾಸ ತಿಳಿಯುವುದಿಲ್ಲ. ಇಂಥ ್ಪರ್ಶಜ್ಞಾನ ನಾಶವೇ ಕುಷ್ಠದ ಆದ್ಯ ಲಕ್ಷಣ. ಪಂಚ ಜ್ಞಾನೇಂದ್ರಿಯ ಗಳಲ್ಲೊಂದಾದ ಸ್ಪರ್ಶಜ್ಞಾನ ನಾಶವಾದುದನ್ನು ತಿಳಿದು ತನ್ನ ದೇಹದ ್ವಲ್ಪ ಭಾಗ ನಿರ್ಜೀವವಾಗಿದೆ, ಸತ್ತಿದೆ ಎಂದು ತಿಳಿದು ರೋಗಿ ಭೀತಿಗೊಳ

ಗಾಗುತ್ತಾನೆ. ಅವನಿಗೆ ಸ್ಪರ್ಶ ಜ್ಞಾನ ಕಡಿಮೆಯಾಗಿದೆ ಎಂದು ತಿಳಿಯದೆ ಇರಬಹುದು. ಏಕೆಂದರೆ ಹೊರಗೆ ಆ ಚರ್ಮದ ಮೇಲೆ ಯಾವ ಬದಲಾವಣೆಯೂ ಆಗಿರುವುದಿಲ್ಲ. ಆಗ ಅವನಿಗೆ ತಿಳಿಯದೆಯೇ ಸುಟ್ಟ ಮತ್ತಿತರ ಗಾಯಗಳಾಗುತ್ತವೆ. ತಾನು ಯಾವ ಗಾಯಗಳನ್ನಾದರೂ ನೋವಿಲ್ಲದೆ ಭರಿಸಬಲ್ಲೆನೆಂದು ಕೆಲವು ದಿನ ತನ್ನ ಸಂಗಡಿಗರಿಗೆ ಹೇಳಿಕೊಳ್ಳಲೂಬಹುದು. ಕ್ರಮೇಣ ಗಾಯಗಳು ಬೆರಳನ್ನೇ ನುಂಗಲು ಪ್ರಾರಂಭಿಸಿದಾಗ, ತನ್ನ ನ್ಯೂನತೆಯನ್ನು ಅರಿತುಕೊಳ್ಳುತ್ತಾನೆ. ಆಗಲೂ ಅವನು ಅದೊಂದು ರೋಗವೆಂದು ಗ್ರಹಿಸುವುದಿಲ್ಲ. ಹೀಗಾಗಿ ಅಂಗೈ, ಅಂಗಾಲು, ಕೈ, ಕಾಲುಗಳ ವಿಕಾರ ಆಗುವವರೆಗೂ ಅವನು ವೈದ್ಯರ ಸಹಾಯ ಕೋರುವುದಿಲ್ಲ. ಇದರಿಂದಲೇ, ಕುಷ್ಠ ರೋಗಿ ಕುರೂಪಿ, ನೋಡಲು ಅಸಹ್ಯ ಎಂದು ಕುಪ್ರಸಿದ್ಧಿಯಾಗಿರು



ಚಿತ್ರ 11. ಅಂಟದ ಕುಷ್ಠ

ವುದು. ಕುಷ್ಠದ ಮೊದಲ ಚಿಹ್ನೆ ಎಂದರೆ, ಬಣ್ಣ ಬದಲಿಸಿದ ಚರ್ಮದ ಮಚ್ಚೆ. ಅದು ಕ್ರಮೇಣ ದೊಡ್ಡದಾಗುವುದು. ದೊಡ್ಡದಾಗಲು ಬಹಳ ದಿನಗಳು ಇಲ್ಲವೇ ಬಹಳ ವರ್ಷಗಳಾಗಬಹುದು. ಅದಕ್ಕಾಗಿ ಚಿಹ್ನೆಯನ್ನು ಮಚ್ಚೆ ಎಂದೇ ಕರೆಯುವುದು. ರೋಗಿಯ ದೇಹದಲ್ಲಿ ರೋಗಾಣುವಿನ ಶಕ್ತಿಯನ್ನಡಗಿಸುವ ನಿರೋಧಕ ಶಕ್ತಿಯ ಪ್ರಮಾಣಕ್ಕನುಗುಣವಾಗಿ ಇತರ ಚಿಹ್ನೆಗಳು ಉತ್ಪನ್ನವಾಗುವುವು. ನಿರೋಧ ಶಕ್ತಿ ಹೆಚ್ಚಾದರೆ, "ಅಂಟದ ಕುಷ್ಠ" ಅಥವಾ "ನರ ಕುಷ್ಠ" ಬರುತ್ತದೆ. ಆ ಶಕ್ತಿ ಕಡಿಮೆ ಇದ್ದರೆ "ಅಂಟುಕುಷ್ಠ" ಇಲ್ಲವೆ "ಚರ್ಮಕುಷ್ಠ"ಬರುವುದು. ಅಂಟದ ಕುಷ್ಠವನ್ನು ನರಕುಷ್ಠವೆಂದು ಕರೆದರೆ ಏನೂ ತಪ್ಪಿಲ್ಲ. ಏಕೆಂದರೆ, ಈ ಬಗೆಯ ಕುಷ್ಠ ರೋಗಿಗಳ ನರಗಳು ದಪ್ಪವಾಗುತ್ತವೆ. ಅಲ್ಲದೆ ನರಗಳ ಸ್ವಭಾವವಾದ ಮೃದುತ್ವ ಕಡಿಮೆಯಾಗಿ ಗಡುಸಾಗುತ್ತದೆ. ಮಚ್ಚೆಗಳು ಸುತ್ತಲಿನ ಚರ್ಮದ ಬಣ್ಣಕ್ಕಿಂತ ಕಡಿಮೆ ಬಣ್ಣದವು. ಬಣ್ಣ ಪೂರ್ತಿ ಹೋಗುವುದಿಲ್ಲ. ಮಚ್ಚೆಯುಳ್ಳ ಚರ್ಮ ಶಾಖ, ನೋವು ಸ್ಪರ್ಶ ಜ್ಞಾನಗಳನ್ನು ಕಳೆದುಕೊಂಡಿರುತ್ತದೆ. ರೋಗಿ "ನನ್ನ ಚರ್ಮ ಬೆಂಡಾಗಿದೆ" ಎನ್ನುವನು. ಚರ್ಮ ಮರಗಟ್ಟಿದಂತಿರುವುದು. ರೋಗ ಉಲ್ಬಣವಾದಂತೆ ಅನೇಕ ಮಚ್ಚೆಗಳು ಏಳುತ್ತವೆ. ಮಚ್ಚೆಗಳ ಸುತ್ತ ಉಬ್ಬಿದ ದದ್ದುಗಳಿರಬಹುದು. ಇಂಥಾ ಮಚ್ಚೆಗಳಿದ್ದಾಗ 'ಕ್ಷಯ ಕುಷ್ಠ' ವೆಂದು ಕರೆಯುವರು. ಹೊರ ನರಗಳ ಹತೋಟಿಯಲ್ಲಿರುವ ಚರ್ಮ ಸ್ಪರ್ಶಜ್ಞಾನವನ್ನು ಕಳೆದುಕೊಳ್ಳುತ್ತದೆ. ಸ್ಪರ್ಶದರಿವಿನ ನಾಶದ ಫಲವಾಗಿ ಕೈ ಕಾಲುಗಳು ಸುಲಭವಾಗಿ ಗಾಯಗಳಿಗೆ ಈಡಾಗುತ್ತವೆ. ಮಾಂಸಖಂಡಗಳು ಶಕ್ತಿಯನ್ನು ಕಳೆದುಕೊಂಡು ಕೃಶವಾಗುತ್ತವೆ. ಕೈ ಸವೆದುಹೋದಂತಾಗುತ್ತದೆ. ಬೆರಳುಗಳು ಒಣಗುತ್ತವೆ. ಗಾಯಗಳು ಒಳಾಂಗಗಳವರೆಗೂ ಹರಡಿ ಕೀವು ಕಣಗಳು ಎಲುಬು ಕೀಲುಗಳಿಗೆ ಆಕ್ರಮಿಸಿ ಅಂಗೈ ಮತ್ತು ಅಂಗಾಲುಗಳ ಚಿಕ್ಕ ಎಲುಬುಗಳ ಕೀಲುಗಳು ನಾಶವಾಗುತ್ತವೆ. ಡೊಂಕಾದ ಬೆರಳುಗಳು, ಒಣಗಿದ ಕೈಕಾಲುಗಳನ್ನೂ ನೋಡಿದರೆ, ಬಲು ಕನಿಕರ ಬರುತ್ತದೆ. ಕೆಲಸ ಮಾಡಿ ಜೀವಿಸುವುದಕ್ಕೆ ಅನುಕೂಲವಾಗುವ ಕೈ ಕಾಲುಗಳ ಸಹಾಯವಿಲ್ಲದೆ ಹೋಗುವುದು. ಒಂದು ಒಳ್ಳೆಯ ವಿಷಯವೆಂದರೆ, ಮಿದುಳಿಗೆ ಈ ರೋಗ ಹತ್ತುವುದಿಲ್ಲ. ಮಿದುಳಿನ ಶಕ್ತಿ ಯಥಾ ರೀತಿ ಇರುತ್ತದೆ. ಆದುದರಿಂದ, ಸಾಮಾನ್ಯ ಮನುಷ್ಯ ಚಿಂತೆಗೊಳಗಾಗುತ್ತಾನೆ. ತಾನು ಅನುಭವಿಸುವ ಯಾತನೆ ಯಾವ ಜನ್ಮದ ಫಲವೋ ಎಂದು ದುಃಖಿಸುತ್ತಾನೆ.

ಅಂಟು ಕುಷ್ಠದ ಮುಖ್ಯ ಲಕ್ಷಣಗಳೆಂದರೆ, ಚರ್ಮದ ಮೇಲೆ ಚಿಕ್ಕ, ದೊಡ್ಡ ಗಂಟುಗಳು, ರೋಗಾಣುವಿನ ವಲಸೆಯ ಪರಿಣಾಮವಾಗಿ ಚರ್ಮ ದಪ್ಪನಾಗುವುದು, ಕಿವಿಗಳು ದಪ್ಪವಾಗುತ್ತಾ ಗಂಟುಕಟ್ಟುತ್ತವೆ. ಎರಡೂ ಕಿವಿಗಳು ದೊಡ್ಡವಾಗಿ ಗಂಟುಗಳಿಂದ ದಪ್ಪನಾಗಿ ಜೋತಾಡುವುವು. ಮುಖದ ಚರ್ಮ ಅಲ್ಲಲ್ಲಿ ದಪ್ಪನಾಗುವುದಲ್ಲದೆ, ಹುಬ್ಬುಗಳು ಅನೇಕ ಗಂಟುಗಳಿಂದ ಕೂಡಿರುತ್ತವೆ. ರೆಪ್ಪೆಗಳ ಕೂದಲುಗಳು ಉದುರಿಬಿಡುತ್ತವೆ.



ಚಿತ್ರ 12. ಅಂಟು ಕುಷ್ಠ

ರೋಗ ಹರಡಿದಂತೆ, ಕ್ರಮೇಣ ಅನೇಕ ತೊಡಕುಗಳೂ ದುಷ್ಪರಿಣಾಮಗಳೂ ಆಗುತ್ತವೆ. ಅರಿವಿಲ್ಲದ ಪಾದಕ್ಕೆ ಪೆಟ್ಟುಗಳು ಬೀಳುತ್ತವೆ. ಇಲ್ಲವೇ ಪಾವವಲ್ಲಿ ಹುಣ್ಣುಗಳಾಗಿ ತೂಬುಗಳ ಕಂದಕಗಳಂತೆ ಎಲುಬಿನವರೆಗೂ ಹರಡಿ, ಎಲುಬು ಸ್ನಾಯುಗಳೂ ಕಾಣಿಸಿಕೊಂಡು ವಿಕಾರದ ಕಠೋರ ರೂಪ ಕಾಣುತ್ತದೆ.

ರೆಪ್ಪೆಗಳ ನರಗಳು ರೋಗಕ್ಕೆ ತುತ್ತಾಗಿ, ರೆಪ್ಪೆಗಳು ಕಣ್ಣನ್ನು ಪೂರ್ತಿ ಮುಚ್ಚುವ ಶಕ್ತಿಯನ್ನು ಕಳೆದುಕೊಳ್ಳುತ್ತವೆ. ಮುಖದ ನರಗಳೂ ಕುಷ್ಠಕ್ಕೆ

ಈಡಾಗುವುದರಿಂದ, ಕಣ್ಣುಗುಡ್ಡೆಯ ಸ್ಪರ್ಶಜ್ಞಾನ ಹೋಗುತ್ತದೆ. ಹೀಗೆ ಕಣ್ಣು ಸದಾ ಧೂಳು ಗಾಳಿಗಳ ಅಪಾಯಗಳಿಗೆ ಆಹುತಿಯಾಗುತ್ತದೆ. ಗಾಯಗಳು ಮಾಯದೆ ಕೀವು ಕಣಗಳಿಗೆ ಈಡಾಗಿ ಕಣ್ಣು ಹಾಳಾಗುತ್ತದೆ, ಇಲ್ಲವೇ ಕುರುಡಾಗುತ್ತದೆ.

ಪುರುಷನ ಲೈಂಗಿಕ ಗ್ರಂಥಿಗಳು ರೋಗದಿಂದ ಕೃಶವಾಗಿ, ಮೆತ್ತಗಾಗಿ ಚಿಕ್ಕದಾಗುತ್ತವೆ. ಪುರುಷ ಜನನಾಂಗಗಳಿಗೆ ಬೇಕಾದ ರಸಗಳನ್ನು ಕಡಿಮೆ ಉತ್ಪತ್ತಿ ಮಾಡುತ್ತವೆ. ಪುರುಷನ ಮೊಲೆಗಳು ಹೆಂಗಸರಂತೆ ದೊಡ್ಡದಾಗುತ್ತವೆ. ವೀರ್ಯದಲ್ಲಿ ವೀರ್ಯಾಣುಗಳು ಕಡಿಮೆಯಾಗುತ್ತವೆ. ಅನಂತರ ಪುರುಷ ಶಕ್ತಿಯೂ ಕುಂದಿ ಷಂಡನಾಗುತ್ತಾನೆ.

ರೋಗ ಗತಿಯಲ್ಲಿ ವ್ಯತ್ಯಾಸವಾಗಿ ರೋಗಾಣುವಿಗೂ ದೇಹಕ್ಕೂ ಇರುವ ಸಂಬಂಧ ಕೆಟ್ಟುಹೋಗಿ ಹಠಾತ್ತನೆ ರೋಗ ಉಲ್ಬಣಿಸಬಹುದು. ಅದಕ್ಕೆ 'ಕುಷ್ಠ ಪ್ರತಿಕ್ರಿಯೆ' ಎಂದು ಕರೆಯುತ್ತಾರೆ, ಹೀಗಾದಾಗ ದಪ್ಪನಾದ ನರಗಳು ಉರಿಯುತ್ತವೆ. ಮುಟ್ಟಿದರೆ ನೋಯುತ್ತವೆ. ಕತ್ತು, ಮೊಣಕೈ ಮತ್ತು ಮೊಣಕಾಲಿನ ನರಗಳನ್ನು ಮುಟ್ಟಿದರೆ ನೋವಾಗುತ್ತದೆ. ಮೈಮೇಲಿರುವ ಗಂಟುಗಳು ಇನ್ನೂ ಲೆಕ್ಕವಿಲ್ಲದಷ್ಟು ಹೆಚ್ಚಾಗಿ ದೊಡ್ಡದಾಗುತ್ತವೆ. ಕೆಲವರಲ್ಲಿ ಮೈ ತುಂಬಾ ಹುಣ್ಣುಗಳು ಏಳುತ್ತವೆ. ಜ್ವರ ಎಲುಬು ಕೀಲುಗಳ ನೋವೂ ಅತಿ ಹೆಚ್ಚಾಗಿ ರೋಗಿ ಹಾಸಿಗೆ ಹಿಡಿಯುತ್ತಾನೆ. ಇಂಥಾ ಸ್ಥಿತಿ ಬಹಳ ದಿನಗಳಿರುವುದಿಲ್ಲ. ಅದಷ್ಟಕ್ಕೆ ಅದೇ ಇಳಿಯಬಹುದು. ವಿಶ್ರಾಂತಿ ಬೇಕಾಗುತ್ತದೆ. ತಕ್ಕ ಚಿಕಿತ್ಸೆ ಶೀಘ್ರವಾಗಿ ಮಾಡಬೇಕಾಗುತ್ತದೆ. ಕೆಲವರು ಕುಷ್ಠ ರೋಗಿಗಳು ತಮಗೆ ಕುಷ್ಠವಿದೆಯೆಂದು ಕುಷ್ಠ ಪ್ರತಿಕ್ರಿಯೆ ಬಂದಾಗಲೇ ಜೀವನದಲ್ಲಿ ಮೊಟ್ಟಮೊದಲು ತಿಳಿಯುತ್ತಾರೆ. ಆದರೆ ಕೆಲವರು ರೋಗಿಗಳು ಇಂಥಾ ಪ್ರತಿಕ್ರಿಯೆ ಇಳಿದುಹೋದೊಡನೆ ತಮ್ಮ ರೋಗ ವಾಸಿಯಾಯಿತು ಎಂದು ತಪ್ಪು ತಿಳಿದು ತೆಪ್ಪನಾಗುತ್ತಾರೆ.

ಚಿಕಿತ್ಸೆ

ಕುಷ್ಠರೋಗ ಭಾರತದಲ್ಲಿ ಅಪಾರವಾಗಿದೆ. ಹಿಮಾಲಯ ತಪ್ಪಲಿನಲ್ಲಿ ಬೆಳೆಯುವ, ಚಾಲಮೂಗ್ರ ಗಿಡದ ಕಾಯಿ, ಬೀಜಗಳಿಂದ ಈ ರೋಗದ ಚಿಕಿತ್ಸೆ ಹಿಂದೆ ನಡೆಯುತ್ತಿತ್ತು. ಹಿಂದೆ, ಕುಷ್ಠರೋಗಿ ಆಸ್ತಿಗೆ ಹಕ್ಕಿಲ್ಲದವನಾಗಿದ್ದ. ಪೂರ್ವ ಕಾಲದ ಭಾರತದ ಅಂದರೆ ಈಗಿನ ಬರ್ಮಾ ದೇಶದ, ರಾಜನಿಗೆ ಒಮ್ಮೆ ಕುಷ್ಠ ಹತ್ತಿತು. ಅಂದಿನ ವಾಡಿಕೆಯಂತೆ ರಾಜ್ಯವನ್ನೇ

ತ್ಯಜಿಸಬೇಕಾಯ್ತು. ತನ್ನ ರೋಗ ಗುಣವಾದರೆ, ರಾಜ್ಯವನ್ನು ತಾನು ಮರಳಿ ಪಡೆಯಬಹುದಾಗಿತ್ತು. ಆದ್ದರಿಂದ ಅವನು ಹಿಮಾಲಯದ ಎಲ್ಲಾ ಋಷ್ಯಾಶ್ರಮಗಳಿಗೆ ತೆರಳಿ ರೋಗಕ್ಕೆ ಪರಿಹಾರ ಹುಡುಕುತ್ತಿದ್ದ. ಒಂದು ದಿನ ಗಿಡದ ನೆರಳಿನಲ್ಲಿ ವಿಶ್ರಮಿಸಿಕೊಳ್ಳುವಾಗ ಗಿಡದಿಂದ ಒಂದು ದೊಡ್ಡ ಬೀಜವುಳ್ಳ ಕಾಯಿ ಬಿತ್ತು. ಅದನ್ನು ಆ ರಾಜ ತಿಂದನು. ತಿಂದನಂತರ ಕೆಲವು ದಿನಗಳಲ್ಲಿ ರೋಗ ಮಾಯವಾಯ್ತಂತೆ. ತಾನು ತನ್ನ ರಾಜ್ಯಕ್ಕೆ ತೆರಳಿ ಮರಳಿ ರಾಜ್ಯವನ್ನು ಪಡೆದನು. ಹೀಗೆಂದು ಒಂದು ದಂತ ಕಥೆ ಇದೆ. 1945ರ ವರೆಗೂ, ಚಾಲಮೂಗ್ರ ಕಾಯಿ ಬೀಜದಿಂದ ತಯಾರಾದ ಎಣ್ಣೆಯೇ ಈ ರೋಗಕ್ಕೆ ಔಷಧಿಯಾಗಿತ್ತು. ಎಣ್ಣೆಯಿಂದ ಚುಚ್ಚು ಮದ್ದನ್ನು ಕೂಡಾ ತಯಾರಿಸಿದ್ದರು. ಈಗ ವಿಜ್ಞಾನದ ರೀತ್ಯ ಪರೀಕ್ಷಿಸಿದಾಗ ಈ ಎಣ್ಣೆಗೆ ರೋಗಾಣು ನಾಶಕ ಶಕ್ತಿ ಇಲ್ಲವೆಂದು ತಿಳಿದಿದೆ. ಎಣ್ಣೆ ಕೇವಲ ಚರ್ಮಕ್ಕೆ ಶಕ್ತಿ ಕಾಂತಿಯನ್ನು ತರುತ್ತದೆ. ಬದಲಾದ ಬಣ್ಣ ಮೊದಲಿನಂತಾಗುತ್ತದೆ.

1945–1950ರಲ್ಲಿ ಅನೇಕ ರೋಗಿಗಳಲ್ಲಿ ಪ್ರಯೋಗಿಸಿ, ಮರು ಪರೀಕ್ಷಿಸಿ ಗುಣವನ್ನು ತೋರಿಸಿದ ಔಷಧವನ್ನು ಅಮೇರಿಕದ ಕಾರ್ಲೈಲ್ ನಲ್ಲಿರುವ ಕುಷ್ಠ ರೋಗಾಶ್ರಮದಲ್ಲಿ ಕಂಡುಹಿಡಿಯಲಾಯಿತು. ಅದೇ ಸಲ್ಫೋನ್ ಎಂಬ ಔಷಧ. ಈ ಮೂಲ ಔಷಧದಿಂದ ಸಲ್ಫಿಟ್ರಾನ್ ಮತ್ತು ಡ್ಯಾಪ್ಸೋನ್ ಎಂಬ ಔಷಧಗಳು ತಯಾರಾಗಿವೆ. ಸಲ್ಫಿಟ್ರಾನ್‌ನ್ನು ಗುಳಿಗೆ ಯಾಗೂ ಚುಚ್ಚುಮದ್ದಾಗಿಯೂ ಕೊಡಬಹುದು. ಈ ಔಷಧ ರೋಗಾಣನ್ನು ನಿಧಾನವಾಗಿ ನಾಶಮಾಡುತ್ತದೆ. ಡ್ಯಾಪ್ಸೋನ್ ಗುಳಿಗೆ ರೂಪದಲ್ಲಿ ಮಾತ್ರವೇ ಈಗ ಬಳಕೆಯಲ್ಲಿದೆ. ಡ್ಯಾಪ್ಸೋನ್ ರೋಗಾಣನ್ನು ಸಲ್ಫಿಟ್ರೋನ್‌ಗಿಂತಲೂ ಶೀಘ್ರವಾಗಿ ನಾಶಮಾಡಬಲ್ಲುದು. ಇದರಿಂದ ರೋಗ ಗುಣವಾಗಬೇಕಾದರೆ, ಕನಿಷ್ಠ ನಾಲ್ಕೈದು ವರ್ಷಗಳಾದರೂ ಬೇಕಾಗುತ್ತದೆ. 6 ತಿಂಗಳಿನಿಂದ ಮೂರು ವರ್ಷಗಳವರೆಗೆ ಇದರಿಂದ ಚಿಕಿತ್ಸೆ ಆಗಬೇಕಾಗಬಹುದು. ಡ್ಯಾಪ್ಸೋನನ್ನು ತೀರ ಸಣ್ಣ ಪ್ರಮಾಣದಲ್ಲಿ ಸೇವಿಸ ಬೇಕು. ಪ್ರಾರಂಭದಲ್ಲಿ ದಿನಕ್ಕೆ 10 ಮಿಲಿಗ್ರಾಂ ಕೊಡುತ್ತ, ಒಂದು ವರ್ಷದ ಅವಧಿಯಲ್ಲಿ ಕ್ರಮೇಣ ಹೆಚ್ಚಿಸಿ ಕೊನೆಗೆ ವಾರಕ್ಕೆ 400 ರಿಂದ 600 ಮಿಲಿ ಗ್ರಾಂ ತನಕ ಸೇವಿಸಬಹುದು. ಇದು ಕೆಂಪು ರಕ್ತಕಣಗಳನ್ನು ಹಾಳುಮಾಡು ವುದರಿಂದ, ಇದರ ಜೊತೆಗೆ ಕಬ್ಬಿಣಾಂಶ ಮತ್ತು ಆಹಾರ ರಸಗಳನ್ನು ಕೊಡ

ಬೇಕು. ಈ ಔಷಧಗಳನ್ನೆಲ್ಲಾ ಮನೆಯಲ್ಲಿದ್ದೇ ಸೇವಿಸಬಹುದು. ಆಸ್ಪತ್ರೆಯಲ್ಲಿ ಸೇರಿರಬೇಕಾಗುವುದಿಲ್ಲ. ಅಂಟು ಕುಷ್ಠವಿದ್ದವರನ್ನು ಮನೆಯಲ್ಲಿಯೇ ಬೇರ್ಪಡಿಸಬಹುದು. ಅವರು ಚಿಕ್ಕಮಕ್ಕಳನ್ನು ಸದಾ ಎತ್ತಿಕೊಳ್ಳಬಾರದು. ಮಕ್ಕಳು ರೋಗಿಯ ಹಾಸಿಗೆಯಲ್ಲಿ ಮಲಗಬಾರದು. ಏಕೆಂದರೆ, ಕುಷ್ಠ ರೋಗಾಣು ಮಕ್ಕಳ ಚರ್ಮವನ್ನು ಶೀಘ್ರವಾಗಿ ಆಕ್ರಮಿಸುತ್ತದೆ. ಅಲ್ಲದೆ ಮಕ್ಕಳಿಗೆ ಕುಷ್ಠ ನಿಗ್ರಹ ಶಕ್ತಿ ಉತ್ಪನ್ನವಾಗಿರುವುದಿಲ್ಲ.

ಕುಷ್ಠ ಪ್ರತಿಕ್ರಿಯೆ ತೋರಿದಲ್ಲಿ, ಡ್ಯಾಪ್ಸೋನನ್ನು ಕೊಡಬಾರದು. ಆಂಟಿಮೊನಿಯಿಂದ ತಯಾರಾದ ಚುಚ್ಚುಮದ್ದನ್ನು ಕೊಡಬೇಕು. ವಿಶ್ರಾಂತಿ, ಜ್ವರಕ್ಕೆ ಬೇಕಾದ ಗುಳಿಗೆ, ನೋವು ಕಳೆಯುವ ಔಷಧಗಳನ್ನೂ ಕೊಡಬೇಕು. ಕ್ಲೋರೋಕ್ವಿನ್ ಮಲೇರಿಯಾ ಔಷಧ ಇಂಥಾ ಸ್ಥಿತಿಯಲ್ಲಿ ಒಳ್ಳೆಯದು.

ಮನೆಯವರಿಗೆ ರೋಗ ಅಂಟದಂತೆ ಮಾಡಲು ಮನೆಯಲ್ಲಿದ್ದವರಿಗೆಲ್ಲಾ ಡ್ಯಾಪ್ಸೋನ್ ಕೊಡುತ್ತಿರಬಹುದು. ಚಿಕ್ಕ ಮಕ್ಕಳಿಗೆ ಬಿ. ಸಿ. ಜಿ. ಚುಚ್ಚಿದಾಗ ಕ್ಷಯ ಬಾರದಂತಾಗುವುದಲ್ಲದೆ, ಕುಷ್ಠ ನಿರೋಧ ಶಕ್ತಿಯನ್ನೂ ನೀಡುತ್ತದೆ.

ಇತ್ತೀಚೆಗೆ, ಡ್ಯಾಪ್ಸೋನ್‌ಗಿಂತಲೂ ಒಳ್ಳೆಯ ಔಷಧಗಳು ಮಾರುಕಟ್ಟೆಯಲ್ಲಿ ಬರಹತ್ತಿವೆ. ಅವುಗಳಲ್ಲಿ ಮುಖ್ಯವಾದವು, ಕ್ಲೋಫಾಮಜಿನ್ (ಲಾಂಪ್ರೀನ್), ರಿಫಾಂಫಿಸಿನ್, ಥಯಾಂಬುಟಸಿನ್ ಮುಂತಾದವು.

ಕುಷ್ಠವನ್ನು ಶೀಘ್ರವಾಗಿ ಗುರುತಿಸಿ, ದೀರ್ಘ ಚಿಕಿತ್ಸೆ ಮಾಡಿದರೆ ಸಂಪೂರ್ಣ ಗುಣವಾಗುತ್ತದೆ. ನಾಶವಾದ ಸ್ಪರ್ಶಜ್ಞಾನ, ನರಗಳು ಮತ್ತು ಅಂಗವಿಕಾರಗಳು, ಕುರುಡುತನ ಮುಂತಾದವು ಗುಣವಾಗುವುದಿಲ್ಲ. ಆದುದರಿಂದ, ರೋಗಾಣುವಿನ ಹಾವಳಿಯಿಂದ ತಪ್ಪಿಸಿಕೊಂಡರೂ ಎಚ್ಚರಿಕೆಯಿಂದ ಕೈಕಾಲುಗಳಿಗೆ ಗಾಯವಾಗದಂತೆ ಬಾಳಬೇಕು.

ಪರಮಾ

ಇಂಗ್ಲಿಷಲ್ಲಿ ಗನೋರಿಯ ಎಂಬ ಈ ಪರಮಾ ರೋಗ ಮಹಾ ಮೋಹ ರೋಗ. ನೈಸೀರಿಯಾ ಗಾನಕಾಕಸ್ ಎಂಬ ಏಕಾಣುಜೀವಿಯಿಂದಾಗುವ, ಸಂಭೋಗದಿಂದ ಅಂಟುವ ಗುಹ್ಯ ರೋಗ. ಮೂತ್ರನಾಳವೇ ಸ್ತ್ರೀ

ಪುರುಷರಿಬ್ಬರಲ್ಲಿಯೂ ಈ ರೋಗದ ಮೊದಲ ಗುರಿ. ಗರ್ಭಕೋಶದ ಕಂಠ ಹೆಂಗಸರಲ್ಲಿ ಮೊಟ್ಟಮೊದಲೇ ರೋಗಕ್ಕೆ ಗುರಿಯಾಗಬಹುದು. ರೋಗ ಹತ್ತಿದ ಅಂಗಗಳಿಂದ ಕೀವು ಸ್ರವಿಸುವುದೇ ಮುಖ್ಯ ಲಕ್ಷಣ. ಇಂಗ್ಲೀಷಿನಲ್ಲಿ ಗನೋರಿಯ ಪದದ ಅರ್ಥ ಶುಕ್ರಸ್ರವಿಸುವಿಕೆ ಎಂದು. ಸಾಮಾನ್ಯ ಜನರು ಅದನ್ನು ವೀರ್ಯವೆಂದು ತಪ್ಪಾಗಿ ತಿಳಿಯುತ್ತಾರೆ. ಕೀವು ಸುರಿತದಿಂದ ಪ್ರಾರಂಭವಾದ ರೋಗ ಕ್ರಮೇಣ ರೋಗಾಣು ರಕ್ತ ಚಲನೆಯಲ್ಲಿ ಸೇರಿ ದೂರದ ಊತಕಗಳಲ್ಲೂ ರೋಗವನ್ನುಂಟುಮಾಡುತ್ತದೆ.

ಪ್ರಪಂಚದ ಎಲ್ಲಾ ಜನಾಂಗಗಳ ವೈದ್ಯರಿಗೆ ಪರಮಾ ಪುರಾತನ ಕಾಲದಿಂದಲೂ ತಿಳಿದಿರುವ ಮೇಹ ರೋಗ. ಹಿಂದೆ ಉಪದಂಶವೂ ಪರಮಾದ ಒಂದು ರೂಪವೆಂದೇ ತಿಳಿದಿದ್ದರು. ಇದಕ್ಕೆ ಇಂಗ್ಲೆಂಡಿನ ಪ್ರಸಿದ್ಧ ವೈದ್ಯ ಹಂಟರ್‌ನ ಪ್ರಯೋಗವೇ ಕಾರಣ. ಆತನು ತನ್ನ ಅಂಗಕ್ಕೆ ಮೇಹರೋಗಿಯ ಕೀವನ್ನು ಸವರಿಕೊಂಡು ಉಪದಂಶದ ಮೊದಲ ಚಿಹ್ನೆಯಾದ ಮೇಹದುಣ್ಣು ಮತ್ತು ಪರಮಾದ ಮೊದಲ ಚಿಹ್ನೆಯಾದ ಮೂತ್ರ ಕೀವನ್ನೂ ಅನುಭವಿಸಿದ್ದ. ಜರ್ಮನಿಯ ವೈದ್ಯ ನೀಸ್ಸರ್ ಪರಮಾದ ರೋಗಾಣುವನ್ನು ಕಂಡು ಹಿಡಿದನಂತರ, ಪರಮಾ ಒಂದು ಪ್ರತ್ಯೇಕ ಅಂಟು ರೋಗವೆಂದು ತಿಳಿಯಿತು. ನೈಸೀರಿಯ ಗಾನಕಾಕಸ್ ಒಂದು ಏಕಾಣುಜೀವಿ. ಅದು ಯಾವಾಗಲೂ ಜೋಡಿಯಾಗಿರುತ್ತದೆ. ಸೂಕ್ಷ್ಮದರ್ಶಿಯಲ್ಲಿ ಎರಡು ಅವರೆ ಬೇಳೆಗಳು ಎದುರುಬದುರು ಇದ್ದಂತೆ ಕಾಣುತ್ತದೆ. ನಡುವೆ ಸ್ವಲ್ಪ ಸ್ಥಳವಿರುತ್ತದೆ. ಗ್ರಾಮ್‌ನ ವರ್ಣ ಪರೀಕ್ಷೆಯಲ್ಲಿ ನಕಾರ ಬಣ್ಣ ತೋರುತ್ತದೆ. ರೋಗಾಣು ಕೀವುಕಣಗಳಲ್ಲಿರುತ್ತದೆ. ರೋಗಾಣುಗಳು ಸಂಭೋಗದಿಂದ ಸುಲಭವಾಗಿ ಒಬ್ಬರಿಂದೊಬ್ಬರಿಗೆ ಹರಡುತ್ತವೆ. ಚಿಕ್ಕ ಹುಡುಗಿಯರಿಗೆ ಕಕ್ಕಸಿನ ಪೀಠದಿಂದ, ಕೀವನ್ನು ಮುಟ್ಟಿದ ಬೆರಳು, ಕೀವನ್ನು ಒರೆಸಿದ ವಸ್ತ್ರ ಮುಂತಾದವುಗಳಿಂದಲೂ ಹರಡುವುದುಂಟು. ಈ ಕಾರಣಗಳಿಂದ ಈ ರೋಗ ಹೆಂಗಸರ ಸಂಸ್ಥೆ, ಶಾಲೆ ಮತ್ತು ಹಾಸ್ಟಲುಗಳಲ್ಲಿ ಸಾಂಕ್ರಾಮಿಕವಾಗಿ ಹಬ್ಬಬಹುದು. ರೋಗಾಣು ದೇಹದೊಳಗೆ ಸೇರಿದನಂತರ, ವ್ಯಾಧಿ ತೋರುವ ಅವಧಿ 3 ರಿಂದ 6 ದಿನಗಳು. ಸಂಭೋಗದನಂತರ 72 ಘಂಟೆಗಳಾದ ಮೇಲೆ ರೋಗ ಲಕ್ಷಣಗಳು ಪ್ರಾರಂಭವಾಗುತ್ತವೆ. ಜನನೇಂದ್ರಿಯದ ಆಂತರಿಕ ರಚನೆಯ ವ್ಯತ್ಯಾಸದಿಂದ ರೋಗ ಲಕ್ಷಣಗಳು ಸ್ತ್ರೀ ಪುರುಷರಲ್ಲಿ ಬೇರೆಬೇರೆಯಾಗಿರುತ್ತವೆ.

ಸ್ವಲ್ಪ ಜ್ವರ, ಉರಿಮೂತ್ರ, ಲಿಂಗದ ತುದಿ ತುರಿಕೆ, ಪದೇಪದೇ ಮೂತ್ರ ವಿಸರ್ಜನೆ, ಬಹುಮೂತ್ರ ಮತ್ತು ರಾತ್ರಿ ನೋವಿನಿಂದ ನಿಗುರುವ ಲಿಂಗ ಮುಂತಾದವು ಮೊದಲು ಕಾಣಿಸುವುವು. ಮೂತ್ರನಾಳದಿಂದ ದ್ರವ ಸುರಿಯಲು ಪ್ರಾರಂಭವಾಗಿ ಶೀಘ್ರವೇ ಕೀವು, ರಕ್ತಮಿಶ್ರಿತ ಕೀವು ಸ್ರವಿಸುತ್ತದೆ.



ಚಿತ್ರ 13. ಪುರುಷ ಲಿಂಗದ ತುದಿಯಿಂದ ಕೀವು ಸುರಿತ

ಮೂತ್ರ ಮಡ್ಡಿಯಂತೆ ಕಾಣುವುದು ಪರಮಾದ ಮುಖ್ಯ ಚಿಹ್ನೆ. ಒಂದು ವಾರದನಂತರ ಜ್ವರ ಹೆಚ್ಚಾಗಬಹುದು. ಮೂತ್ರ ರಾತ್ರಿಹಗಲು ಅಡಿಗಡಿಗೆ ಬರುವುದು. ಮೂತ್ರ ವಿಸರ್ಜಿಸುವಾಗೆಲ್ಲ ಉರಿಯುತ್ತದೆ. ಮತ್ತೆಮತ್ತೆ ಮೂತ್ರ ಮಾಡಬೇಕೆಂಬ ಆತುರ, ವಿಸರ್ಜನೆಯ ಕೊನೆಗೆ ಮೂತ್ರಕೋಶದಲ್ಲಿ ಹಿಂಡುವ ನೋವು ಏಳುತ್ತದೆ. ಹೀಗೆ, ರೋಗ ಹಬ್ಬಿದಲ್ಲಿ ಮೂತ್ರತಡೆ

ಉಂಟಾಗುತ್ತದೆ. ಮೂತ್ರ ಹೊರಬಾರದಂತೆ ಹೊಟ್ಟೆ ನೋಯುವುದು. ಹೊಕ್ಕುಳಿನ ಕೆಳಗೆ ಒತ್ತುರಿ ಮತ್ತು ನೋವು ಇರುತ್ತದೆ. ಹೀಗೆ ಒಂದು ತಿಂಗಳು ಬಾಧೆ ಇರುತ್ತದೆ. ಕ್ರಮೇಣ ಮೂತ್ರನಾಳದ ಒಳ ಮತ್ತು ಹೊರಗೆ ಇರುವ ಗ್ರಂಥಿಗಳಿಗೆ ರೋಗ ಹರಡುತ್ತದೆ. ಮುಂದೊಗಲು ಮಣಿಕಟ್ಟಿಗೆ ಸೇರುವ ಸ್ಥಳವಲ್ಲಿರುವ ಟೈಸನನ ಗ್ರಂಥಿಗಳು ಉರಿತದಿಂದ ಕೆಂಪಾಗಿ, ಉಬ್ಬಿ ಕೀವುಕುರುಗಳಾಗುತ್ತವೆ. ಮೂತ್ರನಾಳದ ಮೊದಲ ಭಾಗದೊಳಗೆ ಲಿಟ್ಟರ್ ಗ್ರಂಥಿಗಳೆಂಬ ಕಿರು ತಗ್ಗುಗಳಿವೆ. ಇವುಗಳಲ್ಲಿ ರೋಗಾಣು ನೆಲೆಸುತ್ತದೆ. ಅಲ್ಲಿ ಬಹಳ ಗುಣಿತವಾಗಿ ಕೀವು ಕುರುಗಳು ಏಳುವುವು. ಕುರುಗಳು ಕೂಡಿಕೊಂಡು ದಪ್ಪನಾಗಿ ಮೂತ್ರನಾಳದ ತೂತನ್ನು ಇರುಕಿಸುವುವು. ಮೂತ್ರ ಬರಲು ತಡೆಯಾಗಿ ತೂತಡಕುಗಳು ಆಗುವುವು. ಹೀಗೆ ಅಡಚಣೆಗಳಾದಾಗ ತರಡು ಚೀಲದ ಅಸಹಜ ತೂತುಗಳಾಗಿ ಮೂತ್ರ ಹೊರಬೀಳುವುದು. ಆಗ ವೀರ್ಯ ಹೊರಬರಲೂ ಅಡ್ಡಿಯಾಗುತ್ತದೆ. ವೀರ್ಯ ಹೊರಬೀಳದೆ ಹೆಂಡತಿಗೆ ಗರ್ಭಧಾರಣೆ ಮಾಡಲು ರೋಗಿ ನಿಶ್ಶಕ್ತನಾಗಿ ಷಂಡನಾಗುತ್ತಾನೆ. ಲಿಂಗದ ಬುಡದಲ್ಲೂ ಗುದ ಮುಂಭಾಗದಲ್ಲೂ ಎರಡೂ ಕಡೆ ಇರುವ ಕೌಪರ್ ಗ್ರಂಥಿಗಳಿಗೂ ರೋಗ ಹರಡಿ ಗಡ್ಡೆಗಳಾಗಿ ಊದಿಕೊಂಡು ಕೂಡುವಾಗಲೂ ಮತ್ತು ಏಳುವಾಗಲೂ ನೋವಾಗುತ್ತದೆ. ಗುದ ಮುಂಭಾಗದಲ್ಲೂ ಊದಿಕೊಳ್ಳುತ್ತದೆ. ಗುದದಲ್ಲಿ ಹಿಂಡಿದಂತಾಗುತ್ತದೆ. ಗುದನಾಳದ ಎರಡೂ ಕಡೆ ಇರುವ ಶುಕ್ಲ ಗ್ರಂಥಿಗಳೂ ಊದಿಕೊಂಡು ಭೇದಿ ಮಾಡುವಾಗ ನೋವಾಗುತ್ತದೆ. ಗುದ ಮುಂಭಾಗದಲ್ಲಿ ಮಿತಿ ಮೀರಿ ನೋವಿರುತ್ತದೆ. ರೇತಸ್ಸಿನ ಚೀಲದೊಳಗೆ ರೋಗ ವಲಸೆ ಮಾಡಿದಾಗ, ಮೂತ್ರದ ಕೊನೆಯಲ್ಲಿ ರಕ್ತ ಬರುತ್ತದೆ. ವೃಷಣದ ಹಿಂದೆ ಇರುವ ಎಪಿಡಿಡಮಿಸ್ ಗ್ರಂಥಿಯೊಳಗೆ ಈ ರೋಗದಿಂದ ಉರಿತವಾಗಿ ವಿಪರೀತ ಜ್ವರ, ವೃಷಣ ನೋವುಗಳಿಗೆ ಕಾರಣವಾಗುತ್ತದೆ.

ಕೆಲವು ತಿಂಗಳುಗಳನಂತರ ರೋಗಾಣು ರಕ್ತದಲ್ಲೂ ಸೇರಿ, ದೇಹದ ಅನೇಕ ಅಂಗಗಳಲ್ಲಿ, ಮುಖ್ಯವಾಗಿ ಕಣ್ಣು ಮತ್ತು ಕೀಲುಗಳಲ್ಲಿ, ರೋಗವನ್ನುಂಟುಮಾಡುತ್ತದೆ. ಕಣ್ಣಿನ ಬಿಳಿಪೊರೆಯುರಿತ, ಕೋಡ್ಪೊರೆಯುರಿತ, ಹುಣ್ಣುಗಳೂ ಬರುತ್ತವೆ. ಕ್ರಮೇಣ ಕಣ್ಣು ನಾಶವಾಗಿ ಕುರುಡಾಗಬಹುದು. ಮೊದಲು ಎಲ್ಲ ಕೀಲುಗಳಲ್ಲೂ ನೋವು ಬರುತ್ತದೆ. ಅನಂತರ, ಕೀಲುರಿತ

ವಾಗಿ ಒಂದು ದೊಡ್ಡ ಕೀಲಿನಲ್ಲಿ ನೆಲಸುತ್ತದೆ. ಮೊಣಕಾಲು, ಹರಡು ಕೀಲು, ಅಂಗೈ ಕೀಲುಗಳು ಕೀಲುರಿತದಿಂದ ಊದುತ್ತವೆ. ಕೀಲುಗಳೊಳಗೆ ಕೀವೂ, ನೀರೂ ತುಂಬುತ್ತವೆ ಅವು ಚಲಿಸಿದಾಗ ನೋವಾಗುತ್ತದೆ. ಕೊನೆಗೆ ಕೀಲು ಗಟ್ಟಿಯಾಗಿ ಮಡಿಚಲು ಬಾರದಂತಾಗುತ್ತದೆ, ಇಲ್ಲವೇ ವಿಪರೀತ ನೋವಿನಿಂದ ಚಲಿಸುತ್ತದೆ. ಕೊನೆಗೆ ಕೀಲು ಉಪಯೋಗಕ್ಕೆ ಬಾರದೆ ಕೃಶವಾಗುತ್ತದೆ. ಕಂಡರಕವಚುರಿತ ಪ್ರಾರಂಭವಾಗಿ, ಅಲ್ಲಾಡಲೂ ಓಡಾಡಲೂ ನೋವಾಗುತ್ತದೆ. ದಿಂಚೀಲುರಿತ ಮೂತ್ರಗುಳಿಯುರಿತ ಮತ್ತು ಮೂತ್ರಪಿಂಡಗುಳಿಯುರಿತ ಆಗುತ್ತವೆ. ಹರಡೆಲುಬಿನ ದಿಂಚೀಲು ರಿತದಿಂದ ಮೂಳೆ ಮುಳ್ಳು ಬೆಳೆದು, ನಡೆದಾಗ ವಿಪರೀತ ನೋವು ಬರುತ್ತದೆ.

ಹೆಂಗಸರಲ್ಲಿ ಈ ರೋಗ ಪುರುಷನಲ್ಲಿದ್ದಂತೆ ತೀವ್ರವಾಗಿರದೆ ಸೌಮ್ಯ ವಾಗಿರುತ್ತದೆ. ರೋಗಿಗೆ ಮೇಹರೋಗ ಅಂಟಿದೆ ಎಂದು ಅರಿವೂ ಆಗುವುದಿಲ್ಲ. ಬಹುಮೂತ್ರ, ರಕ್ತ ಮಿಶ್ರಿತ ಮೂತ್ರ, ಜೋರು ಮೂತ್ರ ಮತ್ತು ಉರಿ ಮೂತ್ರ ಇರಬಹುದು. ತೇದಿ ತಪ್ಪಿ ರಜಸ್ಸು ಚಕ್ರ ಬದಲಾಗಬಹುದು. ಗರ್ಭಕೋಶದ ಕಂಠದುರಿತದ ಫಲವಾಗಿ ಯೋನಿಯೊಳಗಿಂದ ಕೀವು ಸುರಿಯು ವುದು. ಯೋನಿಯಲ್ಲಿ ಹೊರಗೆ ಯಾವ ವ್ಯಾಪಾರ್ಡೂ ಆಗುವುದಿಲ್ಲ. ಕೇವಲ ಅನಿರ್ದಿಷ್ಟ ಅಸ್ವಸ್ಥತೆಯಿಂದ ರೋಗಿ ನರಳುತ್ತಾಳೆ. ಪರಮಾ ರೋಗ ತನಗೆ ಇರಬಹುದೆಂದು ತಾನು ಒಂದು ಮಗುವಿನ ಬಂಜೆಯಾದಾಗ ಮತ್ತು ಯೋನಿಯೊಳಗಿಂದ ಕೀವು ಸುರಿದಾಗ ಗೊತ್ತಾಗಬಹುದು. ಯೋನಿಯ ಎರಡೂ ಬದಿಗಳಲ್ಲಿರುವ ಬಾರ್ತೊಲಿನ್ ಗ್ರಂಥಿಗಳು ಊದಿ ಕುರುವಿನಂತೆ ಊದುತ್ತವೆ. ವಿಶೇಷವಾಗಿ ಒಂದು ಕಡೆ ಮಾತ್ರ ಹೀಗೆ ಕೀವು ಗಡ್ಡೆ ಊದಬಹುದು. ಗರ್ಭಕೋಶಕ್ಕೆ ರೋಗ ಹರಡಿದರೆ, ಜ್ವರ, ಓಕರಿಕೆ, ವಾಂತಿ, ಕುಂಡಿ ನೋವು ಮತ್ತು ಗುದದ ನೋವು ಬರುತ್ತವೆ. ಗರ್ಭಕೋಶ ದಿಂದ ಅಂಡನಾಳಕ್ಕೆ ರೋಗ ಹರಡಿದರೆ ಅಂಡನಾಳುರಿತ ಆಗುವುದು. ವಿಪರೀತ ನೋವುಳ್ಳ ರಜಸ್ಸು, ರಜಸ್ಸಿಲ್ಲದ ಕಾಲದಲ್ಲಿ ರಕ್ತಸ್ರಾವ, ರಜಸ್ಸಿ ನಲ್ಲಿ ಅತಿರಕ್ತ ಸ್ರಾವ ಮತ್ತು ಗಡ್ಡೆಯಿಂದ ಕೂಡಿದ ರಕ್ತ ಬರುತ್ತದೆ. ಅಂಡ ನಾಳುರಿತ ತೀವ್ರವಾದಾಗ ಕೆಳ ಹೊಟ್ಟೆ ನೋವು, ಏರಿದ ಜ್ವರ ಮತ್ತು ಕೆಳ ಹೊಟ್ಟೆಯಲ್ಲಿ ಗಡ್ಡೆ ಬರುತ್ತದೆ. ಹೀಗೆ ಎರಡೂ ಕಡೆ ಅಂಡನಾಳ ಉರಿತ ಕ್ಕೊಳಗಾದರೆ, ನಾಳ ಸಂಕುಚಿಸಿ ವೀರ್ಯಾಣು ಸಾಗಲು ಅಡ್ಡಿಯಾಗಿ ಗರ್ಭ

ಧಾರಣೆಗೆ ಆತಂಕವಾಗುತ್ತದೆ. ಹೀಗೆ, ಪರಮಾ ರೋಗ ಹೆಂಗಸರಲ್ಲಿ ದೀರ್ಘ ಕಾಲದ ರೋಗವಾಗಿರುವುದು.

ಗುದದ ಪರಮಾ ರೋಗ ಹೆಂಗಸರಲ್ಲೇ ಸಾಮಾನ್ಯ. ಯೋನಿಯಿಂದ ಗುದಕ್ಕೆ ಕೀವು ಸ್ರವಿಸುವುದರಿಂದ ಅಲ್ಲೂ ಅಂಟುತ್ತದೆ. ಕೆಲವರು ಹುಡುಗರ ಗುದ ಸಂಭೋಗದಿಂದಲೂ ಗುದದ ಲೋಳ್ಪರೆಯಲ್ಲಿ ರೋಗಾಣು ಸೇರಿ ಗುದದ ಪರಮಾ ಬರುತ್ತದೆ, ಗುದದಲ್ಲಿ ಉರಿ, ನವೆ, ಮತ್ತು ಕಡಿತ ಇರುತ್ತವೆ. ಲೋಳೆ ಕೀವು, ರಕ್ತ ಕೀವು ಗುದದೊಳಗಿಂದ ಹೊರಬರುತ್ತದೆ. ಅದನ್ನು ಆಮಶಂಕೆಯೆಂದು ತಪ್ಪಾಗಿ ತಿಳಿಯುತ್ತಾರೆ.

ಕೀಲು ಮತ್ತು ಕಣ್ಣುಗಳ ಪರಮಾ ಮುಂತಾದ ಲಿಂಗದಿಂದ ದೂರ ವಿರುವ ಊತಕಗಳಲ್ಲಿ ಬರುವ ರೋಗ ಪುರುಷರಲ್ಲಿದ್ದಂತೆ ಸ್ತ್ರೀಯರಲ್ಲಿಯೂ ಬರುತ್ತದೆ.

ಮಗು ಹುಟ್ಟುವಾಗ, ತಾಯಿಯ ಯೋನಿಯಲ್ಲಿ ರೋಗದ ಕೀವಿದ್ದರೆ, ಅದು ಕೂಸಿನ ಕಣ್ಣಿಗೆ ತಗುಲಿ ಉರಿತಕ್ಕೆ ಕಾರಣವಾಗುತ್ತದೆ. ಆಗ ಮಗು ಹುಟ್ಟಿದ 21 ದಿನಗಳೊಳಗೆ ಕಣ್ಣಿನ ನೋವು ಬರುತ್ತದೆ. ಹೆರಿಗೆಗೆ ಸಹಾಯಕರಾದ ದಾಯಿ ಮತ್ತು ಆಯಗಳ ಅಜಾಗರೂಕತೆಯಿಂದ ಹೆರಿಗೆಗೆ ಉಪಯೋಗಿಸುವ ಸಲಕರಣೆ ಮತ್ತು ಬಟ್ಟೆಗಳಿಂದಲೂ ಪರಮಾ ರೋಗದ ಕೀವು ಕೂಸಿನ ಕಣ್ಣಿಗೆ ಅಂಟಬಹುದು. ಕಣ್ಣುರಿ ತ್ವರಿತವಾಗಿ ಹೆಚ್ಚಿ, ಊತಕಗಳನ್ನೆಲ್ಲಾ ನಾಶಮಾಡುತ್ತದೆ. ಕಣ್ಣು ಪೂರ್ತಿ ಕುರುಡಾಗುತ್ತದೆ.

ಆಕ್ರಮ ಸಂಭೋಗ ಇಲ್ಲವೆ ಸಂಭೋಗ ಕ್ರೀಡೆಗಳಿಂದ ಭಗೋಷ್ಠಗಳ ಮೇಲಿನ ಪೊರೆಯೊಳಗೆ ರೋಗಾಣು ಹೊಗುತ್ತದೆ. ರೋಗದ ಕೀವಿನಿಂದ ಹೊಲಸಾದ ರೋಗಿಯ ಬಟ್ಟೆ ಬರೆಗಳಿಂದ, ಕನ್ಯೆಯರ ಯೋನಿಗೆ ಪರಮಾ ತಗುಲಬಹುದು. ಯೋನಿ ಕೆಂಪಾಗಿ ಊದಿಕೊಂಡು ಕೀವು ರಕ್ತವನ್ನು ಸುರಿಸುತ್ತದೆ. ಯೋಸಿಗೊಲ್ಲಿಯುರಿತ ಬರುತ್ತದೆ. ಕೀವು ಗುದದ್ವಾರಕ್ಕೆ ಸಾಗಿ ಗುದದ ಉರಿತವನ್ನುಂಟುಮಾಡುತ್ತದೆ. ಅಂಥ ಹುಡುಗಿಯರು ರೋಗ ವಾಹಕರಾಗಿ ಸಂಭೋಗದಿಂದ ಇನ್ನೊಬ್ಬರಿಗೆ ರೋಗವನ್ನು ಯಾವಾಗಲೂ ಹರಡುತ್ತಿರುತ್ತಾರೆ.

ಚಿಕಿತ್ಸೆ: ಗಂಡಸರಿಗೆ ಉರಿಮೂತ್ರವಿರುವಾಗ 48 ಘಂಟೆಗಳೂ ಪೆನಿಸಿಲಿನ್ ರಕ್ತದಲ್ಲಿರುವಂತೆ. ಚುಚ್ಚುಮದ್ದಾಗಿ ಕೊಡಬೇಕು. 12 ಲಕ್ಷ ಯೂನಿಟ್ಸ್ ಇರುವ ಪ್ರೋಕೇನ್ ಪೆನಿಸಿಲಿನ್ ಇಲ್ಲವೆ ಬೆಂಜತೀನ್ ಪೆನಿಸಿಲಿನ್ ಚುಚ್ಚುಮದ್ದು ಒಳ್ಳೆಯದು. ಹೆಂಗಸಿಗೆ ದಿನವೂ ಅದೇ ಚುಚ್ಚುಮದ್ದನ್ನು ನಾಲ್ಕು ದಿನಗಳು ಕೊಡಬೇಕು. ರತಿ ಜೀವನದ ಭಾಗಿಗಳಿಗೆಲ್ಲಾ ಚಿಕಿತ್ಸೆ ಮಾಡಬೇಕು. ಇಲ್ಲವಾದರೆ ಚಿಕಿತ್ಸೆಗೊಳಪಡದವರಿಂದ ರೋಗ ಮರಳಿ ಹತ್ತುತ್ತದೆ. ಇದಕ್ಕೆ ಪಿಂಗ್‌ಪಾಂಗ್ ಚಂಡಿನಂತೆ ಮರುಕಳಿಸುವ ರೋಗ ವೆನ್ನುವುದುಂಟು.

ಮೂತ್ರಕ್ಕೆ ಅಡ್ಡಿಯಾದಾಗ ಸಲಾಕೆಗಳನ್ನು ಮೂತ್ರನಾಳಕ್ಕೆ ತೂರಿಸುತ್ತ ಹಿಗ್ಗಿಸಬೇಕು. ಫಲಪೂರೆಯದಿದ್ದಲ್ಲಿ ಶಸ್ತ್ರಕ್ರಿಯೆ ಮಾಡಬೇಕು, ಕೌಪರ್ ಗ್ರಂಥಿ ಮತ್ತು ಪ್ರಾಸ್ಟೇಟ್ ಗ್ರಂಥಿಗಳ ಕುರುಗಳನ್ನು ಶಸ್ತ್ರಕ್ರಿಯೆಯಿಂದ ಗುಣಮಾಡಬೇಕು. ಕೀಲು ಪರಮಾ ಬಂದಾಗ ಹಾಸಿಗೆಯಲ್ಲಿ ವಿಶ್ರಾಂತಿ ಜೊತೆಗೆ, ಪೆನಿಸಿಲಿನ್ ಕೊಡಬೇಕು. ಯೋನಿಗ್ರಂಥಿ ಕುರುವನ್ನು ಶಸ್ತ್ರ ಕ್ರಿಯೆಯಿಂದಲೇ ಗುಣಪಡಿಸಬೇಕು. ಕನ್ಯೆಯರ ಪರಮಾದಲ್ಲಿ ಪೊಟಾಸಿಯಂ ಪರಮಾಂಗನೇಟ್ (1:5000) ದ್ರಾವಣದಿಂದ ತೊಳೆಯಬೇಕು. ಹಸು ಗೂಸಿನ ಪರಮಾವನ್ನು ಪೆನಿಸಿಲಿನ್ ದ್ರಾವಣದಿಂದ (10,000 ಯೂನಿಟ್ಟು ಗಳು ಒಂದು ಮಿಲಿ ಲೀಟರ್‌ನಲ್ಲಿ) ತೊಳೆಯಬೇಕು.

ಪೆನಿಸಿಲಿನ್ ದೇಹಕ್ಕೆ ಒಗ್ಗದಿದ್ದರೆ ಅಥವಾ ಪೆನಿಸಿಲಿನ್‌ನಿಂದ ಗುಣವಾಗ ದಿದ್ದರೆ, ಇತರ ಜೀವವಿರೋಧಕಗಳನ್ನು ಸರಿಯಾದ ಪ್ರಮಾಣದಲ್ಲಿ ಉಪ ಯೋಗಿಸಬೇಕು.

ಮೂತ್ರ ಸ್ವಚ್ಛವಾದರೆ, ಕೀವು ಸುರಿತ ನಿಂತರೆ, ಮೂರು ತಿಂಗಳ ವರೆಗೂ ಮರುಕಳಿಸದಿದ್ದರೆ ಮೂತ್ರದಲ್ಲಿ ಪರಮಾ ರೋಗಾಣು ಇಲ್ಲದಿದ್ದರೆ ರೋಗ ಗುಣವಾಗಿದೆ ಎಂದು ಖಚಿತವಾಗಿ ಹೇಳಬಹುದು.

ಮೇಹಮೆದುಣ್ಣು

ಮೇಹಮೆದುಣ್ಣು ಅಥವಾ ಮೆದುಮೇಹದುಣ್ಣು ಎಂದು ಹೆಸರಾದ ಈ ರೋಗ ಡೂಕ್ರೆ ದಂಡಾಣುಜೀವಿಯಿಂದಾಗುವ, ಲಿಂಗ ಸಂಪರ್ಕದಿಂದ ಹರಡಿ ತ್ವರಿತವಾಗಿ ಜನನಾಂಗಗಳ ಊತಕಗಳಲ್ಲಿ ಹಬ್ಬುವ ಒಂದು ಮೇಹ

ರೋಗ. ಮೊದಲ ಚಿಹ್ನೆ ಎಂದರೆ ಸೋವಿನಿಂದ ಕೂಡಿದ ಕೀವುಗೂಡಿದ ಹುಣ್ಣು.

ಇದರ ರೋಗಾಣುವನ್ನು ಡೂಕ್ರೆ ಎಂಬ ಇಟಲಿ ದೇಶದ ಚರ್ಮ ವೈದ್ಯ ಕಂಡುಹಿಡಿದನು. ಇದೊಂದು ಗ್ರಾಂ ವರ್ಣ ಪರೀಕ್ಷೆಯಲ್ಲಿ ನಕಾರ ಬಣ್ಣವನ್ನು ಹೊಂದುವ ದಂಡಾಣುಜೀವಿ. ಕೀವು ಜೀವಕಣಗಳ ನಡುವೆ ಇರುವ ಲೋಳೆಯಲ್ಲಿ ಮೂರುನಾಲ್ಕು ಎಳೆಯುಳ್ಳ ಸರದಂತೆ ಈ ರೋಗಾಣು ಕಾಣುತ್ತದೆ. ವ್ಯಾಧಿ ತೋರುವ ಅವಧಿ 3 ರಿಂದ 5 ದಿನಗಳು. ಆದರೆ ಸಂಭೋಗ ಕಾಲದಲ್ಲಿ ಸೂಕ್ಷ್ಮಗಾಯವಾದರೆ 24 ಘಂಟೆಯೊಳಗೇ ಹುಣ್ಣು ಏಳುತ್ತದೆ.

ಕೊಳಕರಲ್ಲಿ, ಅಲೆಮಾರಿಗಳಲ್ಲಿ ನಾವಿಕರಲ್ಲಿ ಸರ್ಕಸ್‌ನವರಲ್ಲಿ ಅವಸರದ ಸಂಭೋಗದಲ್ಲಿ ಸಂಭೋಗಪ್ರಿಯರಲ್ಲಿ ಈ ರೋಗ ಬಹುತೇಕ ಬರುತ್ತದೆ. ಗಂಡಸರೇ ಹೆಚ್ಚಾಗಿ ನರಳುತ್ತಾರೆ. ಹೆಂಗಸರು ರೋಗ ಬಾಧೆಯನ್ನು ಅನುಭವಿಸದೆ, ರೋಗವನ್ನು ಹರಡುವಂಥಾ ರೋಗವಾಹಕರಾಗುವರು. ಸೂಳೆಯರಲ್ಲಿ ಬಹುತೇಕ ಜನರು ಈ ರೋಗದ ವಾಹಕರು, ಹರಡುವವರು.

ಈ ರೋಗಾಣು ರಕ್ತ ಚಲನೆಯಲ್ಲಿ ಸೇರುವುದಿಲ್ಲ. ಅಂಗದಲ್ಲೂ ಅದರ ಊತಕಗಳಲ್ಲೂ ಸ್ವಯಂ ಸೋಂಕಿನಿಂದ ಹರಡಿ ಹಲವು ಹುಣ್ಣುಗಳೇಳುತ್ತವೆ. ನೋವು ವಿಪರೀತವಾಗಿರುತ್ತದೆ. ಲಿಂಗ ಊದಿಕೊಳ್ಳುತ್ತದೆ. ಸ್ಥಳೀಕ ದುಗ್ಧ ಗ್ರಂಥಿಗಳು ರೋಗಾಣು ಆಕ್ರಮಣದಿಂದ ಊದಿಕೊಂಡು ಶೀಘ್ರವಾಗಿ ಊತಕ ನಾಶವಾಗಿ ಕೀವುಗೂಡಿ ವಾಳೆಗಳಾಗಿ ನೋವು ಕೊಡುತ್ತವೆ. ತ್ವರಿತ ನೋವು, ಶೀಘ್ರ ಊತಕ ನಾಶ, ರೋಗದ ಸಹಜ ಗುಣಗಳು. ಗಂಡಸಿನಲ್ಲಿ ಮುಂದೊಗಲು, ಗುಂಜೆಲು, ಲಿಂಗದ ಮಣಿ ಇಲ್ಲವೇ ಗುದದಲ್ಲಿ ಹುಣ್ಣು ಮೊದಲು ಏಳುತ್ತದೆ. ಹೆಂಗಸರಲ್ಲಿ ಯೋನಿಯ ಹಿಂಭಾಗ ಮತ್ತು ಯೋನಿಯ ಪಕ್ಕಗಳಲ್ಲಿ ಹುಣ್ಣು ಏಳುತ್ತದೆ.

ಮುಂದೊಗಲು ಬಿಗಿತ, ಲಿಂಗ ತುದಿ ಚರ್ಮ ಉರಿತಕ್ಕೆ ಈಡಾಗಿ ದಪ್ಪವಾಗುತ್ತದೆ. ಊದಿರುವುದರಿಂದ ಮುಂದೊಗಲು ಹಿಂದಕ್ಕೆ ಸರಿಯುವುದಿಲ್ಲ. ಮುಂದೊಗಲಿನೊಳಗಿಂದ ಕೀವು ಅತಿಯಾಗಿ ಬರುತ್ತದೆ. ನೋವು ತಡೆಯಲಾರದಷ್ಟಿರುತ್ತದೆ.

ಮುಂದೊಗಲು ರತಿಕ್ರೀಡೆಯ ಸಮಯದಲ್ಲಿ ಹಿಂದಕ್ಕೆ ಹೋದಾಗ ಉರಿತಕ್ಕೀಡಾಗಿ ಊದಿಕೊಂಡು ಮರಳಿಬಾರದಂತೆ ಹಿಂದೆಯೇ ನಿಂತುಬಿಡುತ್ತದೆ. ಮುಂದೊಗಲು ಹಿಂಬಿಗಿದಾಗ ಲಿಂಗಮಣಿ ಊದಿಕೊಂಡು ರಕ್ತ

ಚಲನೆಗೆ ಅಡ್ಡಿಯಾಗಿ ಕೊಳೆತುಹೋಗುತ್ತದೆ. ಹುಣ್ಣುಗಳಲ್ಲಿ ಇತರ ಕೀವು ಕಣಗಳೂ ಸೇರಿ ಲಿಂಗವೇ ಕೊಳೆತು ಹುಣ್ಣಾಗಬಹುದು. ಲಿಂಗಮಣಿಯು ಉರಿತ ಮತ್ತು ಗೋರುಣ್ಣುಗಳು ಏಳುತ್ತವೆ.

ಹುಣ್ಣನ್ನು ಸಾಬೂನಿಂದ ಚೆನ್ನಾಗಿ ನೀರು ಹಾಕಿ ತೊಳೆಯಬೇಕು. ಉಪ್ಪನ್ನು ನೀರಿನಲ್ಲಿ ಶೇಕಡ 0.9 ರಷ್ಟು ಕರಗಿಸಿ, ಬಿಸಿಮಾಡಿ ಉಪಯೋಗಿಸುವದೊಳಿತು. ಸಲ್ಫೊನೆಮೈಡ್ ತೆರನ ಔಷಧ ಗುಳಿಗೆಗಳನ್ನು ಆರೇಳು



ಚಿತ್ರ 14. ಗಜ್ಜಲಿನ ಹರಳುಗಂತಿ

ದಿನ ರೋಗಿ ಸೇವಿಸಬೇಕು. ಈ ಔಷಧ ರೋಗಿಗೆ ಹಿಡಿಯದಿದ್ದರೆ, ಜೀವ ವಿರೋಧಕ ಔಷಧಗಳನ್ನು 6 ರಿಂದ 30 ದಿನಗಳು ಕೊಡಬೇಕು. ಇತರ ರೋಗಾಣುಗಳಿಂದ ಕೊಳೆತು ಹೋಗುತ್ತಿರುವ ಲಿಂಗವನ್ನು ಉಳಿಸಬೇಕಾದರೆ, ಪೆನಿಸಿಲಿನ್ನನ್ನು ಕೊಡಲೇ ಕೊಡಬೇಕು. ಮುಂದೊಗಲ ಬಿಗಿತ ಇಲ್ಲವೆ ಹಿಂಬಿಗಿತ ಇದ್ದಲ್ಲಿ ಶಸ್ತ್ರಕ್ರಿಯೆ ಅಥವಾ ಸುನ್ನತಿ ಮಾಡಿಸಬೇಕು.

ಗಜ್ಜಲಿನ ಹೆರಳುಗಂತಿ

ಡೊನೋವಾನಿಯ ಗ್ರಾನುಲೋಮೆಟಿಸ್ ಏಕಾಣುಜೀವಿಯಿಂದಾಗುವ ಚರ್ಮದ ಒಂದು ಲೈಂಗಿಕ ಅಂಟು ರೋಗ. ಆದರೆ ಶೀಘ್ರ ಅಂಟುವ ರೋಗ ವಲ್ಲ. ಸಾಮಾನ್ಯವಾಗಿ ಮಾಯದ ಹುಣ್ಣಾಗಿರುವ ಲಿಂಗ ಮತ್ತು ಗಜ್ಜಲಿನ (ತೊಡೆಸಂದಿನ) ಚರ್ಮದ ಮೇಲೆ ಕಾಣಿಸುವುದೇ ಈ ರೋಗದ ಮುಖ್ಯ ಲಕ್ಷಣಗಳು. ಇಂಗ್ಲಿಷಲ್ಲಿ ಇದಕ್ಕೆ ಗ್ರಾನ್ಯುಲೋಮ ಇಂಗ್ವೈನೇಲ್ ಎಂದು ಹೆಸರಿದೆ. ಇದೇ ರೋಗ ಲಕ್ಷಣವನ್ನು ವರ್ಣಿಸುತ್ತದೆ. ಆದರೆ ಅನುಕೂಲ ಪರಿಸರವಿದ್ದರೆ ರೋಗಾಣು ರಕ್ತಜಲನೆಯ ದ್ವಾರ ದೇಹದೊಳಗೆ ಹೋಗಿ ಎಲುಬು ಮತ್ತು ಯಕೃತ್ತುಗಳಿಗೆ ರೋಗ ತರುತ್ತದೆ.

ಈ ರೋಗದ ಹುಣ್ಣುಗಳಲ್ಲಿ ರೋಗಾಣು ಇರುವುದನ್ನು ಮೊದಲು ಗುರುತಿಸಿದವನು ಮದ್ರಾಸು ಸರ್ಕಾರದ ವೈದ್ಯಸೇವೆಯಲ್ಲಿದ್ದ (1905) ಆಂಡರ್ಸನ್. 1943ರಲ್ಲಿ ಈ ರೋಗಾಣುವನ್ನು ತತ್ತಿಯೊಳಗೆ ಬೆಳೆಸಲು ಸಮರ್ಥನಾದನು. ಕ್ರಿ. ಶ. 1954ರಲ್ಲಿ ರಾಜಮ್ ಮತ್ತು ರಂಗಯ್ಯ ಎಂಬ ವೈದ್ಯರು ಎಲುಬು ಮತ್ತು ಯಕೃತ್ತುಗಳಲ್ಲಿ ರೋಗಾಣು ಇರುವುದನ್ನೂ, 1957ರಲ್ಲಿ ಈ ಲೇಖಕ ಡಾ॥ ಕೃಷ್ಣಮೂರ್ತಿ ಕೈ ಎಲುಬಿನಲ್ಲಿರುವುದನ್ನೂ ತೋರಿಸಿದರು. ಪ್ರಪಂಚದ ಕೆಲವೆಡೆಗಳಲ್ಲಿ ಇದು ಸ್ಥಳೀಕ ರೋಗವಾಗಿ ಈಗಲೂ ಉಳಿದಿರುವುದು. ದಕ್ಷಿಣ ಭಾರತ ಮತ್ತು ಹಿಮಾಚಲ ಪ್ರದೇಶ, ನದಿ ಮುಖದ ಆಂಧ್ರಪಟ್ಟಣಗಳಲ್ಲಿ ರೋಗ ಬಹಳ ಜನರಲ್ಲಿ ಹರಡಿದೆ. ಅತಿ ಸಂಭೋಗ ಪ್ರಿಯರಲ್ಲಿ, ಸಮಾಜದ ಹಿಂದುಳಿದ ಜನರಲ್ಲಿ ರೋಗ ಹೆಚ್ಚಾಗಿ ಹರಡಿದೆ. ಸಾಮಾನ್ಯವಾಗಿ, 20-40 ವಯಸ್ಸಿನವರಿಗೆ ಈ ರೋಗ ತಗುಲು ತ್ತದೆ. ರೋಗಾಣು ದೊಡ್ಡರಕ್ತಕಣಗಳಲ್ಲಿ ಗುಣಿತವಾಗುತ್ತದೆ. ಬೆಳೆಯು ವಾಗ ವಿಧವಿಧವಾದ ರೂಪಗಳನ್ನು ತಾಳುತ್ತದೆ. ಸಾಮಾನ್ಯವಾಗಿ ಅಂಡಾ ಕಾರದಲ್ಲಿರುತ್ತದೆ. ರೋಗ ಗೋಚರಿಸುವ ಅವಧಿ ಕೆಲವು ದಿವಸಗಳಿಂದ 5 ಮಾಸಗಳವರೆಗೂ ಇರುವುದು. ಸಾಮಾನ್ಯವಾಗಿ ಸೋಂಕು ಸಂಪರ್ಕವಾದ 15 ದಿನಗಳಾದ ಮೇಲೆ ಹುಣ್ಣು ಏಳುತ್ತದೆ.

ಪ್ರಾರಂಭದಲ್ಲಿ ಒಂದು ಸೆಂ. ಮೀ. ಅಗಲದ ಗಂಟು ಎದ್ದು ಕ್ರಮೇಣ ಹುಣ್ಣಾಗುತ್ತದೆ. ಹುಣ್ಣು ಮೃದುವಾಗಿ ಕೆಂಪು ಬಣ್ಣದ ಊತಕಗಳಿಂದ ಕೂಡಿರುತ್ತದೆ. ಹೊಸ ಹುಣ್ಣುಗಳೂ ಹುಟ್ಟುತ್ತ, ದೊಡ್ಡದಾಗುತ್ತಾ

ಹೋಗುತ್ತವೆ. ಲಿಂಗದ ಮೇಲೆ ಇಲ್ಲವೇ ತೊಡೆಯ ಸಂದಿನಲ್ಲಿ, ಗುದದ್ವಾರದಲ್ಲಿ, ಬಾಯಿ ಮತ್ತು ಕುತ್ತಿಗೆಯಲ್ಲಿ ಹುಣ್ಣು ಏಳಬಹುದು. ಲಿಂಗೇತರ ಭಾಗಗಳಲ್ಲಿ ಸಂಭೋಗ ವೈಪರೀತ್ಯಗಳಿಂದ ರೋಗ ಹರಡಿರಬಹುದು. ರೋಗದಿಂದ ಅನೇಕ ದಿನ ಬಳಲಿ ರಕ್ತ ಕಳೆದುಕೊಂಡು ರಕ್ತಕೊರೆ ರೋಗ ಇಲ್ಲವೇ ಅನೇಕ ಸೊಂಕು, ನಂಜು ಮತ್ತು ಕ್ಷಯಗಳಿಂದ ಪೀಡಿತನಾಗುತ್ತಾನೆ.

ಅಲ್ಲಲ್ಲಿ ಹುಣ್ಣು ವಾಸಿಯಾದಂತೆ ಕಂಡು ದಪ್ಪನಾದ ಸುಕ್ಕು ಬಿಗಿವ ಕಲೆಯಾಗುತ್ತದೆ. ಕಲೆಯು ಬಿಗಿತದಿಂದ ರಕ್ತ ಮತ್ತು ದುಗ್ಧರಸ ಚಲನೆಗೆ ಅಡಚಣೆಯಾಗಿ ಆನೆಚರ್ಮ ಬೆಳೆಯುತ್ತದೆ. ಯೋನಿ, ಮೂತ್ರ ಮತ್ತು ಗುದದ್ವಾರಗಳು ಇಕ್ಕಟ್ಟಾಗುತ್ತವೆ. ಲಿಂಗದ ಸಹಜ ರೂಪ ಬದಲಾಗುತ್ತದೆ. ಪುರುಷ ಲಿಂಗ ಆನೆಕಾಲಿನಂತೆ ಬೆಳೆದು ತರಡಿನ ಚರ್ಮದಲ್ಲಿ ಅಡಗಿ ಅಂಟಿಕೊಳ್ಳುತ್ತದೆ. ಹೆಂಗಸರಲ್ಲಿ ಯೋನಿಯ ತುಟಿಗಳು ಆನೆಯ ಚರ್ಮದಂತೆ ಬೆಳೆದು ವಿಕಾರಗೊಳ್ಳುತ್ತವೆ. ಯೋನಿಯ ಭಾಗಗಳು ಗುರುತಿಸಲಾರದಷ್ಟು ವಿಕಾರವಾಗಿ ಗಂಟುಗಂಟಾಗಿ ಬೆಳೆಯುತ್ತವೆ. ಚರ್ಮದ ಶಕ್ತಿ ಕುಂದಿ ಹುಣ್ಣುಗಳಾಗಿ ಬಿಳಿ ಚರ್ಮ ಮತ್ತು ಕಪ್ಪು ಚರ್ಮದಿಂದ ಲಿಂಗದ ಸುತ್ತ ತೊನ್ನು ಬರುತ್ತದೆ. ಚಿಕಿತ್ಸೆಯನ್ನು ಪಡೆಯದ ರೋಗಿ ಲಿಂಗವನ್ನೇ ಕಳೆದುಕೊಳ್ಳುತ್ತಾನೆ.

ರೋಗವನ್ನು ಕಂಡುಹಿಡಿಯುವುದು ಸುಲಭ. ಹುಣ್ಣಿನ ಸ್ವಲ್ಪ ಊತಕವನ್ನು ತೆಗೆದು ಲೀಷ್ಮನನ ರೀತ್ಯ ಬಣ್ಣ ಪರೀಕ್ಷೆ ಮಾಡಿದಲ್ಲಿ ಕೆಂಪುಬಣ್ಣವಿರುವ ವಿವಿಧಾಕಾರದ ರೋಗಾಣುಗಳು ದೊಡ್ಡ ರಕ್ತ ಕಣಗಳಲ್ಲಿರುವುದನ್ನು ಸೂಕ್ಷ್ಮದರ್ಶಿಯಲ್ಲಿ ನೋಡಬಹುದು.

ಉಪ್ಪುನೀರಿನಿಂದ ಹುಣ್ಣನ್ನು ತೊಳೆಯಬೇಕು. ಸ್ಟ್ರೆಪ್ಟೋಮೈಸಿನ್ ಜೀವವಿರೋಧಕ ಚುಚ್ಚುಮದ್ದನ್ನು 10–20 ದಿನ ಕೊಡಬೇಕು. ಇದರಿಂದ ಶೇಕಡ 90 ರೋಗಿಗಳಿಗೆ ಗುಣವಾಗುತ್ತದೆ. ರೋಗ ಮರುಕಳಿಸಬಹುದು. ಗುಣವಾಗದಿರುವವರಿಗೆ, ಮರಳಿ ಬಂದ ರೋಗಕ್ಕೆ ಇತರ ಮದ್ದುಗಳಾದ ಟೆಟ್ರಸೈಕ್ಲೀನನ್ನು ಕೊಡಬೇಕು. ಲಿಂಗ ವಿಕಾರವಾಗಿದ್ದು ಊತಕಗಳು ಆನೆ ಚರ್ಮದಂತೆ ಬೆಳೆದಾಗ ಶಸ್ತ್ರಕ್ರಿಯೆಯಿಂದ ಸರಿಪಡಿಸಬೇಕು.

5. ವಿಷಕಣಗಳ ರೋಗಗಳು

ವಿಷಕಣ ಬಹು ಸೂಕ್ಷ್ಮವಾಗಿದ್ದು ಸಾಧಾರಣ ಸೂಕ್ಷ್ಮದರ್ಶಿಯಲ್ಲಿ ಕಾಣಿಸುವುದಿಲ್ಲ. ಅದನ್ನು ಪರೀಕ್ಷಿಸಲು ಎಲೆಕ್ಟ್ರಾನ್ ಸೂಕ್ಷ್ಮದರ್ಶಿ ಬೇಕಾಗುತ್ತದೆ. ಇಂಥವು ಅನೇಕ ಚರ್ಮ ರೋಗಗಳಿಗೆ ಕಾರಣವಾಗಿವೆ. ಕೆಲವು ಸಾಂಕ್ರಾಮಿಕ ರೋಗಗಳೂ, ಸಿಡುಬು, ಗಣಜಿಲೆ, ದಡಾರ ಮುಂತಾದುವೂ ವಿಷಕಣಗಳಿಂದೇಳುತ್ತವೆ. ಜ್ವರದ ಜೊತೆಗೆ ಚರ್ಮದ ಮೇಲೆ ತಗ್ಗುಳ್ಳ ನೀರ್ಗುಳ್ಳೆ, ಮಚ್ಚೆ, ಗುಳ್ಳೆಗಳು ಇರುತ್ತವೆ. ಕೆಲವು ರೋಗಗಳು ಗುಂಪು ಗುಂಪು ನೀರ್ಗುಳ್ಳೆಗಳನ್ನು ಪಡೆದ, ಸರಳ ತದ್ದು ಮತ್ತು ಉಡಿ ತದ್ದು ಎಂದು ಹೆಸರಾದವು. ಕೆಲವು ಕೋಸುಗಡ್ಡೆಯಂತೆ ಬೆಳೆಯುವ ನರೂಲಿ, ಮೋಹದ ನರೂಲಿ ರೋಗಗಳು, ಮತ್ತು ಕೆಲವು ಸಂಭೋಗದಿಂದ ಹರಡುವ ಹಾಲ್ರಸಕಣಗಂತಿ ಮೋಹ ರೋಗ, ಚಿಕ್ಕ ಗಡ್ಡೆಗಳು ಕೀವು ಕುರುಗಳಂತೆ ಕಾಣುವ ಅಂಟು ಸಿಬ್ಬು ರೋಗ.


ಸರಳ ತದ್ದು : ವಿಷಕಣಗಳಲ್ಲಿ ಎರಡು ವಿಧ. ಚಿಕ್ಕ ವಯಸ್ಸಿನಲ್ಲಿಯೇ ಬಂದಾಗ ಮೊದಲ ಚಿಹ್ನೆಗಳಾದ ಗುಂಪು ನೀರ್ಗುಳ್ಳೆಗಳು ಬಾಯಿ ಮತ್ತು ಜನನೇಂದ್ರಿಯದ ಸುತ್ತ ಕಾಣಿಸುವುವು. ಸ್ವಲ್ಪ ಉರಿತ ಇರುತ್ತದೆ. ಕಿವಿ, ಕಣ್ಣು ಮತ್ತು ಕಪಾಳದಲ್ಲಿಯೂ ಚಿಹ್ನೆಗಳಿರಬಹುದು. ಜನನೇಂದ್ರಿಯದಲ್ಲಿ ಕಾಣುವ ರೋಗ ಸಂಭೋಗದಿಂದ ಹರಡುತ್ತದೆ. ಗುಳ್ಳೆಗಳು ತಾವಾಗಿ ಗುಣವಾಗಿ, ಆಮೇಲೆ ಗುರುತು ಕೂಡಾ ಉಳಿಯುವುದಿಲ್ಲ. ದುಗ್ಧರಸ ಗ್ರಂಥಿಗಳು ಊದುವುವು. ದೊಡ್ಡವರಾದ ಮೇಲೆ ವಿಷಕಣ ಬೆನ್ನುಹುರಿಯ ಇಕ್ಕಡೆಗಳಲ್ಲಿರುವ ನರಕವಚದಲ್ಲಿ ಅಡಗಿರುತ್ತದೆ.

ಕೆಲವು ಕಾರಣಗಳಿಂದ ಅಂದರೆ ಜ್ವರ ಬಂದಾಗ, ಬಿಸಿಲಿನ ಬೇಗೆಯಿಂದ ಬಳಲಿದಾಗ, ಉದ್ರೇಕ, ಆವೇಶದ ಸಂಧರ್ಭಗಳಲ್ಲಿ, ನೆಗಡಿ ಜ್ವರ ಬಂದಾಗ, ಇಲ್ಲವೇ ಗರ್ಭಿಣಿಯಾದಾಗ ಚಿಹ್ನೆಗಳು ಮರಳಿ ಕಾಣುತ್ತವೆ, ಆರು

ತ್ತವೆ. ಮತ್ತೆ ಪ್ರೇರೇಪಿಸುವ ಸಂದರ್ಭಗಳಲ್ಲಿ ಮರಳುತ್ತವೆ. ಹೀಗೇ ಇದು ಜೀವನಪರ್ಯಂತ ಪೀಡಿಸುವ ರೋಗವಾಗುತ್ತದೆ.

ನೀರ್ಗುಳ್ಳೆಗಳಲ್ಲಿ ಕೀವು ಬಾರವಂತೆ ನೋಡಿಕೊಳ್ಳಬೇಕು. ಶೇಕಡ 10 ಜಿಂಕ್ ಆಕ್ಸೈಡ್ ಇರುವ ಮುಲಾಮು ಇಲ್ಲವೇ ಶೇಕಡ ಒಂದು ಬೋರಿಕ್ ಆಮ್ಲ ಇರುವ ಗ್ಲಿಸರೀನನ್ನು ಹಚ್ಚಬೇಕು. ಕಣ್ಣಿಗೆ ಬಂದಾಗ, 5– ಐಯೋಡಾಕ್ಸಿಯುರಿಡಿನ್‌ನನ್ನು ಹಚ್ಚಿದರೆ ಬೇಗನೆ ಮಾಯುವುದು. ವಿಷಕಣ ಮಿದುಳಿಗೆ ಹರಡಿದರೆ ಮಿದುಳುಪರೆ ನಂಜಿನಿಂದ ಜೀವಕ್ಕೇ ಅಪಾಯ.

ಉಡಿ ತದ್ದುವಿನಲ್ಲಿ ನೀರುಗುಳ್ಳೆಗಳು ಗುಂಪುಗುಂಪಾಗಿ ದೇಹದ ಒಂದೇ ಪಕ್ಕದಲ್ಲಿ ಏಳುತ್ತವೆ ಬೆನ್ನುಹುರಿಯ ನರಕವಚದಲ್ಲೂ ಚರ್ಮದ ಮೇಲೂ



ಚಿತ್ರ. 15 ಉಡಿ ತದ್ದು

ವಿಷಕಣ ಇರುತ್ತದೆ. ಒಂದೆರಡು ನರಬುಡಗಳ ಆಶ್ರಯದಲ್ಲಿರುವ ಚರ್ಮದಲ್ಲಿ ಈ ರೋಗ ಕಾಣುತ್ತದೆ. ಸಾಮಾನ್ಯವಾಗಿ ಪಕ್ಕೆಲುಬುಗಳ ನಡುವೆ ಎದೆಯ ಮಧ್ಯದಿಂದ ಬೆನ್ನಿನ ಮಧ್ಯದವರೆಗೆ ಒಂದು ಪಕ್ಕದಲ್ಲಿ ಗುಳ್ಳೆಗಳು ಏಳುತ್ತವೆ. ಗುಳ್ಳೆಗಳು ಬರುವ ಮುನ್ನ, ಬಂದ ಮೇಲೆ ಮತ್ತು ಆರಿದನಂತರ ಉರಿಯುತ್ತಿರುತ್ತದೆ. ರೋಗಚಿಹ್ನೆಗಳಾದ ಗುಳ್ಳೆಗಳು ಆರಿದನಂತರ ಕಲೆ ಉಳಿಯುತ್ತದೆ. ನೋವು ಕಡಿಮೆಯಾಗದೆ ಹೆಚ್ಚಾಗುತ್ತಾಹೋಗಬಹುದು. ರೋಗ ಆರಿದನಂತರ ಉಳಿಯುವ ನೋವು ಬಲು ತೀಕ್ಷ್ಣ. 50 ವರ್ಷ ಮೇಲ್ಪಟ್ಟವರಲ್ಲಿ ಹೀಗೇ ತಡೆಯಲಾರದಷ್ಟು ಅತಿಯಾಗಿ ಆತ್ಮಹತ್ಯೆಗೆ ಕಾರಣವಾಗಿದೆ. ಅರಿವು ಕೊಡುವ ಮಿದುಳು, ನರಗಳಿಗೆ ಈ ರೋಗ ತಗುಲಿದರೆ, ವಿಪರೀತ ನೋವು ಮತ್ತು ಮನೋವಿಕಾರವೂ ಆಗಬಹುದು. ಕಣ್ಣಿನ ಉಡಿ ತದ್ದು ಆರದ ತಲೆನೋವಿಗೆ ಕಾರಣವಾಗಬಹುದು. ಗುಳ್ಳೆಗಳು ಆರಿದ ನಂತರ ಕಪ್ಪುಕಲೆ ಇಲ್ಲವೇ ತೊನ್ನು ಅಥವಾ ಎರಡೂ ಇರಬಹುದು. ಉಡಿ ತದ್ದು ಆರಿದನಂತರ ಮತ್ತೆ ಬರುವುದಿಲ್ಲ. ವಯಸ್ಸಾದವರಲ್ಲಿ ಈ ರೋಗ ಮುಂಬರುವ ಪ್ರಾಣಕ್ಕೆ ಹಾನಿಕರವಾದ ರಕ್ತ ಏಡಿಗಂತಿ, ಹಾಡ್ಜ್‌ಕಿನ್ಸ್‌ರೋಗ, ಬೆನ್ನುಹುರಿ ಸವೆದ ತಡವಾದ ಉಪದಂಶದ ಅವಾಂತರ ಮತ್ತು ದುಗ್ಧರಸ ಗ್ರಂಥಿ ಏಡಿಗಂತಿ ರೋಗಗಳ ಹಾಗಿರಬಹುದು.

ನೋವು ಕಡಿಮೆ ಮಾಡಲು ಆಸ್ಪಿರಿನ್, ಕೋಡೀನ್ ಕೊಡಬೇಕು. ಉರಿ ಕಡಿಮೆ ಮಾಡಲು ತಂಪು ಮಾಡುವ ಕ್ಯಾಲಮೀನ್ ಲೇಪದ್ರವ ಹಚ್ಚಬೇಕು. ಕೀವುಕಣಗಳು ಹಬ್ಬದಂತೆ ನೀರ್ಗುಳ್ಳೆಗಳನ್ನು ಶುದ್ಧವಾಗಿಡಬೇಕು. ತದ್ದು ಆನಂತರದ ನರದುರಿಗೆ ಪಿಟ್ಯುಟರಿ ಸಾರ, ಬಿ$_{12}$ ಜೀವ ಸತ್ತ್ವ, ಎರ್ಗೋಟಮಿನ್ ಔಷಧ ಚುಚ್ಚಬೇಕು. ಪೂರ್ತಿ ಹೋಗಲಾಡಿಸಲು ಅಸಾಧ್ಯವಾದ್ದರಿಂದ ನೋವನ್ನು ತಾಳುವ ಮನಸ್ಸನ್ನು ಮಾಡಬೇಕು. ಉಡಿ ತದ್ದಿನ ವಿಷಕಣವೇ ಮಕ್ಕಳಲ್ಲಿ ಗಣಜಿಲೆಗೆ ಕಾರಣ.

ನರೂಲಿ : ಪಪೋವ ಗುಂಪಿನ ವಿಷಕಣಗಳ ಆಕ್ರಮಣದಿಂದ ಚರ್ಮದ ಮೇಲೆ ಕೋಸುಹೂವಿನಂತೆ ಬೆಳೆಯುವ ಗಂತಿಗಳಿಗೆ ನರೂಲಿ ಎನ್ನುವರು. ಉರಿ, ನೋವು ಇರುವುದಿಲ್ಲ. ಕೀವು ಕಾಣುವುದಿಲ್ಲ. ಒಣಗಿದಂತಿರುತ್ತದೆ. ಗಾಯವಾದರೆ ರಕ್ತ ಸುರಿಯುತ್ತದೆ. ತಾಕಿದರೆ ಅಂಟು ಹೊರಡುತ್ತದೆ. ಗಂತಿಗಳ ಆಕಾರ ಕತ್ತಿನ ಮೇಲೆ ಹಾರದಂತೆ, ಗಡ್ಡದ ಮೇಲೆ ಬೆರಳಿನಂತೆ ಅಥವಾ ಪಾದದಲ್ಲಿ ಬಣದ ಹಾಸುಕಲ್ಲಿನಂತೆ ಇರಬಹುದು. ಅವು

ಕ್ರಮೇಣ ದೊಡ್ಡವಾಗುತ್ತವೆ. ಹಾಗೆಯೇ ಒಂದರಿಂದ ನೂರಾರು ಬೆಳೆಯುತ್ತವೆ. ಮೊದಲು ಹುಟ್ಟಿದ ನರೂಲಿಗೆ ತಾಯಿ ನರೂಲಿ ಎಂದೂ, ಅನಂತರ ಬಂದವಕ್ಕೆ ಮರಿ ನರೂಲಿ ಎಂದೂ ಕರೆಯುವುದುಂಟು. ಜನನೇಂದ್ರಿಯಗಳ ಮೇಲೆ ವಿವಿಧಾಕಾರದ ಕೋಸು ಹೂವಿನಂತೆ ಇಲ್ಲವೇ ಏಡಿಗಂತಿಯಂತೆ ಬೃಹದಾಕಾರವಾಗಿ ಬೆಳೆಯುತ್ತದೆ. ಜನನೇಂದ್ರಿಯಗಳು ಮತ್ತು ಗುದ ದ್ವಾರಗಳಲ್ಲಿ ಬೆಳೆಯುವ ನರೂಲಿ ಸಂಭೋಗದಿಂದ ಹರಡುವುವು. ಆದ್ದರಿಂದ ಇಂತಹದನ್ನು ಮೇಹ ನರೂಲಿ ಎನ್ನುವರು.



ಚಿತ್ರ 16. ನರೂಲಿಗಳು

ಪ್ರಬಲ ಆಮ್ಲಗಳಿಂದ ಇಲ್ಲವೇ ವಿದ್ಯುತ್ ಸುಡುತದಿಂದ ತೆಗೆಯಬಹುದು. ಶಸ್ತ್ರಕ್ರಿಯೆಯಿಂದ ಕೊಯ್ದು ತೆಗೆದುಹಾಕಬಹುದು. ಮೇಹ ನರೂಲಿಯನ್ನು ಶೇಕಡ 20–25 ಇರುವ ಪೋಡೋಫಿಲಿನ್ ದ್ರಾವಣವನ್ನು ಹಚ್ಚಿ ಕರಗಿಸಬಹುದು. ನರೂಲಿ ತನ್ನಷ್ಟಕ್ಕೆ ತಾನೇ ಮಾಯವಾಗಬಹುದು. ಬಹಳ ಇದ್ದಲ್ಲಿ ಮೊದಲು ಬೆಳೆದ (ತಾಯಿ ನರೂಲಿ) ನರೂಲಿಯನ್ನು ತೆಗೆದರೆ ಇನ್ನುಳಿದ ಮರಿ ನರೂಲಿಗಳು ತಾವಾಗಿಯೇ ಮಾಯವಾಗುವುವು. ಕೆಲವರಲ್ಲಿ

ಮಂತ್ರದಿಂದ ಇಲ್ಲವೇ ವಶೀಕರಣ ವಿದ್ಯೆಯಿಂದ ನರೂಲಿಗಳನ್ನು ಕಳೆದ ಆಶ್ಚರ್ಯವನ್ನುಂಟುಮಾಡುವ ನಿದರ್ಶನಗಳಿವೆ. ಮಾನಸಿಕ ಪ್ರಭಾವವೂ ಗುಣಕಾರಿಯಾಗಬಹುದೆಂಬ ಸೂಚನೆಗಳಿವು.

ಹಾಲ್ರಸಕಣಗಂತಿ : ಸಂಭೋಗ ರೀತ್ಯ ಹಬ್ಬುವ ಕ್ಷುದ್ರಮೇಹ. ಇದು ಗಿಳಿರೋಗದ ವಿಷಕಣಕ್ಕೆ ಸಂಬಂಧಪಟ್ಟದ್ದು. 15 ರಿಂದ 30 ವಯಸ್ಸಿನ



ಚಿತ್ರ 17. ಪಾದ ನರೂಲಿಗಳು

ಗಂಡಸರಿಗೆ ಹೆಚ್ಚಾಗಿ ಈ ರೋಗ ತಗಲುವುದು. ಸಂಭೋಗ ವಕ್ರತೆಗಳಿಂದಲೂ ಹರಡುತ್ತದೆ. ಸಂಭೋಗದನಂತರ, ರೋಗಚಿಹ್ನೆಗಳೂ ಲಕ್ಷಣಗಳೂ ಕಾಣಲು ಒಂದರಿಂದ ಮೂರು ವಾರವಾಗಬಹುದು. ಅದು ಗಂಡಸರಲ್ಲಿ ಲಿಂಗಮಣಿಯು ತಗ್ಗು, ಮುಂದೊಗಲು ಲಿಂಗಕ್ಕೆ ಸೇರುವೆಡೆಯಲ್ಲೂ, ಹೆಂಗಸರಲ್ಲಿ ಯೋನಿ

ಹಿಂಭಾಗ, ಯೋನಿ ತುಟಿ ಮತ್ತು ಯೋನಿ ಒಳಭಾಗಗಳಲ್ಲೂ ಕಾಣುತ್ತದೆ. ಕೆಲವು ದಿನಗಳಲ್ಲಿ ತಾನಾಗಿಯೇ ಮಾಯುತ್ತದೆ.



ಚಿತ್ರ 18. ತೊಡೆವಾಳೆ


ವಿಷಕಣ ರಕ್ತ ಚಲನೆಯಲ್ಲಿ ಮೊದಲೇ ಸೇರಿ ದೇಹದಲ್ಲೆಲ್ಲಾ ಹರಡಿರುತ್ತದೆ. ಆದ್ದರಿಂದ ಏರುವ ಜ್ವರ, ಛಳಿ, ಬೆವರು, ಕೀಲುನೋವು, ಅನಾಸಕ್ತಿ, ಹಸಿವುನಾಶ ಮತ್ತು ಸುಸ್ತುಗಳಿರುತ್ತವೆ.

15 ದಿನಗಳನಂತರ ತೊಡೆವಾಳೆ ಏಳುತ್ತದೆ. ತೊಡೆ ಸಂದಿನ ದುಗ್ಧ ಗ್ರಂಥಿಗಳು ದೊಡ್ಡವಾಗಿ ಒಂದಕ್ಕೊಂದು ಅಂಟಿಕೊಂಡು ವಾಳೆಯಾಗುತ್ತದೆ. ಮೇಲ್ಚರ್ಮ ದಪ್ಪನಾಗಿ, ಒರಟಾಗಿ, ನೇರಳೆ ಬಣ್ಣ ಹೊಂದುತ್ತದೆ. ಗಡ್ಡೆ ತೊಡೆಸಂದಿಯ ಅಸ್ಥಿ ಬಂಧಕದ ಮೇಲೂ ಕೆಳಗೂ ಹಬ್ಬುತ್ತದೆ. ಆದುದರಿಂದ ಗಡ್ಡೆಯ ನಡುವೆ ಹಳ್ಳ ಇರುತ್ತದೆ. ತೊಡೆವಾಳೆ ಎರಡೂ ಕಡೆ ಬರಬಹುದು. ಅದು ಅಲ್ಲಲ್ಲಿ ಹಣ್ಣಾಗಿ, ಒಡೆದು ಅನೇಕ ಭಗಂದರಗಳುಳ್ಳ ಗಡ್ಡೆಯಾಗುತ್ತದೆ. ಹೀಗೆ ಎರಡೂ ಕಡೆ ದುಗ್ಧಗ್ರಂಥಿಗಳು ನಾಶವಾಗುವುವು.

ದುಗ್ಧಗ್ರಂಥಿಗಳ ನಾಶ ವಿಧವಿಧವಾದ ವಿಕಾರಗಳಿಗೆ ಕಾರಣವಾಗುತ್ತದೆ. ಗಂಡಸಿನಲ್ಲಿ ಲಿಂಗ ಮತ್ತು ತರಡು ಆನೆ ಚರ್ಮದಂತೆ ದಪ್ಪವಾಗುತ್ತವೆ.

ಹೆಂಗಸರಲ್ಲಿ ಯೋನಿಯ ತುಟಿಗಳೂ ಆನೆ ಚರ್ಮದಂತೆ ಬೆಳೆದು ಅನೇಕ ಹುಣ್ಣುಗಳಾಗಿ ಜನನೇಂದ್ರಿಯದಲ್ಲಿ ತೂಬುಗಳಾಗುತ್ತವೆ. ಯೋನಿ ಗುದಗಳ ನಡುವೆ, ಮೂತ್ರನಾಳ ಯೋನಿನಡುವೆ ತೂತುಗಳಾಗಿ ಭಗಂದರಗಳಾಗುವುವು. ಹುಣ್ಣುಗಳಿಗೆ ಇತರ ಊತಕ ನಾಶಮಾಡುವ ಕ್ರಿಮಿಗಳು (ಫ್ಯೂಸಿಫಾರಂ ಸ್ಪೈರೋಕೀಟ) ಸೇರಿ ಗುದ ಯೋನಿಗಳೆರಡೂ ಒಂದೇ ದ್ವಾರವಾಗಿ ಹಾಳಾಗುತ್ತದೆ. ಇಂಥಾ ವಿಕಾರವನ್ನು ಹುಣ್ಣುಗೊಲ್ಲಿ, ಆನೆದೊಗಲ ಪಂಗ ಎಂದು ಕರೆಯುವರು. ಹೀಗೆ ನಾಶವಾದ ಯೋನಿ ಸಂಭೋಗಕ್ಕೆ ಉಪಯೋಗವಾಗದು. ವಿವಾಹ ವಿಚ್ಛೇದನ, ರತಿಮಿತ್ರರ ಬೇರ್ಪಡೆಗಳಿಗೆ ಕಾರಣವಾಗುತ್ತದೆ.

ಹೆಂಗಸರಲ್ಲಿ ಗುದದೊಳಗೆ ಹುಣ್ಣಾಗಿ ಮಲ ಬರಲು ಬಿಗಿತ ಬರುತ್ತದೆ. ಕೀವು ರಕ್ತಭೇದಿಯಾಗುತ್ತದೆ. ಹುಣ್ಣು ಮಾದನಂತರ ಕಲೆಗಟ್ಟಿ ಗುದದ್ವಾರ ಇಕ್ಕಟ್ಟಾಗುತ್ತದೆ. ಗುದ, ಗುದದ್ವಾರ ಮತ್ತು ಯೋನಿ ರೋಗಕ್ಕೀಡಾದಾಗ ಅಂಗತ್ರಯ ರೋಗವೆಂದು ಕರೆಯುತ್ತಾರೆ.



ಚಿತ್ರ 19. ತಲೆ ಹುಳುಕಡ್ಡಿ


ರೋಗ ಕಂಡುಹಿಡಿಯಲು ತೊಡೆವಾಳೆಯಿಂದ ಕೀವನ್ನು ತೆಗೆದು, ಅದರಿಂದ ವಿಷಕಣವನ್ನು ಪ್ರಯೋಗಶಾಲೆಯಲ್ಲಿ ಬೆಳೆಸಬಹುದು. ಫ್ರೈ ತಯಾರಿಸಿದ ಲಸಿಕೆಯನ್ನು ಚರ್ಮದ ಮೇಲೆ ಚುಚ್ಚಿದಾಗ, 48 ಘಂಟೆಯೊಳಗೆ ಕೆಂಪು ದದ್ದು ಎದ್ದರೆ ರೋಗವಿದೆಯೆಂದು ತಿಳಿಯಬಹುದು.

ಸಲ್ಫೋನೆಮೈಡ್ ಗುಂಪಿನ ಔಷಧಗಳನ್ನು 7 ರಿಂದ 10 ದಿನ ಕೊಡಬೇಕು. ತೊಡೆವಾಳೆ ಪಕ್ವವಾದಾಗ ಪಿಚಕಾರಿಯಿಂದ ಕೀವನ್ನು ತೆಗೆಯಬೇಕು. ಭಗಂದರಗಳನ್ನು ಶಸ್ತ್ರಕ್ರಿಯೆಯಿಂದ ಸರಿಪಡಿಸಬೇಕು. ವಿಕಾರವಾದ ಆನೆ ಚರ್ಮವನ್ನೂ ಹಾಗೆಯೇ ಕೊಯ್ದಸೆಯಬೇಕು. ಇತರ ಜೀವವಿರೋಧಕ ಔಷಧಗಳನ್ನೂ ಉಪಯೋಗಿಸಬಹುದು.

6. ಬೂಷ್ಟು ರೋಗಗಳು

ಬೂಷ್ಟು ಚರ್ಮದ ಮೇಲೆ ಬೆಳೆದು ಹುಳುಕಡ್ಡಿ ರೋಗಕ್ಕೆ ಕಾರಣವಾಗುತ್ತದೆ. ಬೂಷ್ಟು ಚರ್ಮದ ಕೆರಟಿನ್‌ನನ್ನು ತಿಂದು ಬದುಕುತ್ತದೆ. ಅನೇಕ ಜಾತಿಯ ಬೂಷ್ಟುಗಳು ಚರ್ಮದ ಹಲವೆಡೆಗಳಲ್ಲಿ ನೆಲೆಸಿ ವಿಧವಿಧವಾದ ಹುಳುಕಡ್ಡಿ ರೋಗಗಳನ್ನು ಹುಟ್ಟಿಸುತ್ತವೆ.

ಹುಳುಕಡ್ಡಿ : ತಲೆಕೂದಲು ವೃತ್ತಾಕಾರವಾಗಿ ಉದುರಿ ಬೋಳು ತಲೆಯಾಗುತ್ತದೆ. ಕೂದಲು ಚರ್ಮದ ಮಟ್ಟಕ್ಕೆ ಉದುರಿರುತ್ತದೆ. ಉದುರಿದ ಕೂದಲು ಮತ್ತು ಚರ್ಮದಲ್ಲಿ ಬೂಷ್ಟು ಇರುವುದರಿಂದ ಅವು ರೋಗವನ್ನು ಬೇರೆಯವರಿಗೂ ಹರಡುತ್ತವೆ. ತುರಿಕೆ ಇರಬಹುದು. ಗ್ರಿಸಿಯೋಫಲ್ವಿನ್ ಔಷಧ ಸೇವನೆಯಿಂದ ರೋಗ ಗುಣವಾಗಿ ಮತ್ತೆ ಮೊದಲಿನಂತೆ ಕೂದಲು ಬೆಳೆಯುತ್ತದೆ.



ಚಿತ್ರ 20. ಮೈ ಹುಳುಕಡ್ಡಿ

ದೇಹದ ಎಲ್ಲೆಡೆಗಳಲ್ಲಿ ಉಂಗುರಾಕಾರದ ತುರಿಯಿಂದ ಕೂಡಿದ ದದ್ದು ಇದ್ದರೆ, ಅದು ಮೈಹುಳುಕಡ್ಡಿ ಇರಬಹುದು. ವರ್ತುಲಾಕಾರದ ತುದಿಯಲ್ಲಿ ಚರ್ಮ ಉದುರುವಂತೆ ಕಾಣುತ್ತದೆ. ಆ ಚರ್ಮದಲ್ಲಿ ಬೂಷ್ಟು ಇರುತ್ತದೆ. ಉದುರಿದ ಚರ್ಮ ಹೊರಬಿದ್ದು ಇತರರಿಗೆ ತಗುಲಿದಲ್ಲಿ ಅಥವಾ ರೋಗಿಯ ಬಟ್ಟೆಯಿಂದ ಇನ್ನೊಬ್ಬರಿಗೆ ಹರಡಿದಲ್ಲಿ ರೋಗ ಹಬ್ಬುತ್ತದೆ. ರೋಗ ಹಬ್ಬುತ್ತಿರುವ ಭಾಗ ದೊಡ್ಡದಿದ್ದು ನಕಾಶೆಯಂತೆ ವಕ್ರವಕ್ರವಾಗಿ ದೇಹದ ತುಂಬಾ ಇರಬಹುದು. ಉದುರಿದ ಚರ್ಮವನ್ನು ಶೇಕಡಾ 10 ಪೊಟಾಶಿಯಂ ಹೈಡ್ರಾಕ್ಸೈಡ್ ದ್ರಾವಣದಲ್ಲಿ ಕರಗಿಸಿ ಸೂಕ್ಷ್ಮದರ್ಶಿಯಲ್ಲಿ ನೋಡಿದರೆ ಬೂಷ್ಟು ಕಾಣುವುದು.

ಹಜಾಮ ತುರಿ, ಗಡ್ಡದಲ್ಲಿ ತುರಿಯಿಂದ ಕೂಡಿದ ಹಕ್ಕಳೆಗಟ್ಟಿದ ಕಲೆಯಾಗಿ ಕಾಣಿಸುವ ಬೂಷ್ಟು ರೋಗ. ಇದು ನಾಪಿತನ ಕೀವುಚರ್ಮದಂತಿದ್ದರೂ ಕೀವುಕಣಗಳಿರುವುದಿಲ್ಲ. ಕೀವುಚರ್ಮ ಮುಖದ ಎರಡೂ ಭಾಗದಲ್ಲಿ ಮತ್ತು ಮೀಸೆ ಮತ್ತು ಮೇಲ್ಮುಖದಲ್ಲಿ ಬರುತ್ತದೆ. ಹುಳುಕಡ್ಡಿ ಮುಖದ ಕೆಳ ಭಾಗದಲ್ಲಿ ಒಂದೇ ಕಡೆ ಇರುತ್ತದೆ. ಇದು ಹಜಾಮನ ಕತ್ತಿಯಿಂದ ಹರಡಬಹುದು.

ಬೆವರಿನಿಂದ ತೋಯ್ದಿರುವ ಭಾಗ, ಅಂದರೆ ತೊಡೆಸಂದು, ಕಂಕುಳು ಮತ್ತು ಟೊಂಕಗಳಲ್ಲಿ ತುರಿಕೆಯಿಂದ ಕೂಡಿದ ದದ್ದು ಚರ್ಮವನ್ನು ಉದುರಿಸುತ್ತಿದ್ದರೆ, ಅದು ಗಜ್ಜಲಿನ ಹುಳುಕಡ್ಡಿ. ತುರಿಕೆ ವಿಪರೀತವಿರುತ್ತದೆ. ಇದು ಅಗಸನಿಂದ ಹರಡಬಹುದು. ಆಗ ಇದಕ್ಕೆ ಅಗಸನ ತುರಿ ಎಂದು ಇಂಗ್ಲಿಷರು ಕರೆಯುವರು.

ಪಾದದ ಹುಳುಕಡ್ಡಿಯಲ್ಲಿ, ಕಾಲ್ಬೆರಳುಗಳ ನಡುವೆ ಮತ್ತು ಅಂಗಾಲಿನಲ್ಲಿ ತುರಿಕೆಯಿಂದ ಕೂಡಿರುತ್ತದೆ. ಚರ್ಮ ಉದುರುತ್ತಿರುತ್ತದೆ. ಇದು ಕ್ರೀಡಾಮಲ್ಲರಲ್ಲಿರುವ ರೋಗ.

ಉಗುರು ಹುಳುಕಡ್ಡಿಯಲ್ಲಿ ಉಗುರು ದಪ್ಪನಾಗಿ ಪೆಡಸಾಗಿರುತ್ತದೆ. ಉಗುರು ಪುಡಿಪುಡಿಯಾಗಿ ಉದುರುತ್ತದೆ. ಒಂದಕ್ಕಿಂತ ಹೆಚ್ಚು ಉಗುರುಗಳು ಹುಳುಕಡ್ಡಿಯಿಂದ ನಾಶವಾಗಬಹುದು. ಹುಳುಕಡ್ಡಿ ಎಲ್ಲಿದ್ದರೂ ಗ್ರಿಸಿಯೋಫಲ್ವಿನ್ ಅದಕ್ಕೆ ಗುಣಕಾರಿ. ಸ್ಯಾಲಿಸಿಲಿಕ್ ಆಮ್ಲ ಶೇಕಡ 5 ರಿಂದ 10

ಇರುವ ಮುಲಾಮನ್ನು ತಿಕ್ಕಬಹುದು. ಬೆವರು, ತೇವ ಇದ್ದೆಡೆಗಳಲ್ಲಿ ಬೋರಿಕ್ ಆಮ್ಲದ ಪುಡಿಯನ್ನು ಉಪಯೋಗಿಸಬಹುದು.

ಕ್ಯಾಂಡಿಡಾ (ಮೊನಿಲಿಯ) ಎಂಬ ಅಣಬೆ ಚರ್ಮ ಮತ್ತು ಲೋಳೆ ಚರ್ಮಕ್ಕೆ ರೋಗವನ್ನುಂಟುಮಾಡಿ ಬಿಳಿಯ ಜಿಗುಟು ಇಲ್ಲವೇ ಉದುರುವ ಚರ್ಮ, ನಾಲಗೆ, ತುಟಿಯೊಳಗೆ, ಯೋನಿಯಲ್ಲಿ, ಉಗುರುಗಳ ನಡುವೆ ಕೆಸರು ಹುಣ್ಣಿಗೆ ಕಾರಣವಾಗುತ್ತದೆ. ನಿಸ್ಟಾಟಿನ್ ಔಷಧದಿಂದ ಗುಣವಾಗಬಹುದು.

ತೀವ್ರವಾದ ಬೂಷ್ಟು ರೋಗಗಳು ಒಳಾಂಗಗಳಲ್ಲಿ ಹರಡುತ್ತವೆ. ಚರ್ಮದ ಜೊತೆಗೆ ಅದರ ಕೆಳಗಿರುವ ಊತಕಗಳನ್ನು ಉರಿತಕ್ಕೆ ಗುರಿಮಾಡಿ ಬಾವು, ಹುಣ್ಣು, ಭಗಂದರಗಳನ್ನುಂಟುಮಾಡುವ ಕಿರಣಣಬೇನೆ ಮತ್ತು ಮಧುರಾ ಪಾದ ಭಾರತದಲ್ಲಿರುವ ಒಳಾಂಗಗಳ ಬೂಷ್ಟು ರೋಗಗಳು. ಮುಖ ಮತ್ತು ಕತ್ತಿನಲ್ಲಿ ಕೀವು ಕುರುಗಳು ಬೆಳೆದು ಒಡೆದು ತೂತುಗಳಾಗಿ ಚಿಕ್ಕ ಕಾಳಿನಂತೆ ಗಟ್ಟಿಕೀವು ಸುರಿಸುತ್ತವೆ. ಹೀಗೆ ಹೊಟ್ಟೆಯ ಮೇಲೂ ಬರಬಹುದು. ಪಾದ ದಪ್ಪನಾಗಿ ವಿಕಾರವಾದ ಗುಳ್ಳೆ, ಗಡ್ಡೆ, ಕೀವು ಕಾಳು ದುರಿಸುವ ಭಗಂದರಗಳಿಂದ ಕೂಡಿರುತ್ತದೆ. ಕಿರಣಣಬೇನೆ ನಾಯಿ ಮತ್ತು ದನಗಳಿಂದ ಹರಡಿದರೆ ಮಧುರಾ ಪಾದದ ಬೂಷ್ಟು ಗೊಬ್ಬರದಿಂದ ಹರಡುತ್ತದೆ. ಇಂಥಾ ರೋಗಗಳಿಗೆ ಆಂಫೊಟರಿಸಿನ್ ಮದ್ದು ಸೇವನೆ ಮತ್ತು ಶಸ್ತ್ರಕ್ರಿಯೆ ಆಗಬೇಕಾಗಿದೆ.

7. ತುರಿಸುವ ರೋಗಗಳು

ತುರಿ

ಅಂಗದ ಇಲ್ಲವೇ ಊತಕದ ಉರಿತವಾದರೆ ನೋವು, ಬಾವು, ಕೆಂಪೇರಿಕೆ ಮತ್ತು ಕಾರ್ಯ ತೊಂದರೆಗಳುಂಟಾಗುವುವು. ಹಾಗೇ, ಚರ್ಮಕ್ಕೆ ಉರಿತವಾದಾಗ, ನೋವಿನ ಬದಲು ತುರಿ ಬರುತ್ತದೆ. ಎರಡು ವಿಧದ ತುರಿ ಉಂಟು. ಒಂದು ತೆರನ ತುರಿಯಲ್ಲಿ ಕೆರತವಿರುತ್ತದೆ. ರೋಗಿ ಉಗುರಿನಿಂದ ಚರ್ಮವನ್ನು ಕೆರೆದು ಗೀಚುತ್ತಾನೆ. ಕಜ್ಜಿಯು ತುರಿ ಇಂಥದು. ಇದನ್ನು ಕೆರೆತದ ತುರಿ ಎನ್ನಬಹುದು. ಎರಡನೆಯ ತುರಿ ಬಂದಾಗ ಕೈಯಿಂದ ಸವರಿಕೊಳ್ಳುವನು. ಇದಕ್ಕೆ ಸವರುವ ತುರಿ ಎನ್ನುವರು. ಇಂಥ ತುರಿ ಗಾದರಿಯಲ್ಲಿ ಬರುತ್ತದೆ.

ಸ್ಪರ್ಶಜ್ಞಾನದ ವೈಪರೀತ್ಯದಿಂದ ಹುಳು ಮೈಮೇಲೆ ಹರದಾಡಿದಂತಿರುತ್ತದೆ. ಅದಕ್ಕೆ ಹುಳುಕಾಟ ಎನ್ನಬೇಕು. ಚರ್ಮ ಬೆಂಡಾಗುವುದು, ಉರಿ, ಕಡಿತ ಮುಂತಾದವು, ಚರ್ಮದ ನರಗಳ ಶಕ್ತಿ ಕುಂದಿದಾಗಿನ ಲಕ್ಷಣಗಳು.

ಕಾಮಾಲೆ, ಸಿಹಿಮೂತ್ರ ಮುಂತಾದ ರೋಗಗಳಲ್ಲಿ ಮೈತುಂಬಾ ತುರಿ ಇರಬಹುದು. ಹೀಗೆ ತುರಿ ರೋಗ ಲಕ್ಷಣವಾಗಬಹುದು, ಇಲ್ಲವೇ ದೇಹದಲ್ಲಿ ಯಾವ ರೋಗವೂ ಕಾಣಿಸದೇ ತುರಿ ಮಾತ್ರ ಇರಬಹುದು. ಹೀಗೆ, ಮುದುಕರಲ್ಲಿ ಮತ್ತು ಮನೋರೋಗಿಗಳಲ್ಲಿ ತುರಿ ಇರುತ್ತದೆ.

ತುರುಚಿಕೆ

ಸವರುವ ತುರಿ ಮತ್ತು ಉರಿಯಿಂದ ಕೂಡಿದ ದದ್ದುಗಳು ಮೈತುಂಬಾ ಬರುವ ರೋಗಕ್ಕೆ ತುರುಚಿಕೆ ಎನ್ನುವರು. ಒಮ್ಮೊಮ್ಮೆ ಒಂದೇ ತುರುಚಿ ಇರಬಹುದು. ಇದು ಅಲ್ಪ ಇಲ್ಲವೇ ಬಹು ಕಾಲದಿಂದ ಇರಬಹುದು. ತುರುಚಿಕೆಯು ಮುಖ್ಯ ಲಕ್ಷಣವೆಂದರೆ ಮೊದಲು ರೋಗಿ ಮೈತುಂಬಾ ಕೈಯಿಂದ ಕೆರೆಯಲು


ಪ್ರಾರಂಭಿಸುತ್ತಾನೆ. ಕೆರೆಯುತ್ತಿರುವಾಗಲೇ, ಕೆಂಪು ದದ್ದುಗಳು ಏಳುತ್ತವೆ. ದದ್ದುಗಳು ಕೆಲವು ಘಂಟೆಗಳನಂತರ ಮಾಯವಾಗುತ್ತವೆ. ದಿನಕ್ಕೆ ಹೀಗೆ ಹಲವಾರು ಸಲ ಬರಬಹುದು, ಇಲ್ಲವೇ ಒಂದೇ ಸಲ ಬರಬಹುದು. ಸಾಮಾನ್ಯವಾಗಿ ಎಲ್ಲರೂ ಎಂದಾದರೊಂದು ದಿನ ಅನುಭವಿಸುವ ರೋಗವಿದು.

ಇದರ ರೋಗ ಕಾರಣಗಳನೇಕ. ಒಗ್ಗದಿಕೆಯ ಫಲದಿಂದ ಚರ್ಮದಲ್ಲಿ ಕೆಲವು ವಸ್ತುಗಳು ಬಿಡುಗಡೆಯಾಗುತ್ತವೆ. ಅವುಗಳಲ್ಲಿ ಹಿಸ್ಟಮೀನ್ ಎಂಬುದು ಮುಖ್ಯ. ಅಸಿಟೈಲ್‌ಕೋಲಿನ್ ಇನ್ನೊಂದು. ಕೆಲವರಲ್ಲಿ ಒಗ್ಗದಿರುವ ಕಾರಣ, ಆಹಾರ, ಔಷಧಿ ಇಲ್ಲವೇ ಹೊಟ್ಟೆಯೊಳಗೆ ಜಂತು ಹುಳುವಾಗಿರಬಹುದು. ತಂಡಿ ಬಿಸಿಲುಗಳು ಕೆಲವರಿಗೆ ಕಾರಣವಾದರೆ, ಇನ್ನೂ ಕೆಲವರಲ್ಲಿ ಇರುವೆ, ಮಿಡತೆ, ಸೊಳ್ಳೆ ಮುಂತಾದವುಗಳ ಕಡಿತ ಕಾರಣವಾಗಬಹುದು. ಇನ್ನೂ ಕೆಲವರಲ್ಲಿ, ಮಾನಸಿಕ ರೋಗವೇ ಕಾರಣವಾಗಬಹುದು. ತುರಿ ಮತ್ತು ಉರಿ ಕಡಿಮೆ ಮಾಡುವ ಕ್ಯಾಲಮೀನ್ ಲೇಪದ್ರವ ಹಚ್ಚಬೇಕು. ಹಿಸ್ಟಮೀನ್ ವಿರೋಧಿ ಔಷಧಿಗಳನ್ನು ಕೊಡಬೇಕು. ಮುಖ್ಯವಾಗಿ, ಇದರ ಕಾರಣ ಕಂಡುಹಿಡಿದು ತಕ್ಕ ಚಿಕಿತ್ಸೆ ಮಾಡಬೇಕು.

ಚರ್ಮದುರಿತ ಅಥವಾ ಇಸಬು

ಇದಕ್ಕೆ ಚರ್ಮದ ಉರಿತವೆಂಬುದು ಒಂದು ವಿಶಿಷ್ಟ ಪದ. ಇಸಬು ಎಂಬುದು ರೂಢಿಯಲ್ಲಿರುವ ಪದ. ಚರ್ಮ ಕೆಂಪಾಗಿ, ಕಾವೇರಿ, ಸೂಕ್ಷ್ಮ ನೀರ್ಗುಳ್ಳೆಗಳು ಏಳುವುದಕ್ಕೆ ಇಸಬು ಎನ್ನುವರು. ನೀರ್ಗುಳ್ಳೆಗಳು ಒಡೆದು ನೀರು ಸುರಿಯಬಹುದು. ನೀರು ಆರಿ, ಒಣಗಿ ಗಟ್ಟಿಯಾಗಿ ಹಕ್ಕಳೆಗಟ್ಟಬಹುದು. ಬಹುಕಾಲದ ಉರಿತವಾದರೆ ಚರ್ಮ ಮಂದವಾಗಿ, ಕಪ್ಪಾಗಿ, ತರಕಲಾಗಿ ಒರಟಾಗಬಹುದು. ಉರಿ ಮತ್ತು ತುರಿಕೆ ಇಸಬಿನ ಮುಖ್ಯ ಲಕ್ಷಣಗಳು. ನೀರ್ಗುಳ್ಳೆಗಳು ಸೂಕ್ಷ್ಮವಾಗಿರುವುದರಿಂದ ಕಣ್ಣಿಗೆ ಇಲ್ಲವೇ ಕೈ ಮುಸೂರಕ್ಕೆ ಕಾಣದೆ ಇರಬಹುದು. ಒಂದು ಚೂರು ಚರ್ಮವನ್ನು ಕೊಯ್ದು ಬಣ್ಣ ಕೊಟ್ಟು ಸೂಕ್ಷ್ಮದರ್ಶಿಯಲ್ಲಿ ನೋಡಿದಾಗ ಹೊರ ಚರ್ಮದ ಪದರಗಳಲ್ಲಿ ನೀರ್ಗುಳ್ಳೆಗಳಿರುವುದನ್ನು ಚೆನ್ನಾಗಿ ಕಾಣಬಹುದು. ಇಸಬುಗಳು ಅನೇಕವಿವೆ.

1. ಸೋಂಕು ಇಸಬು
2. ಆಜನ್ಮ ಇಸಬು
3. ಮೈ ಜಿಡ್ಡು ಸುರಿಕ ಇಸಬು ಮತ್ತು
4. ಹಸುಗೂಸಿನ ಇಸಬು ಮುಖ್ಯವಾದವು. ಅನೇಕ ಇತರ ಇಸಬುಗಳುಂಟು. ಬಿಲ್ಲೆ ಇಸಬು, ಗುರುತ್ವಾಕರ್ಷಣ ಇಲ್ಲವೇ ನೆತ್ತರು ನಿಂತ ಇಸಬು, ತನ್ನ ಒಗ್ಗದಿಕೆ ಇಸಬು, ಅಂಗಾಲು ಅಂಗೈ ಗುಳ್ಳೆ ಜಡು ಮುಂತಾದವು.



ಚಿತ್ರ. 21.

ಮೊಡವೆ, ಇಸಬು ಏಳುವ ಸ್ಥಳಗಳು

ಅ. ಮೊಡವೆ ಬರುವ ಸ್ಥಳ
ಬ. ಮೈಜಿಡ್ಡು ಗ್ರಂಥಿ ಇಸಬು ಬರುವ ಸ್ಥಳ

ಸೋಂಕು ಇಸಬು

ತನ್ನ ಜೀವನದಲ್ಲಿ ತಾಕುವ ಹೊರ ಮತ್ತು ಒಳ ವಸ್ತುಗಳಿಂದ ಹುಟ್ಟುವ ಇಸಬು. ಇದು ಸ್ವಾರ್ಜಿತ ಇಸಬು. ಕಸಬಿನಲ್ಲಿ ತಾಕುವ

ವಸ್ತುಗಳಿಂದ ಉಂಟಾದ ರೋಗಕ್ಕೆ ಕಸಬಿನ ಇಸಬು ಎನ್ನುವರು. ಉದ್ಯಮ ಕೈಗಾರಿಕೆಗಳಲ್ಲಿ ಉಪಯೋಗಿಸುವ ವಸ್ತುಗಳಿಂದ ಬರುವ ರೋಗಕ್ಕೆ ಕೈಗಾರಿಕಾ ಇಸಬು ಎಂದು ಕರೆಯುವರು. ಹಾನಿಕರ ವಸ್ತುಗಳಲ್ಲಿ ಎರಡು ವಿಧಗಳಿವೆ :



ಚಿತ್ರ 22. ಸೊಂಕು ಇಸಬು

1. ಮೂಲ ಕೆರಳಿಕಗಳು ಮತ್ತು 2. ಒಗ್ಗದಿಕೆಯ ಕೆರಳಿಕಗಳು. ಮೂಲ ಕೆರಳಿಕಗಳಿಗೆ ಉದಾಹರಣೆಗಳು ಕ್ಷಾರ ಮತ್ತು ಆಮ್ಲಗಳು. ಇವು ಎಲ್ಲರ ಚರ್ಮಕ್ಕೂ ಉರಿತವನ್ನುಂಟುಮಾಡುತ್ತವೆ. ಇವು ಯಾವುವು ಎಂಬುದು ಬಹುತೇಕ ರೋಗಿಯೇ ತಿಳಿದುಕೊಳ್ಳುತ್ತಾನೆ. ಒಗ್ಗದಿಕೆಯನ್ನು ಕೆರಳಿಸುವ ವಸ್ತುಗಳು ಎಲ್ಲರ ಚರ್ಮಕ್ಕೂ ಹಾನಿತರುವಂಥವಲ್ಲ. ಅವು ಸಾಧಾರಣವಾಗಿ ಹಾನಿಕಾರಕಗಳಲ್ಲ. ಎಲ್ಲೋ ಕೆಲವರಲ್ಲಿ ಮಾತ್ರ ಅವು ಚರ್ಮದೊಳಗೆ ಚರ್ಮದ ಪ್ರೋಟೀನ್ ಜೊತೆ ಸೇರಿ ಒಗ್ಗದಿಕೆಯ ವಸ್ತುವಾಗುತ್ತವೆ. ಹೀಗಾಗಲು ಕನಿಷ್ಠ ಒಂದು ವಾರ ಬೇಕಾಗುವುದು. ರೋಗಿಗೆ ಮೊದಲು

ಆ ವಸ್ತುಗಳು ತಾಕಿದಾಗ ಯಾವ ಹಾನಿಯೂ ಆಗುವುದಿಲ್ಲ. ಕೆಲವು ದಿನಗಳ ನಂತರ ಇಲ್ಲವೇ ಕೆಲವು ವರ್ಷಗಳನಂತರ, ರೋಗಿಗೆ ಇಸಬು ಬರುತ್ತದೆ. ಆದ್ದರಿಂದ, ಆ ವಸ್ತುವನ್ನು ರೋಗಿ ಅನುಮಾನಿಸುವುದಿಲ್ಲ. ಅವನಿಗೆ ಗೊತ್ತಾಗುವುದೂ ಇಲ್ಲ. ಹೀಗಾಗಿ ಇಸಬು ಹೆಚ್ಚು ಹೆಚ್ಚಾಗುತ್ತದೆ. ಮನುಷ್ಯ ತನ್ನ ಜೀವನದಲ್ಲಿ ಉಪಯೋಗಿಸುವ ಎಲ್ಲ ವಸ್ತುಗಳೂ ಹೀಗೇ ಪರಿವರ್ತಿಸಿ ಒಗ್ಗದಿಕೆಯ ವಸ್ತುಗಳಾಗಬಹುದು. ಉದಾಹರಣೆಗಾಗಿ ಕೃತಕ ಕುಂಕುಮ, ರಬ್ಬರ್, ತೊಗಲು, ಕೃತಕ ಬಟ್ಟೆಗಳು (ಟೆರಿಲೀನ್), ಹಿಡಿಕೆಗಳು, ಸಲ್ಫೋನಮೈಡ್, ಪೆನಿಸಿಲಿನ್ ಮುಂತಾದ ಔಷಧಗಳು. ಹಾನಿಕರ ವಸ್ತು ದೇಹದ ಯಾವ ಭಾಗವಲ್ಲಿ ತಾಕುತ್ತಿರುತ್ತದೆಯೋ ಅದೇ ಭಾಗದಲ್ಲಿ ಇಸಬು ಬರುತ್ತದೆ. ಪಾದರಕ್ಷೆ ಇಸಬು ಪಾದಕ್ಕೆ ಬರುವುದು. ಯಾವ ವೃತ್ತಿಯಲ್ಲಿ ಆ ವಸ್ತುವನ್ನು ಉಪಯೋಗಿಸುವರೋ ಅಂಥ ವೃತ್ತಿಯ ಇಸಬು ಎಂದು ಕರೆಯುವರು. ರೊಟ್ಟಿ ಮಾಡುವವರಲ್ಲಿ ರೊಟ್ಟಿಗೆ ಹುದುಗು ಹಾಕುವ ರಸಾಯನಿಕದಿಂದ ಬಂದರೆ, ಅದನ್ನು ರೊಟ್ಟಿ ಬೇಯಿಸುವವರ ಇಸಬು ಎನ್ನುತ್ತಾರೆ. ಕಲ್ಗಾರೆಯಲ್ಲಿರುವ ಕ್ರೋಮ್ ಲೋಹದಿಂದ ಬರುವ ಇಸಬಿಗೆ ಕಲ್ಗಾರೆ ಇಸಬು ಇಲ್ಲವೇ ಕ್ರೋಮ್ ಇಸಬು ಎನ್ನುತ್ತಾರೆ.

ರೋಗ ಕಾರಣವಾದ ವಸ್ತುಗಳನ್ನು ಕಂಡುಹಿಡಿಯುವ ವಿಧಾನವೆಂದರೆ ಅಂಟುಪಟ್ಟಿ ಪರೀಕ್ಷೆ. ಗುಮಾನಿಯಿರುವ ವಸ್ತುವನ್ನು ಹಾಗೆಯೇ, ನೀರಿನಲ್ಲಿ ಬೆರೆಯಿಸಿಯೋ, ಪುಡಿಯಾಗಿಯೋ, ಇಲ್ಲವೇ ಮುಲಾಮನ್ನಾಗಿಯೋ ಬೆರೆಸಿ ಕೂದಲಿಲ್ಲದ ಚರ್ಮ ಭಾಗಕ್ಕೆ ಹಚ್ಚಿ ಅಂಟುಪಟ್ಟಿ ಹಾಕಿಡಬೇಕು. 24 ರಿಂದ 48 ಘಂಟೆಗಳಾದ ಮೇಲೆ, ಪಟ್ಟಿಯನ್ನು ತೆಗೆದು ನೋಡಿದಾಗ ಅದರ ತಳದಲ್ಲಿ ಕೆಂಪೇರಿ ನೀರ್ಗುಳ್ಳೆಗಳು ಕಂಡುಬಂದರೆ, ಅದನ್ನು ಸಕಾರ ಪ್ರತಿಕ್ರಿಯೆ ಎಂದು ಭಾವಿಸಿ, ಆ ವಸ್ತು ಇಸಬಿಗೆ ಕಾರಣವಾಗಿರಬಹುದೆಂದು ತಿಳಿಯಬೇಕು.

ಅಂತಹ ಗುಮಾನಿ ವಸ್ತುಗಳು ಹೀಗಿವೆ: ಯಂತ್ರ ಮೆತುಚಾಲಕ ಎಣ್ಣೆಗಳು, ರಬ್ಬರಿಗೆ ಹಾಕುವ ರಸಾಯನಿಕಗಳು, ಚಿತ್ರ ಹಿಡಿತದಲ್ಲಿ ಉಪಯೋಗಿಸುವ ವಸ್ತುಗಳು, ನಿಕ್ಕಲು, ರೊಟ್ಟಿ ಹುದುಗು ಹಾಕುವ ರಸಾಯನಿಕಗಳು, ಮರಗಳಲ್ಲಿರುವ ಎಣ್ಣೆ, ಪಾಲಿಷ್‌ನಲ್ಲಿರುವ ವಸ್ತುಗಳು, ಪೆಟ್ರೋಲು ಮತ್ತು ಪ್ಯಾರಾಫಿನ್‌ಗಳೂ, ಚೊಕ್ಕಾರಕಗಳು, ಕೇಶಾಲಂಕಾರ ವಸ್ತುಗಳೂ, ಎಕ್ಸ್-ಕಿರಣ ಮತ್ತು ರೇಡಿಯಂ, ಹೂವುಗಳು,ಫಾರ್ಮಲಿನ್ (ಇದನ್ನು ನಿದಾನ

ಪಂಡಿತ, ಅಂಗರಚನ ಪಂಡಿತ, ದಾದಿ, ನೆಯ್ಗಾರರೂ, ಬಟ್ಟೆ ವ್ಯಾಪಾರಿಗಳೂ, ವೈದ್ಯರೂ ಉಪಯೋಗಿಸುತ್ತಾರೆ), ಕೂದಲನ್ನು ಕಪ್ಪು ಮಾಡುವ ವಸ್ತುಗಳೂ, ರೂಪ ಕೊಡುವ ಕಾಂತಿವರ್ಧಕಗಳೂ, ಕೆನ್ನೆ ಬಣ್ಣ, ತುಟಿ ಬಣ್ಣ, ಕಾಡಿಗೆ, ಉಗುರು ಬಣ್ಣ. ಕ್ರಿಮಿನಾಶಕಗಳು ಇತ್ಯಾದಿ.

ಕೆರಳಿಕ ವಸ್ತುಗಳನ್ನು ಕಂಡುಹಿಡಿದು, ದೂರ ಹಾಕಬೇಕು. ಉಪ್ಪು ನೀರಿನಿಂದ ತೊಳೆದು, ಸ್ಟೀರಾಯ್ಡ್ ಇರುವ ಮುಲಾಮನ್ನು ಹಚ್ಚಬೇಕು.

ಆಜನ್ಮ ಇಸಬು

ಇಂಥ ಇಸಬು, ಆಜನ್ಮದಿಂದಲೇ ಒಗ್ಗದಿಕೆಯನ್ನು ಸಂಪಾದಿಸಿದವರಲ್ಲಿ ಬರುತ್ತದೆ. ಇಂಥವರಲ್ಲಿ ಗೂರಲು ತುರುಚಿಕೆ, ಕಡೆಗಣ್ಣಿನ ಕಣ್ಣೋವು ಮುಂತಾದ ರೋಗಗಳಿರಬಹುದು. ಇಸಬು ಇದ್ದಾಗ ಬೇರೆ ಅಂಗಗಳ ರೋಗವಿರುವುದಿಲ್ಲ. ಇಸಬು ಇಲ್ಲದಿರುವಾಗ ಗೂರಲು ಹೆಚ್ಚಾಗಬಹುದು. ಇಸಬು ಜನ್ಮದಿಂದ ಮರಣವವರೆಗೂ ಕಾಡಬಹುದು. ಆಗಾಗ್ಗೆ ಇಸಬು ಮಾಯವಾಗುತ್ತದೆ, ಮತ್ತೆ ಬರುತ್ತದೆ. ಕೆಲವರಲ್ಲಿ ಅದು ಹುಟ್ಟಿದನಂತರ, ಜೀವನದ ಕೊನೆಯವರೆಗೂ ಇದ್ದೇ ಇರುತ್ತದೆ. ಆದ್ದರಿಂದ ಜನಸಾಮಾನ್ಯರಲ್ಲಿ ಇಸಬು ಎಂದಿಗೂ ಮಾಯುವುದಿಲ್ಲ ಎಂಬ ನಂಬಿಕೆ ಉಂಟು. ಕೆಲವರಲ್ಲಿ ಇಂಥಾ ಇಸಬು ತಿಂಗಳಿಗೊಮ್ಮೆ ಬರಬಹುದು. ಅದಕ್ಕಾಗಿ ಅವರು ಮುಟ್ಟು ಇಲ್ಲವೇ ಚಂದ್ರನನ್ನು ಹಳಿಯುತ್ತಾರೆ. ಹುಟ್ಟುವಾಗ ಚರ್ಮ ಚೆನ್ನಾಗಿಯೇ ಇರುತ್ತದೆ. ಒಂದೆರಡು ತಿಂಗಳುಗಳನಂತರ ಮುಖ ಚರ್ಮ ಬದಲಾಗಿ, ಕೆಂಪಾಗಿ, ಊದಿಕೊಂಡು ನೀರು ಸುರಿಸುತ್ತದೆ. ತುರಿ ಮತ್ತು ಉರಿಯಿಂದ ಮಗು ಅಳುತ್ತದೆ. ಇಂಥಾ ಇಸಬು ಬಹು ಕಾಲ ಪೀಡಿಸುತ್ತದೆ. ಮೈಯೆಲ್ಲಾ ಹರಡುತ್ತದೆ. ಕೀವುಗೂಡಿ ಕೀವುಚರ್ಮವಾಗಿ ನೋಡಲು ಅಸಹ್ಯವಾಗುತ್ತದೆ. ಹೀಗೆ ಎರಡು ವರ್ಷ ಬಳಲಿದನಂತರ ಇಸಬು ನಿಲ್ಲುತ್ತದೆ. ಮತ್ತೆ 6–7ನೇ ವರ್ಷ ಶಾಲೆಗೆ ಹೋಗಲು ಪ್ರಾರಂಭಿಸಿದಾಗ ಬರುತ್ತದೆ. ಆಗ ಇಸಬು ಕೆಲವೆಡೆಗಳಲ್ಲಿ ಮುಖ್ಯವಾಗಿ ಸಂಧಿ ಸ್ಥಳಗಳಲ್ಲಿ ಬರುತ್ತದೆ. ಇದು ಆಗಾಗ್ಗೆ ಮಾಯವಾಗಿ, ಮತ್ತೆ ಮರುಕಳಿಸಿ ಉಲ್ಬಣವಾಗುವುದುಂಟು. 15–20 ವರ್ಷಗಳನಂತರ ಸಾಮಾನ್ಯವಾಗಿ ಬಹಳ ದಿನಗಳ ಇಸಬು ಬರುತ್ತದೆ. ಇದು ನೆತ್ತಿಯ ಹಿಂಭಾಗದಲ್ಲಿ, ಮುಂಗೈಯಲ್ಲಿ, ತೊಡೆಯ

ಮಧ್ಯದಲ್ಲಿ, ಕಣಕಾಲು ಭಾಗದಲ್ಲಿ ಇರುತ್ತದೆ. ಆಗ ಚರ್ಮ ದಪ್ಪನಾಗಿ, ಕಪ್ಪಾಗಿ, ಒರಟಾಗಿ ವಿಕಾರವಾಗಿರುತ್ತದೆ. ಚರ್ಮದ ಉರಿಯನ್ನು ತಗ್ಗಿಸಲು ಕ್ಯಾಲಮೀನ್ ಲೇಪದ್ರವ ಹಚ್ಚಬೇಕು. ತುರಿ ತಗ್ಗಿಸಲು ಆಂಟಿಹಿಸ್ಟಮೀನ್ ಅಥವಾ ಸ್ಟೀರಾಯ್ಡ್ ಔಷಧವನ್ನು ಕೊಡಬಹುದು. ನೆಮ್ಮದಿಕಾರಕ ಔಷಧಗಳು ಕೂಡ ಅನುಕೂಲ ಕೊಡಬಹುದು.

ಮೈಜಿಡ್ಡು ಗ್ರಂಥಿ ಇಸಬು

ಇದು ಚಿಕ್ಕ ವಯಸ್ಸಿನವರಲ್ಲಿ ಮೈ ತುಂಬಾ ಇರುತ್ತದೆ. ಮುಖ್ಯವಾಗಿ, ಮುಖ, ಎದೆ, ನಡುಬೆನ್ನು, ಗುಂಜೆಲು ಮತ್ತು ತೊಡೆಗಳಲ್ಲಿರುತ್ತದೆ. ಇದು ಸಾಮಾನ್ಯವಾಗಿ ಮನೆಯವರಿಗೆಲ್ಲಾ ಇರುತ್ತದೆ. ಇದಕ್ಕೆ ಕುಟುಂಬದ ಇಸಬು ಎನ್ನಬಹುದು. ಅವರು ತಿನ್ನುವ ವಸ್ತುಗಳಿಂದಲೋ, ಅವರ ಸಾಮಾನ್ಯ ನಡೆವಳಿಕೆ, ಮನೋಪ್ರವೃತ್ತಿಯಿಂದಲೋ ಬರುತ್ತದೆ ಎನ್ನಬಹುದು.

ಕ್ಯಾಲಮೀನ್ ದ್ರಾವಣವಲ್ಲಿ ಗಂಧಕವನ್ನು ಬೆರಸಿ ಹಚ್ಚಬೇಕು. ಜೀವನದಲ್ಲಿ ವಿಶ್ರಾಂತಿ, ಮನಸ್ಸಿಗೆ ಶಾಂತಿ ಬರುವಂತೆ ನಡೆದುಕೊಳ್ಳಬೇಕು. ಊಟದಲ್ಲಿ ಎಣ್ಣೆ, ಕೊಬ್ಬು, ಹಿಟ್ಟು ಮತ್ತು ಸಕ್ಕರೆ ಪದಾರ್ಥಗಳನ್ನು ಕಡಿಮೆ ಮಾಡಬೇಕು.

ಹಸುಗೂಸಿನ ಇಸಬು : ಇದು ಹಸುಗೂಸಿಗೆ ಬರುವ ಇಸಬು. ಮೇಲೆ ವಿವರಿಸಿದ ಸೋಂಕು ಇಸಬು. ಆಜನ್ಮ ಇಸಬು ಮತ್ತು ಮೈಜಿಡ್ಡು ಗ್ರಂಥಿಗಳ ಇಸಬು ಇವೂ ಬರಬಹುದು. ಮಕ್ಕಳ ಬಟ್ಟೆಗಳಲ್ಲಿ ಮೂತ್ರ ಮಲ ಚೆನ್ನಾಗಿ ತೊಳೆಯದಿದ್ದರೆ, ಇಲ್ಲವೇ ಚೊಕ್ಕಾರಕಗಳನ್ನು ಅತಿಯಾಗಿ ಉಪಯೋಗಿಸಿದರೆ, ಜನನೇಂದ್ರಿಯಗಳ ಸುತ್ತಲೂ ಇಸಬು ಏಳುತ್ತದೆ. ಮುಖ್ಯವಾಗಿ ಈ ಇಸಬಿನ ಕಾರಣವೆಂದರೆ, ಆಹಾರ. ಹಾಲನ್ನು ನೀರಾಗಿ ಇಲ್ಲವೇ ಗಟ್ಟಿಯಾಗಿ ಕೊಟ್ಟರೆ, ಅನ್ನ, ಮಾಂಸ ಮುಂತಾದುವನ್ನು ಆರು ತಿಂಗಳ ಮೊದಲೇ ಪ್ರಾರಂಭಿಸಿದಾಗ, ಇಲ್ಲವೇ ಡಬ್ಬಿ ಪುಡಿ ಹಾಲನ್ನು ಕೊಟ್ಟಾಗ ಇಸಬು ಬರುತ್ತದೆ.

ತಕ್ಕ ಪ್ರಮಾಣದಲ್ಲಿ ಕೂಸಿಗೆ ಒಗ್ಗುವಂತಹ ಸರಿಯಾದ ಆಹಾರವನ್ನು ಕೊಡಬೇಕು. ಕ್ಯಾಲಮೀನ್ ಲೇಪದ್ರವ ಇಲ್ಲವೇ ಸ್ಟೀರಾಯ್ಡ್ ಇರುವ

ನೀರು, ಮುಲಾಮುಗಳನ್ನು ಉಪಯೋಗಿಸಬೇಕು. ಕಾರಣ ಗೊತ್ತಾದರೆ, ಅದನ್ನು ಆದಷ್ಟು ದೂರ ಮಾಡಬೇಕು.



ಚಿತ್ರ 23. ಹಸುಗೂಸಿನ ಇಸಬು

ಇತರ ಇಸಬುಗಳು: ಬಿಲ್ಲೆ ಇಸಬು ಕಾಲು ಇಲ್ಲವೇ ಕೈ ಮೇಲೆ ಬಿಲ್ಲೆಯಾಕಾರವಾಗಿ ಇಸಬು ಬರುತ್ತದೆ. ನೀರು ಸುರಿಯುತ್ತಿರಬಹುದು. ಇದಕ್ಕೆ ಕಾರಣ ಗೊತ್ತಿಲ್ಲ. ಬಹುತೇಕವಾಗಿ ಜೀವನದಲ್ಲಿನ ತೊಡಕುಗಳನ್ನು ನಿಭಾಯಿಸುವ ಶಕ್ತಿ ಇಲ್ಲದವನಲ್ಲಿ ಇದು ಬರುತ್ತದೆ. ಉದಾಹರಣೆಯಾಗಿ, ಒಬ್ಬ 15 ವರ್ಷದ ಹುಡುಗ ಇಂಥಾ ಇಸಬಿನಿಂದ ನರಳುತ್ತಿದ್ದ. ಅವನು ಶಾಲೆಯಲ್ಲಿ ಹಿಂದೆ ಬಿದ್ದಿದ್ದ. ಮುದಿಕ ತಂದೆತಾಯಿಗಳನ್ನು ಕಾಪಾಡಲು ನಿಶ್ಯಕ್ತನಾಗಿದ್ದ. ಔಷಧಗಳಿಂದ ರೋಗ ಗುಣವಾಗಲಿಲ್ಲ. ಅವನಿಗೆ ಕೆಲಸ

ಸಿಕ್ಕಿ ತಂದೆತಾಯಿಗಳಿಗೆ ಊಟ ಹಾಕಲು ದುಡ್ಡು ಕೈಗೆ ಬಂದಾಗ, ಇಸಬು ಮಾಯವಾಯಿತು.



ಚಿತ್ರ 24. ಗುರುತ್ವಾಕರ್ಷಣ ಇಸಬು

ಗುರುತ್ವಾಕರ್ಷಣ ಇಸಬು : ಇದು ವಯಸ್ಸಾದವರ ಕಾಲಿನಲ್ಲಿ ಬರುತ್ತದೆ. ಹಿಂಡಿನ ಒಳಭಾಗದಲ್ಲಿ ಎರಡೂ ಕಾಲುಗಳಲ್ಲೂ ಬರುತ್ತದೆ. ಕೊಂಕಿದ ಸಿರವಿದ್ದವರಾದರೆ, ವಯಸ್ಕರಲ್ಲಿಯೂ ಬರಬಹುದು. ರಕ್ತ ಚಲಿಸದೆ ಕಾಲಿನಲ್ಲೇ ಉಳಿದು ಸಿರದ ಹೊರಗೆ ಇರುವ ಊತಕಗಳಲ್ಲಿ ಜಿನುಗಿ ಉರಿತಕ್ಕೆ ಕಾರಣವಾಗುತ್ತದೆ.

ಎಂದಿನಂತೆ ರಕ್ತ ಚಲಿಸುವಂತೆ ಮಾಡುವ ಕ್ರಮ ತೆಗೆದುಕೊಳ್ಳಬೇಕು.

ತನ್ನ ಒಗ್ಗದಿಕೆ ಇಸಬು : ರೋಗಿಯ ಮೈ ಊತಕಗಳಲ್ಲಿ ಹೊಸ ಪದಾರ್ಥ ಹುಟ್ಟಿ ಒಗ್ಗದಿಕೆ ಏಳುತ್ತದೆ. ಇಂಥದ್ದು ಜೀವಾಣುಗಳಿಂದಾಗ ಬಹುದು. ಕೀವುಕಣಗಳು ದೇಹದ ಒಂದು ಭಾಗದಲ್ಲಿ ಬಹಳ ದಿನ ಅಡಗಿದ್ದರೆ,

ಹಲ್ಲಿನಲ್ಲಿ, ಮೂಗಿನಲ್ಲಿ, ಕಿವಿಯೊಳಗೆ ಇಲ್ಲವೇ ತಲೆಬುರುಡೆ ಎಲುಬಿನೊಳಗಿರುವ ಗಾಳಿಗೂಡುಗಳಲ್ಲಿ ಇರಬಹುದು.

ರೋಗ ಕಾರಣವನ್ನು ಕಂಡುಹಿಡಿದು ಅದನ್ನು ಹೋಗಲಾಡಿಸಬೇಕು.

ಅಂಗೈ ಅಂಗಾಲು ನೀರ್ಗುಳ್ಳೆ : ಅಂಗೈಯಲ್ಲಿ, ಅಂಗಾಲಿನಲ್ಲಿ ಸಾಸಿವೆ ಕಾಳನ್ನು ಇಟ್ಟಂತೆ ಕಾಣಿಸುವ ಗುಳ್ಳೆಗಳು, ಅವನ್ನು ಒಡೆದರೆ ನೀರು ಬರುತ್ತದೆ. ಇದರ ಕಾರಣ ಅನೇಕ : ಬೂಷ್ಟು ರೋಗ, ಮಾನಸಿಕ ರೋಗ, ಬಿಸಿಲಿನ ಬೇಗೆ ಮುಂತಾದುವು. ಕಾರಣವನ್ನು ತಿಳಿದು ತಕ್ಕ ಚಿಕಿತ್ಸೆ ಮಾಡಬೇಕು.

ಔಷಧಿ ದದ್ದುಗಳು : ರೋಗಕ್ಕೆ ಉಪಯೋಗಿಸುವ ಔಷಧಗಳು ಚರ್ಮ ದದ್ದುಗಳಿಗೆ ಕಾರಣವಾಗಬಹುದು. ಅತಿಯಾಗಿ ಉಪಯೋಗಿಸಿದರೆ, ಒಗ್ಗದಿಕೆಯಾದಾಗ ಅಥವಾ ಔಷಧದ ವೈಪರೀತ್ಯದಿಂದ ಚರ್ಮ ದದ್ದುಗಳು ಏಳುವುವು. ದದ್ದುಗಳು ವಿವಿಧ ರೂಪ, ಬಣ್ಣದವು. ಬೇರಾವ ರೋಗವನ್ನಾದರೂ ಅವು ಅನುಸರಿಸಬಹುದು. ದೇಹದ ಎರಡೂ ಭಾಗಗಳಲ್ಲಿ ಬರುತ್ತವೆ. ತುರಿಕೆ ಹೆಚ್ಚಾಗಿರುತ್ತದೆ. ದದ್ದುಗಳು ಅತಿ ಕೆಂಪಾಗಿ ಅಂದರೆ, ಬೆಂಕಿಯಂತೆ ಕಾಣುತ್ತವೆ. ಪೆನಿಸಿಲಿನ್, ಆಸ್ಪಿರಿನ್, ಸಲ್ಫೋನೇಮೈಡ್, ನಿದ್ದೆಗುಳಿಗೆಯೇ ಮುಂತಾದ ಅನೇಕ ಔಷಧಗಳು ಮೈಗೆ ಒಗ್ಗದೆ ಚರ್ಮಕ್ಕೆ ತುರಿಕೆಯುಳ್ಳ ದದ್ದುಗಳನ್ನು ಹುಟ್ಟಿಸುತ್ತವೆ. ಕೆಲವರಲ್ಲಿ ಮಚ್ಚೆಯಂತೆ ಕಪ್ಪಾದ ಕಲೆಗಳೂ ಬರುತ್ತವೆ. ಒಟ್ಟಿನಲ್ಲಿ ಅನೇಕ ತರದ ದದ್ದುಗಳನ್ನು ಹುಟ್ಟಿಸಬಹುದು.

ಮದ್ದೇ ಕಾರಣವೆಂದು ಗುರುತಿಸಿದ ಮೇಲೆ ಆ ಮದ್ದನ್ನು ಎಂದಿಗೂ ಕೊಡಲೇಬಾರದು. ಹಾಗೆ ಕೊಟ್ಟರೆ, ಅಪರಕ್ಷಣೀಯ ಪ್ರತಿಕ್ರಿಯೆ ಉಂಟಾಗಿ ರಕ್ತಚಲನೆ ನಿಂತು ಜೀವಕ್ಕೇ ಅಪಾಯವಾಗಬಹುದು. ಹಿಸ್ಟಮೀನ್ ನಿರೋಧಕ ಔಷಧಗಳನ್ನು, ಸ್ಟೀರಾಯ್ಡ್‌ಗಳನ್ನು ಕೂಡಲೇ ಕೊಡಬೇಕು. ಕ್ಯಾಲಮೀನ್ ದ್ರಾವಣ ಹಚ್ಚಬೇಕು.

ಕಿರಣ ಚರ್ಮ : ಬಿಸಿಲು ಹೆಚ್ಚಾಗಿ ಮೈಮೇಲೆ ಬಿದ್ದಾಗ ಇಸಬು ಬರುತ್ತದೆ. ಬಿಸಿಲಿಗೆ ಒಗ್ಗದಂತಾದರೆ, ಕೆಂಪು ತುರುಚೆಗಳೂ, ಗಡ್ಡೆಗಳೂ ಬಂದು ಒಳಚರ್ಮ ನಶಿಸಿ, ಕಲೆಗಳು ಬರಬಹುದು. ಇಂಥ ರೋಗ ಮುಖದ

ಮೇಲೆ ಇಲ್ಲವೇ ಕೈಕಾಲುಗಳ ಮೇಲೆ ಬರುತ್ತದೆ. ಕೆಲವರಲ್ಲಿ ಬಿಳಿಯರಲ್ಲಿ ಏಡಿಗಂತಿ ಏಳುತ್ತದೆ. ಇಂಥ ಏಡಿಗಂತಿಗೆ ಕೊರೆಯುವ ಏಡಿಗಂತಿ ಎಂದು ಹೆಸರು. ಮುಖದ ಮೇಲೆ ಕಣ್ಣಿನ ಪಕ್ಕದಲ್ಲಿ ಗಂಟಾಗಿ ಹುಟ್ಟಿ ಒಡೆದುಣ್ಣಾಗುತ್ತದೆ. ದೇಹವೊಳಗೆ ಕೊರೆಯುತ್ತ ಎಲುಬು ಮಾಂಸಗಳನ್ನು ನಾಶಮಾಡುತ್ತದೆ. ಇದು ದುಂಡಾಗಿರುತ್ತದೆ. ಇಲಿಗಳು ಪದಾರ್ಥಗಳನ್ನು ಕೊರೆದು ನಾಶಮಾಡುವಂತೆ ಈ ಹುಣ್ಣೂ ಊತಕಗಳನ್ನು ತಿಂದುಹಾಕುತ್ತದೆ. ಆದ್ದರಿಂದ ಈ ಏಡಿ ಹುಣ್ಣಿಗೆ ದಂಶಕ ಹುಣ್ಣು ಎಂದು ಕರೆಯುವರು.

ಚಿಕ್ಕದಿರುವಾಗಲೇ ಹುಣ್ಣನ್ನು ಶಸ್ತ್ರಕ್ರಿಯೆಯಿಂದ ಪೂರ್ತಿ ತೆಗೆದು ಹಾಕಬೇಕು. ಕೆಲವರಿಗೆ ಎಕ್ಸ್ ಕಿರಣದಿಂದ ಅನುಕೂಲವಾಗಬಹುದು.

8. ಮೈ ಜಿಡ್ಡು ಗ್ರಂಥಿಗಳ ರೋಗಗಳು

ಮೈ ಜಿಡ್ಡು ಗ್ರಂಥಿಗಳ ವಿಷಯವನ್ನು ಈಗಾಗಲೇ ವಿವರಿಸಿದೆ. ಮೊಡವೆ, ಹಗರು, ಗುಲಾಬಿಕ ಮುಖ ಮತ್ತು ಗಂಟು ಮೂಗು ಇತರ ಜಿಡ್ಡು ಗ್ರಂಥಿ ರೋಗಗಳು.

ಮೊಡವೆಗಳು : ಮೈ ಜಿಡ್ಡು ಗ್ರಂಥಿಗಳ ಕಾರ್ಯಾಚರಣೆ ಹೆಚ್ಚಾಗಿ ಮತ್ತು ಕೆಡುಕಾದಾಗ ಬರುತ್ತವೆ. ಚರ್ಮದಿಂದ ಸುರಿಯುವ ಮೈ ಜಿಡ್ಡು



ಚಿತ್ರ 25. ಮೊಡವೆಗಳು

ಗಟ್ಟಿಯಾಗಿ ಹೆಪ್ಪುಗಟ್ಟುತ್ತದೆ. ಮೈ ಜಿಡ್ಡು ಗ್ರಂಥಿಗಳ ಬಾಯಿ ಮುಚ್ಚಿ ಹೋಗುತ್ತದೆ. ಮೈ ಜಿಡ್ಡು ಹೊರ ಬರಲು ಕಷ್ಟವಾಗಿ ಚಿಕ್ಕ ಕಪ್ಪು ಚುಕ್ಕೆಗಳಂತೆ ಗುಳ್ಳೆಗಳು ಕಾಣಿಸಿಕೊಳ್ಳುತ್ತವೆ. ಮೈ ಜಿಡ್ಡು ಹೀಗೇ ಕೂಡುತ್ತಾ ಬಂದಂತೆ, ಗ್ರಂಥಿ ಹಿಗ್ಗಿ ದಪ್ಪನಾಗುತ್ತದೆ. ಆಗ ದೊಡ್ಡಗುಳ್ಳೆಗಳು ಕಾಣುತ್ತವೆ. ಕೀವು ಕಣಗಳ ಆಕ್ರಮಣದಿಂದ ನೋವು, ಕೀವು ಬರುತ್ತದೆ. ಗ್ರಂಥಿ ನಾಶವಾಗಿ ಕೀವು ಹೊರಬರುತ್ತದೆ. ಕೀವು ಸುರಿದನಂತರ ಕಲೆಯು ಗುಳಿ ನಿಲ್ಲುತ್ತದೆ. ಮೊಡವೆಗಳು ಪ್ರಾಯಕ್ಕೆ ಬರುವ ಗುಳ್ಳೆಗಳೆಂದು ತಿಳಿಯುತ್ತಾರೆ. ಬಹು ಜನರಿಗೆ ಬಂದರೂ ಎಲ್ಲರಿಗೂ ಬರುವುದಿಲ್ಲ. ಕೆಲವರಲ್ಲಿ ಲಿಂಗ ರಸಗಳ ವೈಪರೀತ್ಯ ಇದಕ್ಕೆ ಕಾರಣ.

ಮುಖವನ್ನು ಸಾಬೂನಿನಿಂದ ನಾಲ್ಕಾರು ಸಾರಿ ತೊಳೆಯಬೇಕು. ಗ್ರಂಥಿ ಬಾಯಿ ಮುಚ್ಚಿದ ಮೈಜಿಡ್ಡನ್ನು ಕರಗಿಸಲೂ, ಕೆಟ್ಟ ಜಿಡ್ಡನ್ನು ಸರಿಪಡಿಸಲೂ ಗಂಧಕ ಇರುವ ಮುಲಾಮನ್ನು ಉಪಯೋಗಿಸಬೇಕು. ಅತೀತನೇರಳೆ ಕಿರಣಗಳಿಂದ ಜಿಡ್ಡುಗ್ರಂಥಿ ಕಾರ್ಯವನ್ನು ಸರಿಪಡಿಸಬೇಕು. ಮೈ ಜಿಡ್ಡನ್ನು ಶಸ್ತ್ರದಿಂದಲೂ ಹೊರತೆಗೆಯಬಹುದು. ಮೈ ಜಿಡ್ಡು ಗ್ರಂಥಿಗಳನ್ನು ಒಡೆದು ಸಾಫ್ ಮಾಡುವ ಶಸ್ತ್ರಕ್ರಿಯೆಯಾಗಿ ಚರ್ಮವನ್ನು ಉಜ್ಜಿ ಹಾಕಿದರೆ ಮೊಡವೆಗಳು ಕಡಿಮೆಯಾಗುವುವು. ಸ್ತ್ರೀಲಿಂಗ ರಸವನ್ನು ಕೊಡಬಹುದು. ಟೆಟ್ರಾಸೈಕ್ಲೀನ್ ಜೀವವಿರೋಧಕಗಳನ್ನು ಕೆಲವು ತಿಂಗಳು ಉಪಯೋಗಿಸಿದರೆ ಜಿಡ್ಡು ಚೊಕ್ಕವಾಗಬಹುದು.

ಹಗರು : ಇದರಲ್ಲಿ ತಲೆ ತುರಿಕೆ ಇರುತ್ತದೆ. ಚರ್ಮ ಪುಡಿಪುಡಿಯಾಗಿ ಉದುರುತ್ತದೆ. ಕೂದಲು ಬೀಳುತ್ತವೆ. ಸಣ್ಣ ವಯಸ್ಸಿನಲ್ಲಿಯೇ ತಲೆ ಬೋಳಾಗುತ್ತದೆ. ನೆತ್ತಿಯ ಮೇಲೆ ಮತ್ತು ಕಪಾಳದ ಮೇಲೆ ಕೂದಲು ಬಿದ್ದು ಮುಂಭಾಗದ ತಲೆ ಬೋಳಾಗುತ್ತದೆ. ಹೊರ ಚರ್ಮ ಪುಡಿಪುಡಿಯಾಗುವುದರಿಂದ ಇತರ ರೋಗಾಣುಗಳ ಆಕ್ರಮಣ, ಬೂಷ್ಟು ಹರಡುವಿಕೆ, ಪರಪಿಂಡಿಗಳ ವಲಸೆಯಾಗಿ, ನೋವು, ಕೀವು, ಹೊಲಸು ವಾಸನೆ ಮುಂತಾದವು ಉತ್ಪನ್ನವಾಗುತ್ತವೆ.

ತಲೆಯನ್ನು ಕಾಲಕಾಲಕ್ಕೆ ಜೀವವಿರೋಧಕ, ಸೆಟ್ರಿಮೈಡ್ 0.5% ದ್ರಾವಣಗಳಿಂದ ತೊಳೆಯಬೇಕು. ಗಂಧಕದ ಮುಲಾಮು ಇಲ್ಲವೇ ಲೇಪದ್ರವ ಹಚ್ಚಬೇಕು.

ಗುಲಾಬಿಕ ಮುಖ : ಚರ್ಮದೊಳಗೆ ಮೈ ಜಿಡ್ಡು ನುಗ್ಗಿ ಉರಿತದಿಂದ ಚರ್ಮವನ್ನು ಕೆಂಪೇರಿಸುತ್ತದೆ. ರಕ್ತನಾಳಗಳು ಹೆಚ್ಚುಬೆಳೆದು ಅಗಲವಾಗಿ ವಿಕಾರಗೊಳಿಸುತ್ತವೆ. ಸ್ಯಾಲಿಸಿಲಿಕ್ ಆಮ್ಲ ಮತ್ತು ಗಂಧಕ ಇರುವ ಮುಲಾಮು ಹಚ್ಚಬೇಕು.

ಗಂಟು ಮೂಗು : ಜಿಡ್ಡು ಗ್ರಂಥಿಗಳು ದಪ್ಪನಾಗಿ ಅನೇಕ ಗ್ರಂಥಿಗಳು ಕೂಡಿ ದೊಡ್ಡ ಗಂಟುಕಟ್ಟುತ್ತವೆ. ಇದು ಮೂಗಿನ ಚರ್ಮಕ್ಕೆ ಮೊದಲು ಬರುತ್ತದೆ. ಇದನ್ನು ಸರಿಮಾಡಲು ಶಸ್ತ್ರಕ್ರಿಯೆಯೇ ಆಗಬೇಕು.

9. ಆಜನ್ಮ ಚರ್ಮ ರೋಗಗಳು

ಆಜನ್ಮ ಚರ್ಮ ರೋಗಗಳು ಅನೇಕ. ಸಾಧಾರಣವಾಗಿ ಕಾಣುವ ರೋಗಗಳೆಂದರೆ, ಮೀನ್ರೊಗಲು, ಮೀನಿನ ಚರ್ಮದ ಮೇಲೆ ಇರುವಂತೆ, ಮಾನವ ಚರ್ಮದ ಮೇಲೆ ಮೂಲೆಗಳುಳ್ಳ ಪರೆಗಳು ಉದುರುತ್ತಿರುವಂತೆ ಕಾಣುತ್ತವೆ. ಚರ್ಮ ಒಣಕಲಾಗಿ ಒರಟಾಗಿರುತ್ತದೆ. ಚಳಿಗಾಲದಲ್ಲಿ, ಒಡೆದು ಬಿರಿಯುತ್ತದೆ.



ಚಿತ್ರ 26. ಮೀನ್ರೊಗಲು

ದೇಹದ ಎಲ್ಲಾ ಭಾಗಗಳಲ್ಲೂ ಚರ್ಮ ಹೀಗೆ ಬದಲಾಗಿದ್ದರೂ, ಮುಖ, ಕೈ ಮತ್ತು ಕಾಲುಗಳಲ್ಲಿ ವಿಪರೀತವಾಗಿರುತ್ತದೆ. ಮಡಿಚುವ ಭಾಗದಲ್ಲಿ ಮಾತ್ರ ಕೆಲವರಿಗೆ ಚರ್ಮ ಬದಲಾಗಿರುತ್ತದೆ. ಇಂಥಾ ರೋಗ ಉಲ್ಬಣವಾದಾಗ

ಮಗು ಹುಟ್ಟುವಾಗಲೇ ಸಾಯುತ್ತದೆ. ರೋಗ ಸೌಮ್ಯವಾದಾಗ ಒಣಚರ್ಮ ವೆಂದೂ, ಉಲ್ಬಣವಾದಾಗ ಮೊಸಳೆ ಚರ್ಮವೆಂದೂ ಕರೆಯುವರು. ಈ ರೋಗ ತಂದೆ ತಾಯಿಗಳಿಗೆ ಇಲ್ಲವೇ ಇತರ ಬಳಗದವರಲ್ಲಿದ್ದರೆ ಬರುತ್ತದೆ. ಅಂದರೆ ಜನಿಕಗಳ ವಿಕಾರದಿಂದುಂಟಾಗುತ್ತದೆ.

ಚರ್ಮವನ್ನು ಮೃದುಮಾಡುವ ಪ್ಯಾರಫಿನ್ ಲೇಪನ ಅಥವಾ ನೀರುಳ್ಳ ಮುಲಾಮು ಹಚ್ಚಬೇಕು. ಎ ಜೀವಸತ್ತ್ವವನ್ನು ಕೊಟ್ಟರೆ ಹೊರ ಚರ್ಮ ಮೃದುವಾಗಿ ಬೆಳೆಯಬಹುದು.

ಕೆಲವರಲ್ಲಿ ಅಂಗೈ, ಅಂಗಾಲು ದಪ್ಪನಾಗಿ ಒಡೆಯುತ್ತದೆ. ಇನ್ನೂ ಕೆಲವರಲ್ಲಿ ಹಲ್ಲು ಸರಿಯಾಗಿ ಬೆಳೆಯುವುದಿಲ್ಲ, ಉಗುರು ಬೆಳೆಯದೆ ಬಿದ್ದು ಬಿಡುವುದು. ಬುದ್ಧಿಶಕ್ತಿ ಕಡಿಮೆ ಇರಬಹುದು. ಕೆಲವರಲ್ಲಿ ಹೊರಚರ್ಮ ಬಣ್ಣದ ಕಲೆಗಳಿಂದ ಕೂಡಿರಬಹುದು. ಇಂಥ ಬಣ್ಣಗಟ್ಟಿದ ಒಣ ಚರ್ಮ ವಿರುವವರ ಕಣ್ಣು ಸಹಜವಾಗಿರುವುದಿಲ್ಲ. ಸೂರ್ಯನ ಬೆಳಕನ್ನೂ ತಾಪ ವನ್ನೂ ತಡೆಯಲಾರರು; ಕಣ್ಣೀರು ಬರುತ್ತದೆ. ಬಣ್ಣ ಉಳ್ಳ ಕಲೆ ಗಳಲ್ಲಿ ಹುಣ್ಣು ಆದರೆ, ಏಡಿಗಂತಿ ಬೆಳೆಯಬಹುದು. ಇಂಥವರನ್ನು ಬೆಳಕಿದ್ದೆಡೆ ಕೆಲಸಕ್ಕೆ ಸೇರಿಸಬಾರದು. ಹಗಲೇ ಅವರಿಗೆ ಶತ್ರು. ಡಾರಿಯರನ ರೋಗವಿದ್ದರೆ, ಚರ್ಮದ ಮೇಲೆ ಗಟ್ಟಿಗುಳ್ಳೆಗಳು ಏಳುತ್ತವೆ.

ಇನ್ನು ಕೆಲವು ಆಜನ್ಮ ರೋಗಗಳಲ್ಲಿ ಚರ್ಮ ಕರಗಿ ನೀರ್ಗುಳ್ಳೆಗಳೇಳು ತ್ತವೆ. ಇದಕ್ಕೆ ಅಳಿದ ಹೊರಚರ್ಮದ ಬೊಬ್ಬೆ ಎಂದು ಕರೆಯುವರು. ಕಾರಣವಿಲ್ಲದೆ ಮಗುವಿನ ಚರ್ಮದ ಮೊಣಕಾಲು, ಮೊಣಕೈಗಳಲ್ಲಿ ಬೊಬ್ಬೆ ಗಳು ಏಳುತ್ತವೆ. ರೋಗ ಉಲ್ಬಣವಾಗಿದ್ದರೆ ಮಗು ಸತ್ತೇ ಹುಟ್ಟು ತ್ತದೆ. ಹುಟ್ಟಿದ ಮೇಲೆ ಅನೇಕ ಬೊಬ್ಬೆಗಳೆದ್ದು ಎಲುಬು ಮತ್ತು ಕೀಲುಗಳು ಸರಿಯಾಗಿ ಬೆಳೆಯದೆ ಕೈಕಾಲುಗಳು ವಿಕಾರವಾಗುತ್ತವೆ. ಇದೊಂದು ಭಯಂಕರ ರೋಗ. ಮಗುವನ್ನು ಮೃದು ಹಾಸಿಗೆಯಲ್ಲಿ ಬೆಳೆಸಬೇಕು. ಜನಿಕಗಳಿಂದ ಬಂದ ರೋಗವಾದ್ದರಿಂದ, ಈ ಆನುವಂಶಿಕ ರೋಗ ಬಾರ ದಂತೆ ಮಾಡಲು ಸಾಧ್ಯವಿಲ್ಲ. ಜನಿಕಗಳನ್ನು ಸರಿಪಡಿಸುವ ವಿಧಾನವನ್ನು ವೈದ್ಯರು ಕಂಡುಹಿಡಿಯಲು ಯತ್ನಿಸುತ್ತಿದ್ದಾರೆ.

ತೊನ್ನು ಮತ್ತು ಬಿಳಿಚರ್ಮ

ಇದು ಆಜನ್ಮ ರೋಗವಿರಬಹುದು. ಜನಿಕಗಳ ಮೂಲಕ ಮಕ್ಕಳಿಗೆ ಮೊಮ್ಮಕ್ಕಳಿಗೆ ಬರುತ್ತದೆ. ಬಣ್ಣ ಇಲ್ಲದ ಚರ್ಮದ ಜೊತೆ, ಬೆಕ್ಕಿನ ಕಣ್ಣು, ಬೆಳ್ಳಿ ಕೂದಲು ಮುಂತಾದ ಬಣ್ಣ ವಿಕಾರಗಳಿರಬಹುದು. ಚರ್ಮದ ಬಣ್ಣ ಮೆಲನಿನ್‌ನಿಂದ ಬರುತ್ತದೆ. ಇಂಥ ರೋಗಿಗಳ ಚರ್ಮದಲ್ಲಿ ಆ ಮೆಲನಿನ್ ತಯಾರಿಕೆ ಕುಂದಿರುತ್ತದೆ. ಚರ್ಮದ ಮೇಲೆ ಬಿಳಿಯ ಕಲೆಗಳು ಹುಟ್ಟಿ ದೊಡ್ಡವಾಗುವುವು. ಕೆಲವರಲ್ಲಿ ಇಂಥ ರೋಗ ಅತಿ ಉಗ್ರವಾಗಿದ್ದರೆ ದೇಹದ ಚರ್ಮ, ಕೂದಲು ಮತ್ತು ಕಣ್ಣುಗಳಲ್ಲೂ ಎಂದಿನ ಬಣ್ಣವಿರುವುದಿಲ್ಲ. ಅಂಥ ರೋಗವನ್ನು ಬಿಳಿಚತನ ಎಂದು ಕರೆಯಬಹುದು. ಇಂಥ ರೋಗಿಗಳು ಬಿಸಿಲನ್ನು ತಾಳಲಾರರು. ಹುಟ್ಟುವಾಗಲೇ ಇಲ್ಲವೇ ಕೆಲವು ವರ್ಷಗಳಲ್ಲಿಯೇ ಬಿಳಿಕಲೆಗಳು ಕಾಣಿಸಿಕೊಂಡು ಹೆಚ್ಚಾಗದಿದ್ದರೆ, ಅವಕ್ಕೆ ಕಾರಣ ಜನಿಕಗಳೆಂದು ತಿಳಿಯಬೇಕು.

ಹುಟ್ಟಿದ ಎಷ್ಟೋ ವರ್ಷಗಳನಂತರ, ಬಿಳಿಚರ್ಮ ಕಲೆಗಳು ಹುಟ್ಟಿ ಹೆಚ್ಚು ಹೆಚ್ಚಾಗಿ ದೊಡ್ಡವಾದರೆ, ಅದಕ್ಕೆ ಬೇರೆ ಕಾರಣವಿರಬಹುದು. ರಕ್ತ ಕೊರೆ, ಕ್ರಿಮಿ ಕೀಟ ರೋಗ, ಇಸಬು, ಗುರಾಣಿಕ ಗ್ರಂಥಿ ರೋಗ ಮುಂತಾದ ಅನೇಕ ರೋಗಗಳ ಒಂದು ಲಕ್ಷಣ ತೊನ್ನು. ಮೆಲನಿನ್ ತಯಾರಿಸಲು ಬೇಕಾದ ಆಹಾರ ವಸ್ತು ಟೈರೋಸಿನ್‌ಗೆ ದೇಹದಲ್ಲಿ ಅಭಾವವಾದರೆ, ಬಣ್ಣ ಹೋಗುತ್ತದೆ. ಉಪದಂಶ, ಕ್ಷಯರೋಗಗಳಲ್ಲೂ ಹೀಗೇ ಬಣ್ಣ ಹೋಗುತ್ತದೆ.

ಆಜನ್ಮ ರೋಗವಾದರೂ ರೋಗ ಗುಣಮಾಡುವ ಭರವಸೆ ಉಂಟು. ಎಲ್ಲರಿಗೂ ಪೂರ್ತಿ ಅನುಕೂಲವಾಗದೆ ಹೋದರೂ, ಶೇಕಡ 50 ರಿಂದ 60 ರ ವರೆಗೂ ಗುಣಪಡಿಸಬಹುದು. ಸೊರಾಲೆನ್ ರಸಾಯನಿಕ ಗುಳಿಗೆ, ಮುಲಾಮು, ಲೇಪದ್ರವ ಇವುಗಳಿಂದ ಅನುಕೂಲ ಪ್ರತಿಕ್ರಿಯೆ ಬರುತ್ತದೆ. ಬಣ್ಣ ಬರಲು ಅತೀತನೇರಳೆಯ ಕಿರಣಗಳ ಶಾಖವನ್ನೂ ಕೊಡಬೇಕು. ಬಾವಾಚಿ ಬೀಜದ ಎಣ್ಣೆಯಲ್ಲಿ ಸೊರಾಲೆನ್ ರಸಾಯನಿಕವಿರುತ್ತದೆ. ಬಣ್ಣ ಬರಲು 3 ರಿಂದ 9 ತಿಂಗಳ ಚಿಕಿತ್ಸೆ ಬೇಕಾಗುತ್ತದೆ.

ತೊನ್ನು ಅಂಟು ರೋಗವಲ್ಲ. ಕುಷ್ಠ ರೋಗವಲ್ಲ. ಅಸಹ್ಯ ಪಡಬೇಕಾದ ಕಾರಣವಿಲ್ಲ. ಬಿಳಿಚರ್ಮದಲ್ಲಿ ಸ್ಪರ್ಶ ಜ್ಞಾನ ನಾಶವಾಗಿರುವುದಿಲ್ಲ. ಬುದ್ಧಿ ಶಕ್ತಿ ಕಡಿಮೆ ಇರುವುದಿಲ್ಲ. ಆದರೆ ಮಕ್ಕಳಿಗೂ ತೊನ್ನು ಬರಬಹುದು.

ಮಚ್ಚೆಗಳು

ಆಜನ್ಮವಾಗಿ ಅನೇಕ ತರಹದ ಮಚ್ಚೆಗಳು ಬರುತ್ತವೆ. ಅವು ಮನುಷ್ಯನನ್ನು ಗುರುತಿಸಲು ಅನುಕೂಲ. ಬಣ್ಣದಿಂದ ಕೂಡಿದವು ಮತ್ತು ರಕ್ತನಾಳಗಳಿಂದ ಕೂಡಿದವೆಂದು ಎರಡು ವಿಧಗಳಿವೆ.

ಬಣ್ಣ ಮಚ್ಚೆಗಳು ಮೆಲನಿನ್ ತಯಾರಕ ಕಣಗಳಿರುವ ಅಥವಾ ಮೆಲನಿನ್ ಇರುವ ಕಲೆಗಳು. ನೀಲಿ ಬಣ್ಣದ ಮಚ್ಚೆಗಳು ದಪ್ಪನಾಗಿಯೂ ಕೂದಲುಳ್ಳವೂ ಆಗಿರಬಹುದು. ಇಂಥ ಮಚ್ಚೆಗಳಲ್ಲಿ, ಮೆಲನಿನ್ ಒಳ ಚರ್ಮದಲ್ಲಿರುತ್ತದೆ. ಬೂದು ಇಲ್ಲವೇ ಕಪ್ಪು ಬಣ್ಣದ ಮಚ್ಚೆಗಳು ಹೊರ ಚರ್ಮದಲ್ಲಿ ಮೆಲನಿನ್ ತೋರಿಸುತ್ತವೆ. ಕೆಲವು ಮಚ್ಚೆಗಳಲ್ಲಿ ಮೆಲನಿನ್ ತಯಾರಿಸುವ ಕಣಗಳು ಹೊರ ಚರ್ಮದಿಂದ ಒಳ ಚರ್ಮಕ್ಕೆ ಉದುರುತ್ತಿರುವಂತೆ ಕಾಣುವುವು. ಇಂಥ ಮಚ್ಚೆಗಳನ್ನು ಜಂಟಿಸಿಕ ಮಚ್ಚೆಗಳೆಂದು ಕರೆಯುತ್ತಾರೆ. ಇವು ಏಡಿಗಂತಿಗಳಾಗಿ ಪ್ರಾಣಕ್ಕೆ ಅಪಾಯ ತರುತ್ತವೆ.

ರಕ್ತನಾಳ ಮಚ್ಚೆಗಳು ಲೋಮನಾಳಗಳ ಅತಿ ಬೆಳವಣಿಗೆಯಿಂದ, ಹುಟ್ಟಿದ ಕೆಲವು ದಿನಗಳಲ್ಲಿ ಕೆಂಪು ಮಚ್ಚೆಗಳಂತೆ ಕಾಣುವುವು. ಕಗ್ಗೆಂಪು ಬಣ್ಣದ ಮಚ್ಚೆಗಳ ಕಲೆಗಳು ದೊಡ್ಡವಾಗಿರಬಹುದು. ಅರ್ಧ ಮುಖ ಇಲ್ಲವೇ ಅರ್ಧ ದೇಹವನ್ನೇ ಆಕ್ರಮಿಸಿರಬಹುದು. ಮಗು ಬೆಳೆದಂತೆ ಅವು ದೊಡ್ಡವಾಗುತ್ತವೆ. ಅಪರೂಪವಾಗಿ ತಾವಾಗಿ ಕುಗ್ಗಿ ಮಾಯುತ್ತವೆ. ಇವು ಲೋಮ ರಕ್ತನಾಳ ಮಚ್ಚೆಗಳು. ದೊಡ್ಡ ರಕ್ತನಾಳದ ಬೆಳವಣಿಗೆಯಿಂದ ಹುಟ್ಟುವ ಮಚ್ಚೆ, ಚರ್ಮದ ಮೇಲೆ ಉಬ್ಬಿದ ರಕ್ತ ಮಚ್ಚೆ ಕೆಂಪಾಗಿರುತ್ತದೆ. ಗಾಯವಾದರೆ, ರಕ್ತ ಸುರಿಯುತ್ತದೆ, ಮೆತ್ತಗಿರುತ್ತದೆ. ಇವು ಅನೇಕ ವರ್ಷದವರೆಗೂ ಬೆಳೆಯುವುವು. ಅನಂತರ ಕುಗ್ಗಿ ತಾವಾಗಿಯೇ ಮಾಯವಾಗಬಹುದು. ಇಂಥವು ತುಟಿಯ ಮೇಲೆ ಇದ್ದರೆ ಹಾಲುಣಿಸಲು ಕಷ್ಟ. ಇಂಥ ಕೂಸುಗಳು ಬದುಕುವುದಿಲ್ಲ.

ಬೋಳು ತಲೆ

ರೋಮನಾಶದಿಂದ ತಲೆ ಬೋಳಾಗುತ್ತದೆ. ವೃತ್ತಗಳಂತೆ ಬೋಳು ತಲೆಗಳು ಕಾಣುವ ರೋಗಕ್ಕೆ ಮಚ್ಚೆ ಪಟ್ಟತಲೆ ಎಂದು ಕರೆಯುವರು. ತಲೆಯ ಮೇಲೆ ಬೋಳು ಮಚ್ಚೆಗಳು ಬರುವುವಲ್ಲದೆ, ಇತರ ರೋಮ ಉಳ್ಳ ಸ್ಥಳಗಳಲ್ಲಿಯೂ ಬೋಳು ಮಚ್ಚೆಗಳು ಬರುವುವು. ಎಲ್ಲಾ ವಯಸ್ಕರಲ್ಲಿ ಇದು ಬರುವುದುಂಟು. ಸಾಧಾರಣವಾಗಿ, 10 ರಿಂದ 35 ವಯಸ್ಸಿನಲ್ಲಿರುವ ಸ್ತ್ರೀ ಪುರುಷರಲ್ಲಿ ಬರುತ್ತದೆ. ಇದಕ್ಕೆ ಕಾರಣಗಳು ಖಚಿತವಾಗಿ ಗೊತ್ತಿಲ್ಲ. ಕೆಲವು ಮನೆತನಗಳಲ್ಲಿ ಈ ರೋಗ ಬರುತ್ತದೆ. ಮನೋವ್ಯಾಕುಲತೆ, ಕಾರಣವಿಲ್ಲದೆ ನೋವು, ತುರಿ ಇಲ್ಲದೆ ಬರುವ ರೋಗವಿದು. 6 ರಿಂದ 9 ತಿಂಗಳಲ್ಲಿ ತಾನಾಗಿಯೇ ಕೂದಲು ಬೆಳೆಯಬಹುದು. ಚಿಕಿತ್ಸೆ ತೃಪ್ತಿಕರ ವಲ್ಲ.

10. ಆಹಾರ, ಜೀವಸತ್ತ್ವಗಳ ಅಭಾವದ ಚರ್ಮ ರೋಗಗಳು

ಆಹಾರದಲ್ಲಿ ಪ್ರೋಟೀನ್ ಕಡಿಮೆ ಇದ್ದರೆ ಮಕ್ಕಳಿಗೆ ರೋಗ ಬರುತ್ತದೆ. ಬೆಳವಣಿಗೆ ಕುಂದುತ್ತದೆ. ಕೆಂಪು, ಕಪ್ಪು ಮಿಶ್ರಿತ ಕೆಂಪು ಮತ್ತು ಕಪ್ಪು ತುದಿಯಿಂದ ಬುಡದವರೆಗೆ ಬದಲಿಸಿದ ಕೂದಲಿನ ಗುಚ್ಛ ಒಂದು ನಿಶಾನೆಯಂತಿರುತ್ತದೆ. ಚರ್ಮ ಒಣಗುತ್ತದೆ. ಬಣ್ಣ ಬದಲಿಸುತ್ತದೆ. ಹಾಸುಕಲ್ಲಿನಂತೆ ತರಾತೆರನ ಬಣ್ಣ ತಾಳುತ್ತದೆ. ಇದಕ್ಕೆ ಕ್ವಾಷಿಯಾರ್ಕರ್ (ಮಾರಿಕಾಕುಪಾಲನೆ) ಎಂದು ಕರೆಯುತ್ತಾರೆ.

ಎ ಜೀವಸತ್ತ್ವ ಕಡಿಮೆಯಾದರೆ ಚರ್ಮ ಒಣಗುತ್ತದೆ. ರಾತ್ರಿ ಕಣ್ಣು ಕುರುಡಾಗುತ್ತದೆ. ಚರ್ಮದ ಮೇಲೆ ಮುಳ್ಳಿನಂತೆ ಗುಳ್ಳೆಗಳೆದ್ದು ಮುಳ್ಳು ಚರ್ಮ ಅಥವಾ ಕಪ್ಪೆ ಚರ್ಮವೆನಿಸುತ್ತದೆ.

ಬಿ ಜೀವಸತ್ವ ಕೊರೆ

ಈ ಜೀವಸತ್ವ್ತ ಕಡಿಮೆಯಾದರೆ ಕಟವಾಯಿಗಳಲ್ಲಿ ಹುಣ್ಣಾಗಿರುತ್ತದೆ. ತುಟಿ ಉರಿತ ಬರುತ್ತದೆ. ಮೂಗಿನ ಸುತ್ತ ಚರ್ಮ ಸುಲಿಯುತ್ತದೆ. ನಾಲಗೆ ಕೆಂಪಾಗುತ್ತದೆ. ನಿಕೋಟಿನಿಕಾಮ್ಲ ಕಡಿಮೆಯಾದರೆ, ಕಾರ್ಡೋಗಲು ಎಂಬ ಚರ್ಮರೋಗ ಬರುತ್ತದೆ. ಗಾಳಿ ಬಿಸಿಲಿಗೆ ತಾಕುವ ಚರ್ಮ ಕಪ್ಪಾಗುತ್ತದೆ. ಇಸಬು ಬರುತ್ತದೆ. ಪಚನ ಶಕ್ತಿ ಕುಂದಿ ಭೇದಿಯಾಗುತ್ತದೆ. ಮಿದುಳಿನ ಶಕ್ತಿ ಕಡಿಮೆಯಾಗಿ ಮನೋವಿಕಾರವಾಗುತ್ತದೆ. ಅನ್ಯೂರಿನ್ ಜೀವಸತ್ತ್ವ ಕಡಿಮೆಯಾದಾಗ ನರ ಉರಿಯಿಂದ ಚರ್ಮ ಬೆಂಡಾಗುವುದು. ಕಾಲುಗಳಲ್ಲಿ ನೀರು ತುಂಬಿ ಊದಬಹುದು. ಸಿ ಜೀವಸತ್ತ್ವ ಕಡಿಮೆಯಾದರೆ ಸ್ಕರ್ವಿ ಎಂಬ ರೋಗದಿಂದ ಚರ್ಮದೊಳಗೆ ರಕ್ತ ಸ್ರಾವವಾಗುತ್ತದೆ.

11. ಉಳಿದ ಚರ್ಮರೋಗಗಳು

ಗುರುಳಿಕ

ಮುನ್ಸೂಚನೆ ಏನೂ ತಿಳಿಯದೆ, ಚರ್ಮದ ನೋವು ತುರಿ ಇಲ್ಲದೆ, ಉರಿತವಿಲ್ಲದೆ, ಅಂದರೆ ಯಾವ ಕಾರಣವೂ ತಿಳಿಯದೆ ದಿಢೀರನೆ ಬೊಬ್ಬೆಗಳು ಚರ್ಮದ ಮೇಲೆ ವಯಸ್ಸಾದವರಲ್ಲಿ ಹುಟ್ಟುತ್ತವೆ. ಇದು ವಯಸ್ಸಿ



ಚಿತ್ರ 27. ಗುರುಳಿಕ ಬೊಬ್ಬೆಗಳು

ಗಾಗಿ ಬಂದ ರೋಗವೋ.ಪಚನ ಶಕ್ತಿ ಕಡಿಮೆಯಾಗಿ ಇಲ್ಲವೇ ಪಚನ ವಿಪರೀತ ದಿಂದ ವಿಷ ಹುಟ್ಟಿ ಚರ್ಮ ಕರಗಿ ನೀರುಗ್ಗುಳ್ಳೆಗಳಾಗುವುದೋ ತಿಳಿಯದು. ಬಿಸಿ ನೀರನ್ನು ಚರ್ಮದ ಮೇಲೆ ಹಾಕಿದರೆ ಬೊಬ್ಬೆಗಳು ಹೇಗೆ ಬರುವುವೋ ಹಾಗೆ ಕಾರಣವಿಲ್ಲದೆ ಬರುತ್ತವೆ. ತುಟಿ, ತಲೆ, ಮೊಣಕೈ ಇವುಗಳ ಮೇಲೆ ಮೊದಮೊದಲು ಕಂಡು, ಅನಂತರ ದೇಹದ ಎಲ್ಲೆಡೆಗಳಲ್ಲಿಯೂ ಏಳುತ್ತವೆ. ಇದು ನಿಜವಾಗಿಯೂ ಮರಣಕ್ಕೆ ಕಾರಣ. ಆದರೆ ಸರಿಯಾದ ಚಿಕಿತ್ಸೆಯನ್ನು ಬೇಗನೆ ಪ್ರಾರಂಭಿಸಿ ಕೊಡುತ್ತಾ ಹೋದರೆ ಪ್ರಾಣವನ್ನು ಬಹಳ ವರ್ಷ ಉಳಿಸಬಹುದು. ಇಂಥ ಚಿಕಿತ್ಸೆಗೆ ಬೇಕಾದವು ಸ್ಟೀರಾಯ್ಡ್ ಔಷಧಗಳು.

ಏಡಿಗಂತಿ

ಚರ್ಮದ ಮೇಲೆ ಹುಟ್ಟುವ ಹುಣ್ಣು ಏಡಿಗಂತಿಯಿಂದಾಗಿರ ಬಹುದು. ಮುಖ, ತುಟಿ, ಬೆರಳು, ಕೈಕಾಲು ಮತ್ತು ಲಿಂಗ ಇವು ಸಾಧಾರಣ ವಾಗಿ ಏಡಿಗಂತಿ ಏಳುವ ಸ್ಥಳಗಳು. ಹೀಗೆ ದೇಹದ ಎಲ್ಲೆಡೆಯಲ್ಲಿ ಇರಬಹುದು.

ಯಾವುದೋ ಒಂದು ವಸ್ತುವಿನ, ಇಲ್ಲವೇ ಬಿಸಿಲಿನ ಕೆರಳಿಕೆ ಇರುತ್ತದೆ.

ಸಾಧಾರಣವಾಗಿ 45 ವರ್ಷದನಂತರ ಒಂದು ಸಣ್ಣ ಗಂಟು ಹುಟ್ಟಿ ಬೇಗಬೇಗ ಬೆಳೆಯುತ್ತದೆ. ಚರ್ಮದಲ್ಲಿ ಬಿರಿದು ಹುಣ್ಣಾಗುತ್ತದೆ. ಈ ಹುಣ್ಣಿನ ಅಂಚು ಎತ್ತರವಾಗಿ ಒಳಕ್ಕೆ ಬಾಗಿಕೊಂಡಿರುತ್ತದೆ. ಹೊರಚರ್ಮದ ವರೆಯಲ್ಲಿರುವ ಕಣಗಳ ಮಿತಿ ಇಲ್ಲದ ಬೆಳವಣಿಗೆಯೇ ಇದಕ್ಕೆ ಕಾರಣ. ವಿಕಾರ ವಾಗಿ ಬೆಳೆಯುತ್ತಿರುವ ಈ ಜೀವಕಣಗಳು ದುಗ್ಧರಸನಾಳಗಳಲ್ಲಿ ಚಲಿಸಿ ದೇಹದ ಇತರ ಅಂಗಗಳಲ್ಲೂ ಇದೇ ತೆರನ ಗಂತಿಗಳನ್ನು ಬೆಳಸುತ್ತವೆ. ಇದ ರಿಂದ ಊತಕಗಳು ನಾಶವಾಗುತ್ತವೆ. ಕೊನೆಗೆ ಇದು ಮರಣಕ್ಕೆ ಕಾರಣ ವಾಗುವುದು.

ಚಿಕ್ಕದಾಗಿರುವಾಗ ಇತರ ಅಂಗಗಳಿಗೆ ಹರಡದೆ ಇದ್ದಾಗ, ಶಸ್ತ್ರ ಕ್ರಿಯೆಯಿಂದ ಪೂರ್ತಿ ಗಂತಿಯನ್ನು ಬುಡಮಟ್ಟ ತೆಗೆದುಹಾಕಿಬಿಡಬೇಕು. ಅನಂತರ ಆಳವಾದ ಎಕ್ಸ್ ಕಿರಣ ಅಥವಾ ವಿಕಿರಣತೆಯಿಂದ ಚಿಕಿತ್ಸೆ ಮಾಡ ಬೇಕು.

ಸಿಪ್ಪೆಸುಲಿವ ಚರ್ಮ ಉರಿತ : ಮೈಯಲ್ಲೆಲ್ಲ ಚರ್ಮ ಉರಿತದಿಂದ ಪೊರೆಪೊರೆಯಾಗಿ ಹೊರಬೀಳುತ್ತದೆ. ಪಾದದ ಪೂರ್ತಿ ಚರ್ಮ ಒಂದೇ ಹಕ್ಕಳೆಯಾಗಿ ಪಾದರಕ್ಷೆಯಾಕಾರವಾಗಿ ಹೊರ ಬರುತ್ತದೆ. ಛಳಿ ತಾಳದೆ, ಜ್ವರ ಮತ್ತು ನೀರು ಸುರಿಯುತ್ತಿರುವ ಚರ್ಮದಿಂದ ನಡುಗುತ್ತಾ ರೋಗದಿಂದ ಅತಿಯಾಗಿ ಬಳಲುತ್ತಾರೆ. ತಾಳಲಾರದಷ್ಟು ತುರಿಕೆ ಬರುತ್ತದೆ. ಅಶಕ್ತತೆಯಿಂದ ರೋಗಿ ಸೊರಗುತ್ತಾನೆ. ಇಂಥಾ ರೋಗಕ್ಕೆ ಅನೇಕ ಕಾರಣಗಳುಂಟು. ಇದು ಎಲ್ಲಾ ತರದ ಇಸಬುಗಳ ಕೊನೆಯ ಹಂತ. ರೋಗಾಣುಗಳ ರೋಗ ವಿಪರೀತವಾದಾಗ ಇದು ಬರುತ್ತದೆ. ಇದು ದುಗ್ಧರಸ ಅಥವಾ ರಕ್ತದ ಏಡಿಗಂತಿಗಳಿಂದಲೂ ಬರಬಹುದು. ಕೆಂಗಲೆಸುಂಡಿನ ಒಂದು ಲಕ್ಷಣವೂ ಆಗಬಹುದು. ಕಾರಣ ಏನೇ ಇರಲಿ ಇದು ಜೀವಕ್ಕೇ ಅಪಾಯ. ಕೂಡಲೇ ಹಾಸಿಗೆಯಲ್ಲಿ ಮಲಗಿಸಿ, ವಿಶ್ರಾಂತಿ ಕೊಟ್ಟು, ಇಲ್ಲವೇ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ಮಾಡಿಸಬೇಕು. ಚಿಕಿತ್ಸೆ ಕಠಿಣ, ದೀರ್ಘ.

ಕೆಂಗಲೆಸುಂಡು : ಮೈಯಲ್ಲಿ ಕೆಲವೆಡೆ ಮಾತ್ರ ಅಲ್ಲಲ್ಲಿ ಪುಡಿಪುಡಿಯಾಗಿ ಉದುರುವ ಚರ್ಮ ರೋಗವಿದು. ಇದು ಸಾಮಾನ್ಯವಾಗಿ ಎಲ್ಲಾ ಜಾತಿ, ಜನಾಂಗ ಮತ್ತು ವಂಶಗಳಲ್ಲೂ ಕಂಡುಬರುವ ರೋಗ. ಆನುವಂಶಿಕವೂ ಹೌದು. ಮೊದಲು ಮೊಣಕೈ, ಮೊಣಕಾಲು ಮತ್ತು ತಲೆಯ ಮೇಲೆ ಕಾಣಿಸಿಕೊಳ್ಳುತ್ತದೆ. ಮೊದಲು ಕೆಂಪು ಕಲೆ ಏಳುತ್ತದೆ. ಅನಂತರ ಪುಡಿಪುಡಿಯಾಗಿ ಉದುರುವ ಚರ್ಮ ಕಲೆಗಟ್ಟುತ್ತದೆ. ಪುಡಿ ಬೆಳ್ಳಗೆ ಹಿಟ್ಟಿನಂತೆ ಇರುತ್ತದೆ. ಕಲೆಯ ಮೇಲೆ ಗೀರಿದರೆ ಸಾವಿರಾರು ಬಿಳಿ ಪುಡಿಕಣಗಳು ಬೆಳ್ಳಿಯಂತೆ ಹೊಳೆಯುತ್ತಾ ಹೊರ ಬೀಳುತ್ತವೆ. ಇದು ಅಂಟು ರೋಗವಲ್ಲ. ಕುಷ್ಠ ರೋಗಕ್ಕೂ ಇದಕ್ಕೂ ಬಹು ದೂರ. ಹೊರಚರ್ಮದ ಜೀವಕಣಗಳು ಅತಿ ವೇಗದಿಂದ ಬೆಳೆಯುವುದೇ ಇದರ ವಿಶಿಷ್ಟ ಲಕ್ಷಣ. ರೋಗ ತೀವ್ರವಾದಲ್ಲಿ ಕೀಲುಗಳ ಬಾವು, ನೋವು ಬರುತ್ತವೆ.

ಚರ್ಮದ ಸಿಪ್ಪೆಸುಲಿಸುವ ಸ್ಯಾಲಿಸಿಲಿಕ್ ಆಮ್ಲ ಅಥವಾ ಸಿಗ್ನೋಲಿನ್ ಮದ್ದಿರುವ ಮುಲಾಮನ್ನು ಹಚ್ಚಬೇಕು. ಸ್ಟೀರಾಯ್ಡ್ ಇರುವ ಮುಲಾಮು ಕೂಡ ಅನುಕೂಲಕರವಾಗಬಹುದು. ಮೆತೊಟ್ರೆಕ್ಸೇಟ್ ಔಷಧ ಸೇವಿಸಿದರೆ ರೋಗದ ಗತಿಯನ್ನು ತಡೆದು ಗುಣಪಡಿಸಬಹುದು. ಪೂರ್ಣ ಗುಣವಾಗುವುದು ಅಸಾಧ್ಯ.

ಪಾರಿಭಾಷಿಕ ಪದಕೋಶ

ಅಂಟುಗಂತಿ gumma : ಉಪದಂಶ ಮೇಹರೋಗದಲ್ಲಿ ಮೂರನೆಯ ಹಂತದಲ್ಲಿ ವಿಶಿಷ್ಟವಾಗಿ ಏಳುವ, ಅಂಟಂಟಾದ ರಬ್ಬರಂತೆ ಮೆತ್ತಗಿರುವ ಗಂತಿ.

ಅಂಟುತುರಿ impetigo contagiosum

ಅಂಟುಪಟ್ಟಿ patch

ಅಂಟುಪದಂಶ bejel : ಯೂಫ್ರೆಟೀಸ್ ಕಣಿವೆಗಳಲ್ಲಿನ ಅರಬ್ಬರಲ್ಲಿ, ವಿಶೇಷವಾಗಿ ಮಕ್ಕಳಲ್ಲಿ, ಮೇಹರೋಗವಲ್ಲದ. ಒಳನಾಡಿನ ಒಂದು ಬಗೆಯ ಉಪದಂಶ ರೋಗ.

ಅಂಟುವ ಮುಲುಗಂತಿ molluscum contagiosum

ಅಂಡನಾಳುರಿತ salpingitis

ಅತೀತನೇರಳೆ ultraviolet

ಅಪರಕ್ಷಣೀಯ anaphylactic : 10 ದಿನಗಳಿಗೂ ಕಡಿಮೆ ಇಲ್ಲದಂತೆ ಬಿಡುವು ಕೊಟ್ಟು ಎರಡು ಬಾರಿ, ಕುದುರೆಯ ರಸಿಕೆಯಂತಹ ಕೆಲವು ಹೊರಗಿಂದ ಬಂದ ಪ್ರೊಟೀನುಗಳನ್ನೋ ಮದ್ದುಗಳನ್ನೋ ಚುಚ್ಚಿದಾಗ ಏಳುವ ಅತಿ ಸೂಕ್ಷ್ಮತೆಯ ಪ್ರತಿಕ್ರಿಯೆಯು.

ಅರನಾರಿ paralysis : ಒಂದು ಭಾಗದಲ್ಲಿ ಅರಿವಿಲ್ಲದಂತಾಗಿ, ಅಲುಗಾಡಿಸದಂತಾಗಿ ಬಿದ್ದಿರುವ ಸ್ಥಿತಿ.

ಇಸಬು eczema

ಉಡಿ ತದ್ದು herpes zoster : ಒಂದು ಬಗೆಯ ವಿಷಕಣದಿಂದೇಳುವ ಕೂರಾದ ಒಂದು ಅಂಟು ರೋಗ. ಬೆನ್ನು ಹುರಿಯ ಇಲ್ಲವೇ ತಲೆಯ ನರಗಳಲ್ಲಿ ಕೆಲವುಗಳ ಹಿಂದಣ ಬುಡಗಳ ನರಗಂಟುಗಳ ಉರಿತದಿಂದ ಮೈಮೇಲೆ ಒಂದೇ ಪಕ್ಕದಲ್ಲಿ ಬೊಬ್ಬೆಯೆದ್ದು ಉರಿಯುತ್ತಿರುವುದು.

ಉಪದಂಶ syphilis : ಯಾವುದಾದರೂ ಒಂದು ಅಂಗ, ಇಲ್ಲವೇ ಊತಕವನ್ನು ಬಾಧಿಸುವ ಹುಣ್ಣು, ಊತ, ಗಡ್ಡೆಗಳೇಳುವ, ಬೇರೂರುವ, ಅಂಟುವ ಒಂದು ಮೇಹ ರೋಗ.

ಉರಿತ inflammation : ಒಂದು ಅಂಗದ ಭಾಗಕ್ಕೆ ಯಾವ ರೀತಿಯಿಂದಲಾಗಲಿ ಅಪಾಯ ತಟ್ಟಿದಾಗ ಏಳುವ, ಅಲ್ಲಿನ ಊತಕ, ರಕ್ತನಾಳಗಳ ಪ್ರತಿಕ್ರಿಯೆ. ಇದರಿಂದ ಆ ಭಾಗದಲ್ಲಿ ಊತ, ಕೆಂಪೇರಿಕೆ, ಉರಿ, ಕಾವು, ಕೆಲಸಗೇಡೂ ಆಗುವುದು.

ಉಸುಕು ನೊಣ sand fly

ಊತಕ tissue : ಒಂದೇ ಬಗೆಯ ಜೀವಕಣಗಳೂ ಅವುಗಳ ನಡುವಣ ವಸ್ತುವೂ ಸೇರಿ ಒಂದುಗೂಡಿ, ಒಂದು ಗೊತ್ತಾದ ಕೆಲಸವನ್ನು ಮಾಡುವ ಅಂಗ ಭಾಗ.

ಊತಕಾಂತರ interstitial

ಊತಕುರಿತ cellulitis

ಒಗ್ಗದಿಕೆ allergy : ಯಾವುದಾದರೂ ಒಂದು ವಸ್ತು ಕೆಲವರ ಮೈಗೆ ಮಾತ್ರ ಒಗ್ಗದಿರುವಾಗ ಏಳುವ ಪ್ರತಿಕ್ರಿಯೆ.

ಒಣದೊಗಲು xeroderma

ಏಕಾಣುಜೀವಿ bacterium : ಹಲವು ರೂಪಗಳಲ್ಲಿರುವ, ಬಾಲವಿಲ್ಲದ, ಒಂಟಿ ಜೀವಕಣದ ವರ್ಗದ ಒಂದು ಸೂಕ್ಷ್ಮಜೀವಿ.

ಏಡಿಗಂತಿ cancer : ಮೈಯಲ್ಲಿ ಎಲ್ಲಾದರೂ ಸಹಜವಾಗಿರುವ ಜೀವಕಣಗಳ ಮಿತಿಗೆಟ್ಟ ವಿಷಮ ಬೆಳವಣಿಗೆ ಇಲ್ಲವೇ ಗಂತಿ. ಕಾರಣವಿಲ್ಲದೆ ಅಂಗಗಳೊಳಗೆಲ್ಲ ನುಗ್ಗಿ, ಹಾಲ್ರಸ, ರಕ್ತಗಳ ಮೂಲಕ ದೂರದ ಅಂಗಗಳಿಗೂ ಹರಡಿ ಅಲ್ಲಿಯೂ ಗಡ್ಡೆ ಬೆಳೆಯುತ್ತದೆ.

ಕಂಡರಕವಚುರಿತ tenosynovitis

ಕಂಠದುರಿತ cervicitis : ಗರ್ಭಕೋಶದ, ಯೋನಿಯೊಳಕ್ಕೆ ಚಾಚಿರುವ ದುಂಡನೆಯ ಕೆಳಭಾಗದ ಉರಿತ.

ಕಜ್ಜಿ scabies

ಕಣಕಾಲು leg

ಕನೀನಿಕೆ iris : ಕಣ್ಣುಗುಡ್ಡೆಯಲ್ಲಿ, ನಡುವೆ ಪಾಪೆಯಿರುವ ಕರಿಯ ತೆರೆಯಂತಿರುವ ಪರೆ.

ಕಲೆ scar

ಕ್ಷಯಾಣುಸಾರ tuberculin : ಕ್ಷಯದ ಸೋಂಕು ಒಬ್ಬನಲ್ಲಿ ಇರುವುದನ್ನು ಪತ್ತೆಹಚ್ಚಲು ಬಳಸುವ, ಸಾಮಾನ್ಯವಾಗಿ ಮಾನವನ ಬಗೆಯ ಕ್ಷಯ ರೋಗಾಣುವಿನಿಂದ ತಯಾರಿಸಿದ, ಕರಗುವ ಜೀವಕಣ ವಸ್ತು. ಚುಚ್ಚಿದ ಮೇಲೆ 48-96 ಗಂಟೆಗಳನಂತರ ಪ್ರತಿಕ್ರಿಯೆಯಿಂದ ಪತ್ತೆಯಾಗುತ್ತದೆ.

ಕಿರಣಣಬೇನೆ actinomycosis

ಕೀಲುರಿತ arthritis

ಕೀವುಗುಳ್ಳೆ furuncle

ಕುಂಡೆಹಡಕು sodomy : ಸಾಮಾನ್ಯವಾಗಿ ಇಬ್ಬರು ಗಂಡಸರ ನಡುವೆ ಗುದದ ಮೂಲಕ ನಡೆವ ಸಂಭೋಗ.

ಕುರು abscess

ಕುಷ್ಠ leprosy

ಕುಷ್ಠಾಣುಸಾರ lepromin : ಕುಷ್ಠರೋಗವನ್ನು ಪತ್ತೆಹಚ್ಚಲು ಬಳಸುವ, ಕುಷ್ಠ ಗಂತಿಯಿಂದ ತೆಗೆದ ಕುಷ್ಠರೋಗಾಣುಗಳ ರೋಧಜನಕ ಸಾರವಸ್ತು.

ಕೆಂಗಂದೆ ಕಿಗ್ಗಂಟು erythema nodosum
ಕೆಂಗಲೆಸುಂಡು psoriasis : ಕೆಂಪು ಇಲ್ಲವೇ ನಸುಗೆಂಪಿನ ಚುಕ್ಕೆ ಕಲೆಗಳ ಮೇಲೆ ಬೆಳ್ಳಿ ಬಿಳುಪಿನ ಹುರುಕುಗಳಿರುವ ಸಾಮಾನ್ಯ ಆನುವಂಶಿಕ ಚರ್ಮದುರಿತ.
ಕೊಂಕಿದ ಸಿರ varicose vein
ಕೋಡ್ಪರೆಯುರಿತ kepatitis : ಕಣ್ಣುಗುಡ್ಡೆಯ ಮುಂಭಾಗದಲ್ಲಿ ಗಾಜಿನಂತೆ ಸಿಲು ವಾಗಿರುವ ಪದರವಾದ ಕೋಡ್ಪರೆಯ ಉರಿತ.
ಕೋಶಿಕುರಿತ folliculitis
ಗಜ್ಜಲಿನ inguinal : ಹೊಟ್ಟೆಗೂ ತೊಡೆಗೂ ನಡುವಣ ಭಾಗದ
ಗಂಟಲುಮಾರಿ diphtheria : ಮೈಯಲ್ಲಿ ಎಲ್ಲಾದರೂ ಲೋಳೆಪರೆಯ ಮೇಲೆ, ಮುಖ್ಯವಾಗಿ ಗಂಟಲಲ್ಲಿ ಒಂದು ಹುಸಿಪರೆ ಬೆಳೆದು ಅದರಡಿಯಲ್ಲಿ ವಿಷ ತಯಾರಾಗಿ ಹರಡಿ, ತೀರ ಸುಸ್ತುಮಾಡುವ ಒಂದು ಅಂಟು ರೋಗ.
ಗಂಟು nodule
ಗಂಟುಮೂಗು rhinophyma : ಮೂಗು ಗಂಟುಗಂಟಾಗಿ ಅತಿಯಾಗಿ ಬೆಳೆದ, ಕೆಂಪೇರಿ, ರಕ್ತಗೂಡಿ, ಮೈಜಿಡ್ಡು ಸುರಿವ ಶಾಶ್ವತ ಸ್ಥಿತಿ.
ಗಂಡಮಾಲೆ scrofula : ಸಾಮಾನ್ಯವಾಗಿ ಕೊರಳಲ್ಲಿ ಹಾಲ್ರಸ ಗ್ರಂಥಿಗಳು ಕ್ಷಯರೋಗ ದಿಂದ ಊದಿ ಉರಿತವಾಗಿರುವ ಒಂದು ಮಾದರಿಯ ಹಳಗಾಲದ ಹೆಸರು.
ಗಂತಿ tumour : ಮೈಮೇಲೋ ಒಳಗೋ ಗೊತ್ತಾದ ಕೆಲಸವಿಲ್ಲದೆ ತಾನಾಗಿ ಬೆಳೆ ದಿರುವ ಗಡ್ಡೆ. ಇದು ಸಾಧುವಾಗಿ ಇಲ್ಲವೇ ವಿಷಮ(ಮಾರಕ)ವಾಗಿ ಇರಬಹುದು.
ಗಣಜಿಲೆ chicken-pox
ಗುರಾಣಿಕ thyroid : ಕೊರಳಿನ ಮುಂಭಾಗದಲ್ಲಿ ಉಸಿರ್ನಾಳದ ಮೇಲ್ಗಡೆ ಇರುವ ಒಂದು ಒಳಸುರಿಕ ಗ್ರಂಥಿ.
ಗುಲಾಬಿಕ rosacea
ಗುಂಜೆಲು pubis : ಹೊಟ್ಟೆಗೂ ಜನನಾಂಗಕ್ಕೂ ನಡುವೆ ಗುಂಜುಗೂದಲಿರುವ ಭಾಗದ ಎಲುಬು.
ಗೋರುಣ್ಣು erosion
ಚರ್ಮದುರಿತ dermatitis
ಚುಕ್ಕೆಬೇನೆ pinta : ಬಣ್ಣಕಳೆದ ಚುಕ್ಕೆಗಳೋ ಮಚ್ಚೆಗಳೋ ಇರುವ ಒಂದು ಬೇನೆ.
ಜನನಾಂಗ genital
ಜನಿಕ gene : ಭೌತಿಕ ಮತ್ತು ಮಾನಸಿಕ ಆನುವಂಶಿಕ ಗುಣಗಳನ್ನು ಹೆತ್ತವರಿಂದ ಪೀಳಿಗೆ ಯವರಿಗೆ ಸಾಗಿಸುವ, ಜೀವಕಣಗಳ ಬಣ್ಣದಂಡದಲ್ಲಿ ವಿಶಿಷ್ಟ ಜಾಗದಲ್ಲಿರುವ ವಿಶೇಷ ವಸ್ತು.
ಜಲೋದರ ascites
ಜೀವವಿರೋಧಕ antibiotic : ಸೂಕ್ಷ್ಮಜೀವಿಗಳನ್ನು ಸಾಯಿಸುವ ಇಲ್ಲವೇ ಅವುಗಳ ಬೆಳವಣಿಗೆಯನ್ನೇ ಅಣಗಿಸುವ, ನೈಸರ್ಗಿಕವಾಗಿ ಜೀವಿಗಳಿಂದ ಪಡೆದ, ಇಲ್ಲವೇ ಕೃತಕವಾಗಿ ತಯಾರಾದ ಒಂದು ರಸಾಯನಿಕ ಮದ್ದು.

ತುರಿ impetigo
ತುರಿಸುವ itching
ತುರುಚಿಕೆ urticaria : ತುರುಚಿ ಸೊಪ್ಪಿಗೆ ಚರ್ಮ ತಾಕಿದಾಗ ಏಳುವಂತೆ, ವಿಪರೀತ ಕೆರೆತದೊಂದಿಗೆ ಕೆಂಪೇರಿ, ಉರಿಯುವ ಗಾದರಿ, ದದ್ದುಗಳು ಏಳುವ ಚರ್ಮದ ರಕ್ತ ನಾಳಗಳ ಪ್ರತಿಕ್ರಿಯೆ.
ತೂತಡಕು stricture : ಅನ್ನನಾಳ, ಕರುಳು, ಮೂತ್ರನಾಳ ಮುಂತಾದ ನಾಳಗಳ ಒಳವ್ಯಾಸ ಕಿರಿಯದಾಗಿ, ತೂತು ಅಡಕವಾಗಿ ಅಡ್ಡಿಯಾಗಿರುವ ಸ್ಥಿತಿ.
ತೊಡೆವಾಳೆ bubo : ಗಜ್ಜಲಿನಲ್ಲಿ, ಉರಿತವಾಗಿ ಊದಿಕೊಂಡು ನೋಯುವ ಹಾಲ್ರಸ ಗ್ರಂಥಿಗಳು.
ತೊನ್ನು leucoderma : ಕೇವಲ ಚರ್ಮ ಬೆಳ್ಳಗಿರುವುದಕ್ಕೂ ಕುಷ್ಠಕ್ಕೂ ಸಂಬಂಧವಿಲ್ಲ. ಅಂಟುರೋಗವಲ್ಲ.
ದದ್ದು rash
ದಂಡಾಣುಜೀವಿ bacillus : ದಂಡಾಕಾರದ ಒಂಟಿ ಅಣುವಿನ ಒಂದು ಸೂಕ್ಷ್ಮಜೀವಿ.
ದಂಶಕ rodent
ದಿಂಚೀಲುರಿತ bursitis : ಹೆಗಲು, ಮಂಡಿ, ಕೈಗಳಲ್ಲಿರುವಂತೆ, ಎದ್ದು ಕಾಣುವ ಮೂಳೆಗೂ ಸ್ನಾಯು ಇಲ್ಲವೇ ಕಂಡರಕ್ಕೂ ನಡುವೆ ಇರುವ ಮೆತ್ತೆಯಂತಹ ನೀರು ಚೀಲದ ಉರಿತ.
ದುಗ್ಧನಾಳ lymphatic
ಧ್ವನಿನಾಳ larynx
ನರದುರಿ neuralgia
ನರೂಲಿ wart
ನಿಜಚರ್ಮ dermis
ನಿದಾನ diagnosis
ನೆಮ್ಮದಿಕಾರಕ tranquillizer
ನೊಣಮುಸುರಿಕೆ myasis : ಮೈಯೊಳಗೋ ಲೋಳ್ಪರೆಗಳ ಮೇಲೋ ನೊಣಗಳು ಮೊಟ್ಟೆಯಿಟ್ಟು ಮರಿಗಳಾದ ಬೇನೆ.
ಪರಪಿಂಡಿ parasite : ತನ್ನ ಪುಷ್ಟಿಗಾಗಿ, ಇನ್ನೊಂದು ಜೀವಿಯನ್ನು ಆಶ್ರಯಿಸಿರುವ ಒಂದು ಜೀವಿ.
ಪರಮಾ gonorrhoea : ಜನನಾಂಗಗಳ ಲೋಳೆಪರೆಗೆ ಹತ್ತುವ ಮೇಹದ ಒಂದು ವಿಶಿಷ್ಟ ಸೊಂಕು ರೋಗ. ಈ ರೋಗದಲ್ಲಿ ಲೋಳೆ ಸುರಿತ ಒಂದು ಲಕ್ಷಣ.
ಬಾಚಿಹಲ್ಲು incisor
ಬಿಳಿಚತನ albinism : ಚರ್ಮ, ಕೂದಲು, ಕಣ್ಣು, ಇವುಗಳಲ್ಲಿ ಪೂರ್ತಿ ಇಲ್ಲವೇ ಅರೆಬರೆಯಾಗಿ ಎಂದಿನ ಬಣ್ಣವಿಲ್ಲದಂತಾಗಿರುವ ಅಸಹಜವಾದರೂ ರೋಗವಲ್ಲದ ಸ್ಥಿತಿ.

ಬಿಳಿಚರ್ಮ vitiligo ತೊನ್ನು
ಬೊಬ್ಬೆ bleb, bulla
ಬೋಳುತಲೆ alopecia
ಭಗಂದರ fistula : ಒಂದು ನಾಳ ಇಲ್ಲವೇ ಕೋಶದಿಂದ ಹೊರಕ್ಕೋ ಇನ್ನೊಂದು ಕೋಶದೊಳಕ್ಕೋ ಚಾಚಿ ಸಂಬಂಧಿಸಿರುವ ಅಸಹಜವಾದ ನಾಳರೂಪದ ದಾರಿ. ಬೊರಿಗೆ.
ಮಚ್ಚೆ mole, nevus
ಮಣಿ glans : ಶಿಶ್ನದ ಮುಂತುದಿ
ಮರಿಕೀಟ larva
ಮೀನ್ದೊಗಲು ichthyosis
ಮುಂದೊಗಲು prepuce : ಗಂಡಸಿನ ಲಿಂಗದ ಮುಂದಿನ ತುದಿಯನ್ನು ಮುಚ್ಚಿರುವ, ಹಿಂದಕ್ಕೆ ಸರಿಸಬಹುದಾದ ಚರ್ಮದ ಮಡಿಕೆ.
ಮುಂದೊಗಲುಬಿಗಿತ phimosis : ಲಿಂಗದ ಮುಂದೊಗಲನ್ನು ಹಿಂದಕ್ಕೆ ಸರಿಸಲಾಗದಂತಿರುವುದು.
ಮುಂದೊಗಲುಹಿಂಬಿಗಿತ paraphimosis : ಲಿಂಗದ ಮುಂದೊಗಲು ಹಿಂದೆ ಸರಿದು ಕವುಚಿ ಹಿಡಿದಿರುವುದರಿಂದ ಮುಂಭಾಗ ಊದಿಕೊಂಡಿರುವುದು.
ಮೂತ್ರಗುಳಿಯುರಿತ pyelitis
ಮೆತುಚಾಲಕ lubricant : ಚಲಿಸುವಾಗ ಒಂದಕ್ಕೊಂದು ಉಜ್ಜುವುದನ್ನು ತಪ್ಪಿಸಿ ಸರಾಗವಾಗಿ ಆಡುವಂತೆ ಹಚ್ಚುವ ವಸ್ತು.
ಮೇಲ್ಪೊರೆ epithelium
ಮೇಹ venereal
ಮೇಹದುಣ್ಣು chancre : ಉಪದಂಶ ಮೇಹ ರೋಗದಲ್ಲಿ ಜನನಾಂಗದ ಮೇಲೆ ಮೊದಲು ಏಳುವ ಗಟ್ಟಿಯಾಗಿರುವ ನೋವಿಲ್ಲದ ಹುಣ್ಣು.
ಮೇಹಮೆದುಣ್ಣು chancroid : ಅತಿಯಾಗಿ ಸೋಂಕು ಅಂಟಿಸುವ, ಉಪದಂಶದ್ದಲ್ಲದ, ಒಂದು ಮೇಹ ರೋಗದ ಹುಣ್ಣು. ಮೆತ್ತಗಿರುವ ಈ ಹುಣ್ಣಿಗೆ ಹಿಮೊಫಿಲಸ್ ಡುಕ್ರಿಯೈ ದಂಡಾಣುಜೀವಿ ಕಾರಣ.
ಮೊಡವೆ acne
ಮೈಜಿಡ್ಡು sebum
ಯೋನಿಗೊಲ್ಲಿಯುರಿತ vulvovaginitis
ರಕ್ತಜನಿತ haematogenous
ರಾಜಕುರು carbuncle : ಗಟ್ಟಿ ಚರ್ಮದ ಆಳದಲ್ಲಿ ಕೀವು ತುಂಬಿ ಹರಡುವ ಒಂದು ತೆರನ ದೊಡ್ಡ ಕುರು. ಬೆನ್ನುಫಣಿ
ರೇತಸ್ಸಿನ ಚೀಲ seminal vesicle

ಲೇಪದ್ರವ lotion : ಒಂದು ಭಾಗಕ್ಕೆ ಸವರುವ ಇಲ್ಲವೇ ನೆನೆಸುವ ಒಂದು ದ್ರವ ಮದ್ದು ತಯಾರಿಕೆ ವಸ್ತು.

ವಾಳೆ bubo : ಕಂಕುಳಲ್ಲೋ ಗಜ್ಜಲಲ್ಲೋ ಉರಿತವಾಗಿ ಊದಿಕೊಂಡು ನೋಯುವ, ಹಾಲ್ರಸ ಗ್ರಂಥಿಗಳು.

ವಿಷಕಣ virus : ಸಾಧಾರಣ ಸೂಕ್ಷ್ಮದರ್ಶಕದಲ್ಲಿ ಕಾಣಲಾಗದ, ಸೋಸಬಹುದಾದ ಜೀವಕಣಗಳೊಳಗೆ ನೆಲೆಸಿ ಗುಣಿತವಾಗುವ ಸೂಕ್ಷ್ಮರೋಗಾಣು.

ಸರಳ ಪಾಮು herpes simplex : ಒಂದು ವಿಷಕಣದ ಅಂಟು ರೋಗ. ಸಾಮಾನ್ಯವಾಗಿ ಬಾಯಿ ಇಲ್ಲವೇ ಜನನಾಂಗಗಳಲ್ಲಿ, ಲೋಳೆಪರೆ ಚರ್ಮವನ್ನು ಸೇರುವೆಡೆಗಳಲ್ಲಿ ಮತ್ತೆ ಮತ್ತೆ ಸಣ್ಣಗುಳ್ಳೆ, ಬೊಬ್ಬೆಗಳು ಏಳುತ್ತಿರುವಿಕೆ.

ಸಲಿಂಗಕಾಮ homosexuality : ಗಂಡಸು ಗಂಡಸಿನೊಂದಿಗೂ, ಹೆಂಗಸು ಹೆಂಗಸಿನೊಂದಿಗೂ ಲೈಂಗಿಕವಾಗಿ ಆಕರ್ಷವಾಗುವಿಕೆ.

ಸುಸ್ತುಧಕ್ಕೆ shock : ಮೈಯಲ್ಲಿನ ಊತಕಗಳಿಗೆ ಆಮ್ಲಜನಕ ಪೂರೈಕೆಯಲ್ಲೂ ಗುಂಡಿಗೆಗೆ ರಕ್ತ ಹಿಂದಿರುಗುವುದರಲ್ಲೂ ತೀವ್ರ ಕೊರೆಯಾಗಿರುವ ವಿಷಮ ಸ್ಥಿತಿ.

ಸೂಕ್ಷ್ಮದರ್ಶಿ microscope

ಹಗರು dandruff : ತಲೆಯನ್ನು ಕೆರೆದಾಗ ಬಿಳಿಯ ಒಣಕಲ ಹುರುಪೆ, ಹೊಟ್ಟು ಉದುರುವಿಕೆ, ಮೈಜಿಡ್ಡು ಸುರಿತವೂ ಹೆಚ್ಚಿರುವುದು.

ಹಜಾಮ ತುರಿ barber's itch

ಹರಡು ankle

ಹರಳುಗಂತಿ granuloma : ಹಾಲ್ರಸಕಣಗಳ ಇಲ್ಲವೇ ಮೇಲ್ಪರೆಯ ಜೀವಕಣಗಳ ಗಂತಿ ಇಲ್ಲವೇ ಬೆಳೆತ.

ಹಸುಗೂಸು infant

ಹಾಲಂದ emulsion : ಒಂದರಲ್ಲೊಂದು ಕರಗದಿರುವ ಎರಡು ದ್ರವಗಳು, ಹಾಲಿನಲ್ಲಿ ಬೆಣ್ಣೆ ನೀರು ಇರುವಂತೆ, ಮಿಳಿತವಾಗಿರುವಿಕೆ.

ಹಾಲ್ರಸಕಣಗಂತಿ lymphogranuloma

ಹುದುಗು yeast

ಹುಣ್ಣು ulcer

ಹುರುಕು prurigo

ಹುಲ್ಲುರಿ wart

ಹುಳುಕಡ್ಡಿ ringworm

ಹುಳುಕಾಟ formication

ಹೇನ್ತುಂಬಿಕೆ pediculosis

ಹೊರಚರ್ಮ epidermis

ಆರೋಗ್ಯ ಮಾಲೆಯ ಇತರ ಪುಸ್ತಕಗಳು

1.	ವೃದ್ಧಾಪ್ಯದ ರೋಗಗಳು	...	ಡಾ. ಪಿ. ಎಸ್. ಶಂಕರ್
2.	ಸ್ತ್ರೀ ರೋಗಗಳು	...	ಡಾ. ಶಾಂತಾ ಪ್ರಭುಶಂಕರ್
3.	ಶಸ್ತ್ರವೈದ್ಯ	...	ಮೂಲ: ಡಾ. ಕೆ. ಕೃಷ್ಣಮೂರ್ತಿ ಅನು : ಡಾ. ಡಿ. ಎಸ್. ಶಿವಪ್ಪ
4.	ಸಮಾಜ ಆರೋಗ್ಯ	...	ಡಾ. ಎಸ್. ವಿ. ರಾಮರಾವ್
5.	ಶ್ವಾಸಕೋಶದ ಕಾಯಿಲೆಗಳು	...	ಡಾ. ವೈ. ರಾಜಶೇಖರ್
6.	ಪಿಟ್ಯೂಟರಿ ಗ್ರಂಥಿ ಮತ್ತು ಅದರ ರೋಗಗಳು	...	ಡಾ. ಎಂ. ಬಸವರಾಜು
7.	ಬಂಜೆತನ	..	ಮೂಲ : ಡಾ. ಸುಲೋಚನ ಗುಣಶೀಲ ಅನು : ಡಾ. ಡಿ. ಎಸ್. ಶಿವಪ್ಪ
8.	ಲೈಂಗಿಕ ವಿಜ್ಞಾನ	...	ಡಾ. ಜಿ. ಸಿದೇನೂರ
9.	ದೇಹರಚನೆ	...	ಡಾ. ಎಂ. ದಯಾಕರ
10.	ಮೂತ್ರ ರೋಗಗಳು	...	ಡಾ. ಎಂ. ಬಸವರಾಜೆ ಅರಸ್
11.	ಕ್ಯಾನ್ಸರ್	...	ಡಾ. ಡಿ. ಶಂಕರರಾಜು
12.	ದಂತವಕ್ರತೆ	...	ಡಾ. ಶಿವರತ್ನ ಸಿ. ಸವದಿ
13.	ವೈದ್ಯರನ್ನು ಯಾವಾಗ ಕಾಣಬೇಕು ?	...	ಡಾ. ಡಿ. ಎಸ್. ಶಿವಪ್ಪ
14.	ಮೊಳೆರೋಗ ಮತ್ತು ಗುದದ ಇತರ ಕಾಯಿಲೆಗಳು	...	ಮೂಲ: ಡಾ॥ ಬಿ. ಎನ್. ಬಾಲಕೃಷ್ಣರಾವ್ ಅನು : ಡಾ॥ ಡಿ. ಎಸ್. ಶಿವಪ್ಪ
15.	ಜೀವಿರೋಧಕಗಳು	...	ಡಾ. ಎಸ್. ಕೆ. ಹರವೆ